ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾಂತ ರತ್ನಮಾಲಾ.

ದ್ವಿತೀಯ ರತ್ನವು — ದ್ವಿತೀಯ ಸಂಚಿಕೆ.

ಶ್ರೀಮನ್ನಿಗಮಾಂತ ಮಹಾದೇಶಿಕ ಪ್ರಣೀತ

ಶ್ರೀಮದ್ರಹಸ್ಯತ್ರಯಸಾರದ

ಉಪೋದ್ಘಾತಾಧಿಕಾರಃ ಪ್ರಥಮಃ

ಸಾರನಿಷ್ಕರ್ಷಾಧಿಕಾರೋ ದ್ವಿತೀಯಃ

ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟರು

ಸಿ. ಯಂ. ವಿಜಯರಾಘವಾಚಾರ್ಯರಿಂದ

ರಚಿಸಲ್ಪಟ್ಟ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳೂ

ಬೆಂಗಳೂರು ಸಿಟಿ:

ಯೂನಿವರ್ಸಲ್ ಪವರ್ ಪ್ರೆಸ್

1927

ಕ್ರಯ ೯ ಆಣೆಗಳು.

ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾಂತ ರತ್ನಮಾಲಾ.

ದ್ವಿತೀಯ ರತ್ನವು — ದ್ವಿತೀಯ ಸಂಚಿಕೆ.

ಶ್ರೀಮನ್ನಿಗಮಾಂತ ಮಹಾದೇಶಿಕ ಪ್ರಣೀತ

ಶ್ರೀಮದ್ರಹಸ್ಯತ್ರಯಸಾರದ

ಉಪೋದ್ಘಾತಾಧಿಕಾರಃ ಪ್ರಥಮಃ
ಸಾರನಿಷ್ಕರ್ಷಾಧಿಕಾರೋ ದ್ವಿತೀಯಃ

ವಿದ್ಯಾಭ್ಯಾಸದ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟರು

ಸಿ. ಯಂ. ವಿಜಯರಾಘವಾಚಾರ್ಯರಿಂದ

ರಚಿಸಲ್ಪಟ್ಟ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳೂ

ಬೆಂಗಳೂರು ಸಿಟಿ:
ಯೂನಿವರ್ಸಲ್ ಪವರ್ ಪ್ರೆಸ್

1927

ಕ್ರಯ ೯ ಅಣೆಗಳು.

ಯೂನಿವರ್ಸಲ್ ಪವರ್ ಪ್ರೆಸ್
ಸುಲ್ತಾ೯ಪೇಟೆ, ಬೆಂಗಳೂರು ಸಿಟಿ.

ಶ್ರೀಮತೇ ರಾಮಾನುಜಾಯನಮಃ

ಶ್ರೀಮತೇ ನಿಗಮಾಂತಮಹಾದೇಶಿಕಾಯನಮಃ

ಶ್ರೀಮತೇ ಶ್ರೀನಿವಾಸಮಹಾದೇಶಿಕಾಯನಮಃ



ಶ್ರೀಮದ್ರಹಸ್ಯತ್ರಯಸಾರೇ

ಉಪೋದ್ಘಾತಾಧಿಕಾರಃ

ಶ್ರೀಮಾನ್ವೇಂಕಟನಾಥಾರ್ಯಃ ಕವಿತಾರ್ಕಿಕ ಕೇಸರೀ ।
ವೇದಾಂತಾಚಾರ್ಯವರ್ಯೋ ಮೇ ಸನ್ನಿಧತ್ತಾಂ ಸದಾಹೃದಿ ॥

ಮೂ॥ ಆಭಗವತ್ತಃ ಪ್ರತಿಥಾಮನಘಾಮಾಚಾರ್ಯ ಸಂತತಿಂ ವಂದೇ ।
ಮನಸಿಮಮಯತ್ಪ್ರಸಾದಾದ್ವಸತಿ ರಹಸ್ಯತ್ರಯಸ್ಯ ಸಾರೋಯಂ ॥

ಈ ಅಧಿಕಾರದಲ್ಲಿ ಮುಮುಕ್ಷುವಾದವನು ಏನನ್ನು ತಿಳಿಯತಕ್ಕದ್ದೆಂಬಂಶವು ಈ ಗ್ರಂಥದಲ್ಲಿ ಜಿಜ್ಞಾಸಿಸಲ್ಪಡುತ್ತೆಂಬುವದು ಸೂಕ್ಷ್ಮವಾಗಿ ಇಲ್ಲಿ ಹೇಳಲ್ಪಟ್ಟಿರುವದರಿಂದ ಇದಕ್ಕೆ **ಉಪೋದ್ಘಾತಾಧಿಕಾರವೆಂದು** ಹೆಸರು.

ತಾವು ಬರೆಯುವ ಅಮೋಘವಾದ ಗ್ರಂಥವು ಆರಂಭಿಸಲ್ಪಟ್ಟು ನಿರ್ವಿಘ್ನವಾಗಿ ಪರಿಸಮಾಪ್ತಿಯನ್ನು ಹೊಂದುವದಕ್ಕೂ, ಮುಖ್ಯವಾಗಿ ಸಕಲ ಕಾರ್ಯಾರಂಭದಲ್ಲೂ ಗುರುಪಙ್ಕ್ತಿಭಜನವು ಆವಶ್ಯಕವೆಂಬುವದನ್ನು ತೋರುವದಕ್ಕೂ, ಈ ಉಪೋದ್ಘಾತಾಧಿಕಾರದಲ್ಲಿ ಆದಿಗು

ವಾದ ಪರಮಪುರುಷನಿಂದ ಹಿಡಿದು ಸ್ವಾಚಾರ್ಯಪರ್ಯಂತವಾಗಿ ಸಮಸ್ತ ಆಚಾರ್ಯಮಂಡಲಿಗೂ ಪ್ರಣಾಮವನ್ನೆಸಗುತ್ತಾರೆ.

ಈ ಗುರುಪರಂಪರಾನುಸಂಧಾನವನ್ನು ಎರಡು ವಿಧವಾಗಿ ಮಾಡುವ ಕ್ರಮವುಂಟು.—ಪರಮಪುರುಷನಿಂದ ಹಿಡಿದು ಸ್ವಾಚಾರ್ಯಪರ್ಯಂತ ಪ್ರಣಾಮ ಸಮರ್ಪಿಸುವ ಸಂಪ್ರದಾಯವೂ ಉಂಟು; ಅಥವಾ ಸ್ವಾಚಾರ್ಯರಿಂದುಪಕ್ರಮಿಸಿ ಲೋಕಗುರುವಿನ ವರಿವಿಗೂ ಪ್ರಣಾಮಮಾಡುವ ಸಂಪ್ರದಾಯವೂ ಉಂಟು. ಈ ಪ್ರಥಮ ಕ್ರಮವು ನಮ್ಮ ಸಂಪ್ರದಾಯದ ಮಠಗಳಲ್ಲಿ ನೆಲಗೊಂಡಿವೆ. ಗ್ರಂಥಕಾಲಕ್ಷೇಪ, ಆಚಾರ್ಯೋಪದೇಶಕಾಲದಲ್ಲಿ ಈ ಎರಡನೇ ಕ್ರಮವೇ ಸಾಧಾರಣವಾಗಿ ವಾಡಿಕೆಯಲ್ಲಿರುತ್ತದೆ.

ಆದುದರಿಂದ ಶಾಸ್ತ್ರಪ್ರಮಾಣವನ್ನನುಸರಿಸಿ ಗುರುಪಙ್ತಿಭಜನರೂಪವಾದ "ಆಭಗವತ್ತಃ" ಎಂಬ ಮಂಗಳಶ್ಲೋಕವನ್ನು ಅನುಗ್ರಹಿಸುತ್ತಾರೆ.

ಅರ್ಥ—ಪ್ರಥಿತಾಂ - ಕಲ್ಯಾಣಗುಣಗಳಿಂದುಂಟಾದ ಪ್ರಸಿದ್ಧಿಯುಳ್ಳ, **ಅನಘಾಂ** - ದೋಷರಹಿತವಾದ, ನಿರ್ದುಷ್ಟವಾದ, **ಆಚಾರ್ಯಸಂತತಿಂ** - ಆಚಾರ್ಯಸಮೂಹವನ್ನು, ತಮ್ಮ ಉಪಕಾರಕರಾದ ಆಚಾರ್ಯರು, ಪ್ರಾಚಾರ್ಯರು, ಅವರ ಆಚಾರ್ಯರು ಹೀಗೆ ಕ್ರಮವಾಗಿ ಆಚಾರ್ಯಪರಂಪರೆಯನ್ನು, **ಆ ಭಗವತ್ತಃ** - ಹೇಯಪ್ರತ್ಯನೀಕನಾಗಿ ಷಾಡ್ಗುಣ್ಯಪರಿಪೂರ್ಣನಾದ ಸರ್ವೇಶ್ವರನ ವರಿವಿಗೂ, **ವಂದೇ** - ಪ್ರಣಾಮವನ್ನು ಸಮರ್ಪಿಸುವೆನು. ಹೀಗೆ ಭಗವಂತನನ್ನೂ ಭಾಗವತರಾದ ಆಚಾರ್ಯರನ್ನೂ ಒಟ್ಟುಸೇರಿಸಿ ಪ್ರಣಾಮಮಾಡುವದರಭಿಪ್ರಾಯವೇನೆಂದರೆ, ಭಾಗವತಕೃಪೆಯು ಭಗವತ್ಕೃಪೆಗೇನೂ ಕಮ್ಮಿಯಾದುದಲ್ಲವೆಂಬ ಭಾವವು. ಏಕೆಂದರೆ ಸ್ವಾಮಿಯು ಕಲ್ಯಾಣಗುಣಗಳುಳ್ಳವನಾದುದರಿಂದ ಹೇಗೆ "ಪ್ರಥಿತನೋ" ಮತ್ತು ಹೇಯಗುಣರಹಿತನಾದುದರಿಂದ "ಅನಘನೋ" ಹಾಗೆಯೇ ನಮ್ಮ ಆಚಾರ್ಯರುಗಳೂ ಕಲ್ಯಾಣಗುಣವಿಶಿಷ್ಟರಾಗಿ ಹೇಯಗುಣರಹಿತರಾಗಿ ನಿರ್ದುಷ್ಟರಾ

ಗಿರುವದರಿಂದ ಸ್ವಾಮಿಯೊಂದಿಗೆ ಸಮಾನರೇ ಎಂಬ ಭಾವವು. ಪ್ರಣಾಮಮಾಡಿದುದರ ಫಲಪ್ರಾಪ್ತಿ ಏನೆಂದರೆ, ತಿಳಿಸುತ್ತಾರೆ.

ಯತ್ಪ್ರಸಾದಾತ್ - ಯಾವ ಪ್ರಸಿದ್ಧನಾದ ಪರಮಾತ್ಮನನ್ನು ಹಿಡಿದು ತಮ್ಮ ಆಚಾರ್ಯಪರ್ಯಂತ ಸೇರಿದ ಗುರುಪರಂಪರೆಯ ಅನುಗ್ರಹದಿಂದ, **ಮಮ** - ನನ್ನ, **ಮನಸಿ** - ಮನಸ್ಸಿನಲ್ಲಿ, **ರಹಸ್ಯತ್ರಯಸ್ಯ** - ಮೂಲಮಂತ್ರ, ದ್ವಯಮಂತ್ರ, ಚರಮಶ್ಲೋಕಗಳೆಂಬ ಮೂರು ರಹಸ್ಯಗಳ, **ಅಯಂ** - ಈ ಅಂದರೆ ಮುಂದೆ ತಾವು ಬರಿಯುವ, **ಸಾರಃ** - ಸ್ವಾರಸ್ಯವನ್ನು ಪ್ರದರ್ಶನಮಾಡುವ ಗ್ರಂಥವು, **ವಸತಿ** - ನೆಲಗೊಂಡಿರುತ್ತದೆಯೋ; ಅಂದರೆ ತಾವು ಉಪಾಸಿಸುವ ಹಯಗ್ರೀವಸ್ವಾಮಿ ಮತ್ತು ಆಚಾರ್ಯರು ಇವರುಗಳ ಕೃಪಾಬಲದಿಂದ, ರಹಸ್ಯತ್ರಯಸಾರವೆನಿಸಿ, ಈ ಮೂರು ಮಂತ್ರಗಳಲ್ಲಿ ಅಡಗಿರುವ ಅಮೋಘಾಭಿಪ್ರಾಯಪ್ರದರ್ಶಕರೂಪವಾದ ಗ್ರಂಥವು ತಮ್ಮ ಮನಸ್ಸಿನಲ್ಲಿ ನೆಲಗೊಂಡಿತೆಂಬ ಭಾವವು.

"**ಪಙ್ಕ್ತಿರಸ್ಮದ್ಗುರೂಣಾಂ**" "ತಮ್ಮ ಗುರುಗಳ ಪಙ್ಕ್ತಿಯು" ಎಂಬ ಕೃತಜ್ಞತಾ ಭಾವದಿಂದ ಸ್ತುತಿಸಿದುದರಿಂದ ತಮಗೆ ಜ್ಞಾನೋತ್ಪತ್ತಿಯುಂಟಾಯಿತು, ಅದರೊಂದಿಗೆ ಇನ್ನೊಂದು ಫಲವೂ ದೊರೆಯಿತು. ಅದೇನೆಂದರೆ ಈ " ಶ್ರೀಮದ್ರಹಸ್ಯತ್ರಯಸಾರ "ವೆಂಬ ಗ್ರಂಥನಿರ್ಮಾಣದ ಸಾಮರ್ಥ್ಯವೂ, ಇದೂ ಆ ಗುರುಪಙ್ಕ್ತಿಭಜನದಿಂದಲೇ ದೊರೆಯಿತು ಎಂಬ ಭಾವವು. " ರಹಸ್ಯತ್ರಯಸ್ಯಸಾರೋಽಯಂ" ಎಂಬುವದರಿಂದ ಈ ಗ್ರಂಥದ ವಿಷಯವು ರಹಸ್ಯತ್ರಯದ ಅಮೋಘಾರ್ಥಗಳ ಉಪಪಾದನವೆಂಬುವದಾಗಿಯೂ, ಅದಕ್ಕೆ ಅಧಿಕಾರಿಯು ಅವುಗಳನ್ನು ತಿಳಿಯಬೇಕೆಂಬಭಿಲಾಷಾಯುಕ್ತನೆಂಬದಾಗಿಯೂ, ಅದನ್ನು ಚನ್ನಾಗಿ ತಿಳಿದು ಅದರಿಂದುಂಟಾಗುವ ಮೋಕ್ಷಪ್ರಾಪ್ತಿಯೇ ಪ್ರಯೋಜನವೆಂಬದಾಗಿಯೂ ಹೇಳಿದಂತಾಯಿತು. " **ಸಾರೋಽಯಂ** " ಎಂಬ " ಅಯಂ " ಶಬ್ದಪ್ರಯೋಗವು ತಮ್ಮ ಗ್ರಂಥವು ತುಂಬಾ ಅತಿಶಯವನ್ನು ಹೊಂದಿ ಸಾರವತ್ತಾದುದಾಗಿ ರಹಸ್ಯಾರ್ಥಗಳನ್ನೆಲ್ಲಾ ಕನ್ನಡಿಯಹಾಗೆ ತೋರಿಸುವ ಈ ಗ್ರಂಥದ ಆರಂಭವು, ಆದಿಗುರುವು ಮೊದಲುಗೊಂಡು

ತಮ್ಮ ಆಚಾರ್ಯರವರ ವರಿವಿಗೂ ಇರುವ ಗುರುಸಂತತಿಯ ಕೃಪಾಪ್ರಭಾವದಿಂದಲೇ, ಎಂಬುವದನ್ನು ಸೂಚಿಸುತ್ತದೆ.

ಈ ರಹಸ್ಯತ್ರಯಸಾರದಲ್ಲಿ ನಾಲ್ಕು ಭಾಗಗಳೂ ೩೨ ಅಧಿಕಾರಗಳೂ ಇವೆ. ಅವುಗಳಲ್ಲಿ ಮೊದಲನೇ ಭಾಗದಲ್ಲಿ ೨೨ ಅಧಿಕಾರಗಳಿಂದ ಮುಮುಕ್ಷುವು ಮೂರು ರಹಸ್ಯಗಳಲ್ಲೂ ತಿಳಿಯತಕ್ಕ ವಿಷಯಗಳಾವುವೆಂಬುದು ಉಪಪಾದಿಸಲ್ಪಟ್ಟದೆ. ಎರಡನೇ ಭಾಗದಲ್ಲಿ ೪ ಅಧಿಕಾರಗಳಿಂದ ಮೇಲೆ ಹೇಳಿದವುಗಳಿಗೆ ಉಂಟಾಗಬಹುದಾದ ಆಕ್ಷೇಪಗಳು ನಿರಸನಮಾಡಲ್ಪಟ್ಟು ಆ ಅಭಿಪ್ರಾಯಗಳೇ ಸ್ಥಿರೀಕರಣಮಾಡಲ್ಪಟ್ಟವೆ. ಮೂರನೇ ಭಾಗದಲ್ಲಿ ಮೂರು ಅಧಿಕಾರಗಳಿಂದ ಈ ಮೂರು ರಹಸ್ಯಗಳ ಪದಯೋಜನಾಕ್ರಮದಿಂದ ಅರ್ಥಸ್ವಾರಸ್ಯಗಳು ಉಪಪಾದಿಸಲ್ಪಟ್ಟವೆ. ನಾಲ್ಕನೇ ಭಾಗದಲ್ಲಿ ಸಂಪ್ರದಾಯಕ್ರಮವಾದ ಆಚಾರ್ಯಕೃತ್ಯ ಶಿಷ್ಯಕೃತ್ಯಗಳು ಸೂಚಿಸಲ್ಪಟ್ಟು ಗ್ರಂಥ ಸಮಾಪ್ತಿಮಾಡಲ್ಪಟ್ಟರುತ್ತದೆ ಈ ಶ್ಲೋಕದ ಉತ್ತರಾರ್ಧದಿಂದ ಈ ಎಲ್ಲಾ ಭಾಗಗಳೂ ತೋರಿಬರುತ್ತವೆ. "**ವಸತಿ**" ಎಂಬುವದರಲ್ಲಿ ಸ್ಥಿರವಾಗಿ ನೆಲಗೊಂಡಿವೆ ಎಂಬುವದರಿಂದ ಮೊದಲನೇ ಎರಡನೇ ಭಾಗಗಳ ಅಭಿಪ್ರಾಯಗಳೂ "**ರಹಸ್ಯತ್ರಯಸ್ಯಸಾರೋಽಯಂ**" ಎಂಬುವದರಿಂದ ಮೂರನೇ ಭಾಗದಭಿಪ್ರಾಯಗಳೂ "**ಯತ್ಪ್ರಸಾದಾತ್**" ಎಂಬುವದರಿಂದ ನಾಲ್ಕನೇ ಭಾಗದ ಅಭಿಪ್ರಾಯಗಳೂ ಸೂಚಿಸಲ್ಪಟ್ಟವು.

ಈ ಶ್ಲೋಕದ ಮುಖ್ಯಾಭಿಪ್ರಾಯವೇನೆಂದರೆ ಪ್ರತಿಯೊಂದು ನಿತ್ಯನೈಮಿತ್ತಿಕಾನುಷ್ಠಾನಗಳ ಕಾಲಗಳಲ್ಲಿಯೂ ಗ್ರಂಥಕಾಲಕ್ಷೇಪದ ಆರಂಭೋಪಸಂಹಾರಕಾಲಗಳಲ್ಲಿಯೂ ಮತ್ತೂ ಗ್ರಂಥನಿರ್ಮಾಣವೇ ಮೊದಲಾದ ಶುಭಶೋಭನಾದಿ ಕಾರ್ಯಗಳಲ್ಲೂ ಗುರುಪಙ್ಕ್ತಿ ಭಜನವು ಅತ್ಯಾವಶ್ಯಕವೆಂದೂ ಮತ್ತೂ ಆ ಭಜನದಿಂದಲೇ ಈ ಚೇತನನಿಗೆ ಜ್ಞಾನವಿಕಾಸವೂ ಪ್ರಾರಂಭಿಸಿದ ಕರ್ಮದ ನಿರ್ವಿಘ್ನವಾದ ಪರಿಸಮಾಪ್ತಿಯೂ ಎಂದು ತಿಳಿಸಿ, ತಾವು ಈಗ ಆರಂಭಿಸಿರುವ ಶ್ರೀಮದ್ರಹಸ್ಯತ್ರಯಸಾರದ ಜ್ಞಾನವು ತಮ್ಮ ಮನಸ್ಸಿನಲ್ಲಿ ಸ್ಥಿರವಾಗಿರುವದಕ್ಕೂ ಗ್ರಂಥ

ಕರ್ಮಬ್ರಹ್ಮಾತ್ಮಕೇ ಶಾಸ್ತ್ರೇ ಕೌತಸ್ಕುತ ನಿವರ್ತಕಾನ್ ।
ವಂದೇ ಹಸ್ತಿಗಿರೀಶಸ್ಯ ವೀಥೀ ಶೋಧಕ ಕಿಂಕರಾನ್ ॥

ಪರಿಸಮಾಪ್ತಿಗಾಗಿಯೂ ಆಚಾರ್ಯ ಸಂತತಿಯನ್ನು ವಂದಿಸಿ ಮಂಗಳಾಚರಣೆಯನ್ನು ಮಾಡಿರುತ್ತಾರೆ.

ಅವತಾರಿಕೆ—ಹಿಂದಿನ ಶ್ಲೋಕದಲ್ಲಿ ಎಲ್ಲಾ ಗುರುಸಂತತಿಗೂ ಪ್ರಣಾಮವನ್ನೆಸಗಿ, ಈ ಶ್ಲೋಕದ ಪೂರ್ವಾರ್ಧದಿಂದ ತಮಗೆ ಉಪಕಾರಕರಾಗಿ ಶ್ರೀಭಾಷ್ಯಾದಿ ಕಾಲಕ್ಷೇಪವನ್ನು ಉಪದೇಶಿಸಿದ ಕಿಡಾಂಬಿ ಅಪ್ಪುಳ್ಳಾರೆಂಬ ಗುರುಗಳನ್ನೂ ಹಾಗೆಯೇ ಉತ್ತರಾರ್ಧದಿಂದ ತಮಗೆ ತಿರುವಾಯ್‌ಮೊಳಿ ಮತ್ತು ಇತರ ರಹಸ್ಯಗಳ ಉಪದೇಶವನ್ನು ಮಾಡಿದ ತಿರುಪ್ಪಣಿಶೆಯ್‌ವಾರ್ ಎಂಬುವರನ್ನೂ ನಮಸ್ಕರಿಸುತ್ತಾರೆ.

ಅರ್ಥ---**ಕರ್ಮಬ್ರಹ್ಮಾತ್ಮಕೇ ಶಾಸ್ತ್ರೇ** - ಜೈಮುನ್ಯಾಚಾರ್ಯರು ಬರೆದ ಧರ್ಮಜಿಜ್ಞಾಸಾರೂಪವಾದ ಪೂರ್ವಮೀಮಾಂಸಾ ಮತ್ತು ವ್ಯಾಸ ಮಹರ್ಷಿ ಪ್ರಣೀತವಾದ ಬ್ರಹ್ಮಜಿಜ್ಞಾಸರೂಪವಾದ ಉತ್ತರಮೀಮಾಂಸಾಶಾಸ್ತ್ರಗಳಲ್ಲಿ, **ಕೌತಸ್ಕುತನಿವರ್ತಕಾನ್** - ಕುತಃ ಕುತಃ, ಅದುಹೇಗೆ ಅದುಹೇಗೆ ಎಂಬದಾಗಿ ಹೇಳುವ ಕುತರ್ಕವಾದಿಗಳಾದ ಜೈನಬೌದ್ಧಾದಿಗಳನ್ನು ನಿರಸನಮಾಡಿದ ತಮ್ಮ ಆಚಾರ್ಯರಾದ ಕಿಡಾಂಬಿ ಅಪ್ಪುಳ್ಳಾರ್ ಎಂಬುವರನ್ನೂ, **ಹಸ್ತಿಗಿರೀಶಸ್ಯ** - ಹಸ್ತಿ ಗಿರಿಗೆ ಸ್ವಾಮಿಯಾದ ಶ್ರೀವರದರಾಜನ, **ವೀಥೀಶೋಧಕಕಿಂಕರಾನ್** - ಬೀದಿಯನ್ನು ಶುದ್ಧಿಮಾಡುವ ಕೈಂಕರ್ಯಪರರಾದ ತಿರುಪ್ಪಣಿಶೆಯ್‌ವಾರ್ ಎಂಬುವರನ್ನೂ, **ವಂದೇ** - ನಮಸ್ಕರಿಸುತ್ತೇನೆ

ತಾತ್ಪರ್ಯ---ಪೂರ್ವಮೀಮಾಂಸೆಯಲ್ಲಿ ಕರ್ಮವಿಷಯವಾದ ಚರ್ಚೆಯೂ, ಉತ್ತರಮೀಮಾಂಸೆಯಲ್ಲಿ ಪರಬ್ರಹ್ಮವಿಷಯವಾದ ಚರ್ಚೆಯೂ ಇರುವದರಿಂದ 'ಕರ್ಮಬ್ರಹ್ಮಾತ್ಮಕೇ ಶಾಸ್ತ್ರೇ' ಎಂದು ಪ್ರಯೋಗಿಸುತ್ತಾರೆ. ಸ್ವಾಮಿ ಅಪ್ಪುಳ್ಳಾರವರತನಿಯುವೂ 'ಕರ್ಮಬ್ರಹ್ಮಾವಮರ್ಶಪ್ರಭವಬಹುಫಲಂ ಸಾರ್ಥಮಗ್ರಾಹಿ ಶಾಸ್ತ್ರಂ" ಎಂದು ಪ್ರಾರಂಭವಾಗಿರುವದರಿಂದ, ಇಲ್ಲಿಯೂ "ಕರ್ಮಬ್ರಹ್ಮಾತ್ಮಕೆ

ಶಾಸ್ತ್ರ" ಎಂದು ಉಪಕ್ರಮಮಾಡಿರುವದರಿಂದ ಈಶ್ಲೋಕದ ಪೂರ್ವಾರ್ಧವು ಕಿಡಾಂಬಿ ಅಪ್ಪುಳ್ಳಾರವರ ವಿಷಯವಾದ ಸ್ತೋತ್ರವೆಂದೇ ಭಾವಿಸಬೇಕಾಗಿರುತ್ತದೆ. "ರಾಮಾನುಜಾರ್ಯಾದಾತ್ರೇಯಾನ್ಮಾತುಲಾತ್ಸಕಲಾಃಕಲಾಃ| ಅವಾಪವಿಂಶತ್ಯಬ್ಧೇಯಃ" ಎಂದು ಹೇಳಿರುವದರಿಂದ ಕಿಡಾಂಬಿ ಅಪ್ಪುಳ್ಳಾರವರು ಸ್ವಾಮಿದೇಶಿಕರವರಿಗೆ ಮಾತುಲರು ಅಂದರೆ ಸೋದರಮಾವಂದಿರು. ಇವರಿಗೆ ಶ್ರೀರಾಮಾನುಜಾರ್ಯರೆಂಬ ಹೆಸರೂ ಉಂಟು. ಶ್ರೀ ನಿಗಮಾಂತದೇಶಿಕರವರಿಗೆ ಸೋದರಮಾವಂದರೂ ಅಲ್ಲದೆ ಶ್ರೀಭಾಷ್ಯಾದಿ ಉಪದೇಷ್ಟೃವಾದ ಆಚಾರ್ಯರು. ಈ ಕಿಡಾಂಬಿ ಅಪ್ಪುಳ್ಳಾರವರ ವೃದ್ಧಪ್ರಪಿತಾಮಹರು, ಕಿಡಾಂಬಿ ಆಚ್ಚಾಽ್ ಎಂಬ ಶ್ರೀಭಾಷ್ಯಕಾರರ ನಾಲ್ಕು ಶ್ರೀಭಾಷ್ಯಸಿಂಹಾಸನಾಧಿಪತಿಗಳಲ್ಲೊಬ್ಬರು. ಇವರು ಶ್ರೀಭಾಷ್ಯಕಾರರ ಗುರುಗಳಾದ ತಿರುಕ್ಕೊಟ್ಟಿಯೂರ್‌ನಂಬಿಗಳಿಂದ ಆಜ್ಞಪ್ತರಾಗಿ ಪ್ರಣತಾರ್ತಿಹರರೆಂಬ ನಾಮಧೇಯದಿಂದ ಶ್ರೀಭಾಷ್ಯಕಾರರಿಗೆ ಮಹಾನಸಕೈಂಕರ್ಯವನ್ನು (ಅಡಿಗೆಮಾಡಿ ಭಿಕ್ಷೆಸಮರ್ಪಿಸುವ ಕೈಂಕರ್ಯ) ನಡಿಸುತ್ತಿದ್ದರು. ಇವರ ಮಕ್ಕಳು ರಾಮಾನುಜಪ್ಪಿಳ್ಳಾಽ್, ತಂದೆಯಿಂದ ಶ್ರೀಭಾಷ್ಯಾದಿ ಕಾಲಕ್ಷೇಪಗಳನ್ನು ಹೊಂದಿದರು. ಇವರ ಮಕ್ಕಳು ಶ್ರೀರಂಗರಾಜರು. ಶ್ರೀರಂಗರಾಜರಿಗೆ ಮಹಾಜ್ಞಾನವಿಕಾಸವುಳ್ಳ ಒಬ್ಬ ಪುತ್ರರು ಅವತರಿಸಿದರು. ಇವರ ಹೆಸರು ರಾಮಾನುಜಪ್ಪಿಳ್ಳಾಽ್ ಎಂಬ ಅವರ ಪಿತಾಮಹರ ನಾಮಧೇಯವು, ಇವರನ್ನೇ ಎಲ್ಲರೂ ಕಿಡಾಂಬಿ ಅಪ್ಪಿಳ್ಳಾರೆಂದು ಕರೆಯುತ್ತಿದ್ದರು. ಇವರ ತಂಗಿಯೇ ತೋತಾರಮ್ಮನವರು. ಇವರು ಅನಂತಸೂರಿಗಳಿಗೆ ವಿವಾಹಿತರಾಗಿ, ಸ್ವಾಮಿ ಶ್ರೀನಿವಾಸನ ಕೃಪೆಯಿಂದ ಶ್ರೀನಿಗಮಾಂತದೇಶಿಕರವರಿಗೆ ತಾಯಿಯಾದರು. ಈಕಿಡಾಂಬಿ ಅಪ್ಪಿಳ್ಳಾರವರಿಗೆ ಶ್ರೀಭಾಷ್ಯಾದಿ ಸರ್ವಕಾಲಕ್ಷೇಪಗಳೂ ಶ್ರೀವರದಾಚಾರ್ಯರ್ ಅಥವಾ ನಡಾದೂರಮ್ಮಾಳ್‌ರವರ ಸನ್ನಿಧಿಯಲ್ಲಿ ನಡೆಯಿತು. ಈ ನಡಾದೂರಮ್ಮಾಳ್‌ರವರು ಮಹಾಪ್ರಾಜ್ಞರು.ಶ್ರೀಯತಿವರ್ಯರ ಶಿಷ್ಯರಾದ ನಾಲ್ಕು ಶ್ರೀಭಾಷ್ಯಸಿಂಹಾಸನಾಧಿ ಪತಿಗಳಲ್ಲಿ ಒಬ್ಬರಾದ ನಡಾದೂರಾಳ್ವಾಽ್ ಎಂಬುವರ

ಪೌತ್ರರು. ಈನಡಾದೂರಮ್ಮಾಳರವರು ಎಂಗಳಾಳ್ವಾನ್ ಎಂಬ ಆಚಾರ್ಯರ ಮೂಲಕ ಶ್ರೀಭಾಷ್ಯಾದಿ ಸಮಸ್ತ ಉಪದೇಶಗಳನ್ನು ಹೊಂದಿದರು.

ಮಹಾಜ್ಞಾನಿಗಳಾದ ಈ ನಡಾದೂರಮ್ಮಾಳ್ರವರು ತತ್ವಸಾರ ಮೊದಲಾದ ಗ್ರಂಥಗಳನ್ನು ರಚಿಸಿ ತುಂಬಾ ಖ್ಯಾತಿಯನ್ನು ಹೊಂದಿದ್ದರು. ಈ ನಡಾದೂರಮ್ಮಾಳಾರ್ರವರಲ್ಲಿ ಉಪದೇಶವನ್ನು ಹೊಂದಿದ ಶಿಷ್ಯರುಗಳಲ್ಲಿ ಕಿಡಾಂಬಿ ಅಪ್ಪಿಳ್ಳೈರಲ್ಲದೆ, ಶ್ರೀ ಸುದರ್ಶನಾಚಾರ್ಯರೆಂಬುವರೊಬ್ಬರಿದ್ದರು. ಇವರು ತಮ್ಮ ಗುರುಗಳ ಉಪದೇಶವನ್ನೆಲ್ಲಾ ಬರದಿಟ್ಟು ಶ್ರೀಭಾಷ್ಯಕಾರರಿಂದುಪದೇಶಿಸಲ್ಪಟ್ಟ ಅಮೋಘಾರ್ಥಗಳು ನಷ್ಟವಾಗಿ ಹೋಗದಹಾಗೆ ಮಾಡಿ, ತಮ್ಮ ಗುರುಗಳಿಗೆ ತೋರಿಸಲು, ಅವರು ತುಂಬಾ ಸಂತೋಷಪಟ್ಟವರಾಗಿ, ಅದನ್ನು ಚೆನ್ನಾಗಿ ಶೋಧಿಸಿ "ಶ್ರುತಪ್ರಕಾಶಿಕಾ" ಎಂಬ ಹೆಸರಿನಿಂದ ಪ್ರಚುರಗೊಳಿಸಬೇಕೆಂದು ಅನುಜ್ಞೆಯನ್ನು ಕೊಟ್ಟರು. ಈ "ಶ್ರುತಪ್ರಕಾಶಿಕೆಯು" ಶ್ರೀ ನಿಗಮಾಂತದೇಶಿಕರವರಿಂದ ರಕ್ಷಿಸಲ್ಪಟ್ಟು ಶ್ರೀ ಭಾಷ್ಯಕಾರರು ಬರೆದ ಶ್ರೀಭಾಷ್ಯಕ್ಕೆ ಅಮೋಘವಾದ ವ್ಯಾಖ್ಯಾನವಾಗಿರುತ್ತದೆ.

ಈ ಕಿಡಾಂಬಿ ಅಪ್ಪಿಳ್ಳಾರರಾದ ತಮ್ಮ ಆಚಾರ್ಯರು ಎಂಥಾವರೆಂದರೆ ಹೇಳುತ್ತಾರೆ—"ಕೌತುಸ್ಕುತ ನಿವರ್ತಕಾನ್" - ಕುತರ್ಕ, ಕುವಾದಗಳನ್ನು ಮಾಡುವ ಅಪಸಿದ್ಧಾಂತಸ್ಥಾಪಕರನ್ನೆಲ್ಲಾ ಜಯಿಸಿ, ತಮ್ಮ ಋಜುವಾದ ಸಿದ್ಧಾಂತವನ್ನು ಸ್ಥಾಪಿಸಿದವರು. ಶಬ್ದಪ್ರಮಾಣಕ್ಕೆ ಪ್ರಾಶಸ್ತ್ಯವನ್ನು ಕೊಡದೆ ಬರೀ ಪ್ರತ್ಯಕ್ಷಾನುಮಾನಾದಿಗಳಿಗೆ ಪ್ರಾಶಸ್ತ್ಯವನ್ನು ಕೊಟ್ಟು ಅಪಸಿದ್ಧಾಂತವನ್ನು ಸ್ಥಾಪಿಸಿದ ತರ್ಕವೀಗ ಕುತರ್ಕವು. ಅಂತಹ ಕುತರ್ಕಗಳನ್ನೇ ಶ್ರೀಭಾಷ್ಯದ ಬಲದಿಂದ ಇವರು ನಿರಸನಮಾಡಿದವರು ಎಂಬ ಭಾವವು. "ಕುತಃಕುತಃ" ಅದುಹೇಗೆ ಅದುಹೇಗೆ ಎಂದು ವಾದಿಸುವ ತರ್ಕವೀಗ ಕುತರ್ಕವು ತಮ್ಮದಾದರೊ ಸತ್ತರ್ಕವು ಏಕೆಂದರೆ,

ಆರ್ಷಂ ಧರ್ಮೋಪದೇಶಂಚ ವೇದಶಾಸ್ತ್ರ ವಿರೋಧಿನಾ ।
ಯಸ್ತರ್ಕೇಣಾನುಸಂಧತ್ತೇ ಸಧರ್ಮಂ ವೇದನೇತರಃ ॥

ಎಂದು ಹೇಳಿರುವಹಾಗೆ ವೇದಶಾಸ್ತ್ರಗಳು ಪ್ರಮಾಣವೆಂದು ನಂಬಿ, ಅದಕ್ಕೆ ಪೂರ್ವಾಪರ ವಿರೋಧವಿಲ್ಲದಹಾಗೆ ಸರ್ವಸಮಂಜಸವಾದ ಅರ್ಥವನ್ನು ಹೇಳಿ ಅಂತಹ ಕುತರ್ಕಕುವಾದಗಳನ್ನು ಮೂಲೋತ್ಪಾಟನ ಮಾಡಿದವರು. ಅಂತವರನ್ನು ವಂದೆ - ನಮಸ್ಕರಿಸುವೆನು.

ಇನ್ನೂ ಯಾರನ್ನು ನಮಸ್ಕರಿಸುತ್ತೇನೆಂದರೆ, "ಹಸ್ತಿಗಿರೀಶಸ್ಯ ವೀಥೀ ಶೋಧಕ ಕಿಂಕರಾ". ಸ್ವಾಮಿ ಶ್ರೀಮನ್ನಾರಾಯಣನು, ತನ್ನನ್ನು ಹೊಂದುವ ಮಾರ್ಗವನ್ನು ತಾನೇ ಪಾಂಚರಾತ್ರಾದಿಗಳಲ್ಲಿ ವ್ಯಕ್ತಪಡಿಸಿದ್ದರೂ ಅನೇಕರಿಗೆ ತಿಳಿಯದೇ ಆ ಪ್ರಪದನಮಾರ್ಗದ ಮಹಾತ್ಮ್ಯೆಯು ತಿಳಿಯದೇ ಇದ್ದುದರಿಂದ "ವ್ಯಕ್ತಸದ್ವರ್ತ್ತನೀಕಾ" ಎಂದು ಹಿಂದೆ ಹೇಳಿದಹಾಗೆ ವ್ಯಕ್ತಪಡಿಸಿದುದರಿಂದ ನಮ್ಮ ಆಚಾರ್ಯರು ವೀಥೀಶೋಧಕರು, ಅಂದರೆ ಪ್ರಪದನಮಾರ್ಗವು ಚೆನ್ನಾಗಿ ಪ್ರಕಾಶಿಸುವ ಹಾಗೆ ಮಾಡಿದವರು. ಅಥವಾ ಅಂತಹ ಮಾರ್ಗದಲ್ಲಿ ತಾವೇ ಅನುಷ್ಠಿಸಿ ಪ್ರವೃತ್ತಿಯುಳ್ಳವರಾದುದರಿಂದ, ಆ ಮಾರ್ಗಕ್ಕೆ ಭಾಗವತಾನುಮತಿರೂಪವಾದ ಪರಿಶುದ್ಧತೆಯನ್ನುಂಟುಮಾಡಿದವರು ನಮ್ಮಾಳ್ವಾರವರು ಇಂತಹ ಅಮೋಘಕಾರ್ಯವನ್ನು ಮಾಡಿ, ಪ್ರಪತ್ತಿ (ಶರಣಾಗತಿ) ಮಾಹಾತ್ಮ್ಯೆಯನ್ನು "ಅಕಿಲಕಿಲ್ಲೇ" ಮೊದಲಾದ ಅನೇಕ ಪಾಶುರಗಳಿಂದ ವ್ಯಕ್ತಪಡಿಸಿರುತ್ತಾರೆ. ಅಂತಹ ಅಮೋಘವಾದ ತಿರುವಾಯ್‌ಮೊಳಿಯ ಅರ್ಥಗಳನ್ನು ಗ್ರಹಿಸಿ ತಮಗೆ ಕೃಪೆಯಾ ಉಪದೇಶಿಸಿದ ಮಹಾತ್ಮರಾದ ತಿರುಪ್ಪಾಣಿಶೆಯ್‌ವಾರರು ಅಂತಹ **"ವೀಥೀಶೋಧಕ ಕಿಂಕರರು"** ಎಂದು ಹೇಳುತ್ತಾರೆ. ಈ ತಿರುಪ್ಪಾಣಿಶೆಯ್‌ವಾರರು ಕಾಂಚೀಪುರದಲ್ಲಿರುವಾಗ ಶ್ರೀ ವರದರಾಜರ ಉತ್ಸವವು ಬಿಜಮಾಡುವ ಕಾಲದಲ್ಲಿ, ವೀಧಿಗಳಲ್ಲಿ ಏನಾದರೂ ಕಸಕಡ್ಡಿಗಳು ಬಿದ್ದಿದ್ದರೆ ಅವುಗಳನ್ನು ತೆಗೆದುಹಾಕಿ ಅವು ಪರಿಶುದ್ಧವಾಗಿರುವ ಹಾಗೆ ಕೈಂಕರ್ಯವನ್ನು ನಡಿಸುತ್ತಿದ್ದರೆಂಬ ಜನಶ್ರುತಿಯುಂಟು. ಅದೂ ಅಲ್ಲದೆ ಈ ತಿರುಪ್ಪಾಣಿಶೆಯವಾರ್ ಮೊದಲಾದವರಿಗೆ ಇತರ ಅಪಸಿದ್ಧಾಂತ ನಿರ

ಸನವು ಕಸವನ್ನು ಒಂದು ಕಡೆಗೆ ಒತ್ತರಿಸುವದು ಲೀಲಾರೂಪವಾಗಿ ಎಷ್ಟು ಸುಲಭವೋ ಹಾಗೆ ನಿರಾಯಾಸವಾದುದು ಎಂಬ ಭಾವವೂ ಇತರ ಸಿದ್ಧಾಂತಗಳು ಕಸಕಡ್ಡಿಯ ಹಾಗೆ ತುಚ್ಛವಾದವೆಂಬಭಿಪ್ರಾಯವೂ ತೋರಿಬರುತ್ತವೆ. ಅಥವಾ ಸ್ವಾಮಿಯ ಉತ್ಸವವು ಹೊರಡುವಾಗ ದಿವ್ಯ ಪ್ರಬಂಧಸೇವೆ ಮೊದಲಾದ ಮಂಗಳಧ್ವನಿಯಿಂದ ಬೀದಿಗಳಿಗೆ ಪರಿಶುದ್ಧತೆಯನ್ನುಂಟುಮಾಡಿದವರೆಂಬರ್ಥವನ್ನೂ ಹೇಳಬಹುದು. ಇದರಿಂದ ತಮಗೆ ತಿರುವಾಯ್‌ಮೊಳಿ ಮತ್ತು ಕೆಲವು ರಹಸ್ಯಾರ್ಥಗಳನ್ನು ಉಪದೇಶಿಸಿದ ಉಪಕಾರಕಾಚಾರ್ಯರು ತಿರುಪ್ಪಣಿಶೆಯ್‌ವಾರೆಂಬುವದು ವ್ಯಕ್ತಪಡುತ್ತದೆ.

ಇಲ್ಲಿ ಕಿಡಾಂಬಿ ಅಪ್ಪುಳ್ಳಾರನ್ನೂ ತಿರುಪ್ಪಣಿಶೆಯ್‌ವಾರರನ್ನೂ ಉದ್ದೇಶಿಸಿ ಈ ಶ್ಲೋಕವನ್ನು ಅನುಗ್ರಹಿಸಿದರೆಂದು ಹೇಳಿದರೆ ಎರಡು ಕಡೆಯಲ್ಲೂ ಬಹುವಚನ ಹೇಗೆಂದರೆ, ಗೌರವದಿಂದ ತಮ್ಮ ಆಚಾರ್ಯರ ವಿಷಯದಿಂದ " ಗುರುಭ್ಯಸ್ತದ್ಗುರುಭ್ಯಶ್ಚ " ಎಂಬ ಶ್ಲೋಕದಲ್ಲಿನ ಹಾಗೆ ಬಹುವಚನ ಪ್ರಯೋಗವೆಂದು ಭಾವಿಸಬಹುದು. ಅಥವಾ ತಮ್ಮ ಗುರುಗಳು ಮಾಡಿದ ಉಪಕಾರದ ಹಾಗೆ ಇನ್ನೂ ಉಪಕಾರಕರಾದ ಅನೇಕರುಂಟು ಎಂಬ ಭಾವನೆಯಿಂದ ಬಹುವಚನವು ಪ್ರಯೋಗಿಸಲ್ಪಟ್ಟಿದೆ ಎಂದೂ ಸಮಾಧಾನ ಹೇಳಬಹುದು.

ಅವತಾರಿಕೆ—ಪ್ರತಿಯೊಂದು ಗ್ರಂಥದಲ್ಲೂ ಗ್ರಂಥಕರ್ತರು ಅನುಬಂಧಿಚತುಷ್ಟಯವನ್ನು ಗ್ರಂಥಾದಿಯಲ್ಲಿ ವ್ಯಕ್ತಪಡಿಸತಕ್ಕದ್ದು ಕರ್ತವ್ಯವು. ಈ ಅನುಬಂಧಿಚತುಷ್ಟಯವ್ಯಾವುವೆಂದರೆ— (೧) ವಿಷಯ, (೨) ಪ್ರಯೋಜನ, (೩) ಸಂಬಂಧ, (೪) ಅಧಿಕಾರ. ಇವುಗಳನ್ನು ಈ ಶ್ಲೋಕದಿಂದ ವ್ಯಕ್ತಪಡಿಸಿ, ಇಂತಹ ಅಮೋಘ ವಿಷಯಪ್ರಯೋಜನಗಳನ್ನು ಒಳಗೊಂಡು, ಅಜ್ಞಾನಗಳ ನಿವೃತ್ತಿ ಮೂಲಕ ಇಂತಹ ನಿರತಿಶಯಾನಂದ ಸುಖಫಲಪ್ರದವಾದ, ರಹಸ್ಯಗಳ ತಾತ್ಪರ್ಯವನ್ನು ಮಹಾ ಕೃಪಾಶಾಲಿಗಳಾದ ಆಚಾರ್ಯರುಗಳ ಮೂಲಕ ತಾವು ಯಾವಾಗಲೂ ಅನುಸಂಧಾನಮಾಡುತ್ತಿರುವದು ತಮ್ಮ ಮಹಾ ಭಾಗ್ಯೋದಯವಲ್ಲವೇ ಎಂಬಬಾಗಿ ಆಶ್ಚರ್ಯ ಪಡುತ್ತಾರೆ.

ಆಳುಮಡೈಕ್ಕಲನೆನ್ರೆನ್ಮೈಯಂಬುಯತ್ತಾಳ್ ಕಣವ ।
ತಾಳಿಣೈ ಶೇರ್ ನ್ದೆಮಕ್ಕು ಮನ್ನೈತನ್ದ ತಕವುಡೈಯಾರ್ ॥

ಅರ್ಥ — ಅಂಬುಯತ್ತಾಲ್ ಕಣವರ್ - (ಶ್ರಿಯಃಪತಿಯು) ಪದ್ಮಾಲಯಳಾದ ಶ್ರೀಮಹಾಲಕ್ಷ್ಮಿಯ ಭರ್ತಾವಾದ ನಾರಾಯಣನು, **ಎನ್ಮೈ** - ಅಕಿಂಚನರಾದ ನಮ್ಮನ್ನು, **ಅಡೈಕ್ಕಲಂ**-ರಕ್ಷಿಸಲು ಯೋಗ್ಯವಾದ ವಸ್ತುವೆಂದು, **ಆಳುಮೆನ್ರು** - ಸ್ವೀಕರಿಸುತ್ತಾನೆಂಬದಾಗಿ, **ತಾಳಿಣೈ** - ಚರಣದ್ವಂದವನ್ನು, **ಶೇರ್ ನ್ದು** - ಉಪಾಯವಾಗಿ ಆಶ್ರಯಿಸಿ, ಅಂದರೆ ನಮ್ಮ ಆಚಾರ್ಯರು ತಾವೇ ಶರಣಾಗತಿಯನ್ನನುಷ್ಠಿಸಿ, (ಇದರಿಂದ ಈ ಪ್ರಬಂಧದ ಪ್ರಯೋಜನವು ಸೂಚಿಸಲ್ಪಟ್ಟಿತು.) **ಎಮಕ್ಕುಂ** - ಅಂತಹ ಆಚಾರ್ಯರುಗಳನ್ನಾಶ್ರಯಿಸಿದ ನಮಗೂ ಕೂಡ, **ಅನ್ನೈತಂತ** - ಆ ಶ್ರಿಯಃಪತಿಯ ಚರಣದ್ವಂದವೇ ಉಪಾಯವೆಂಬದಾಗಿ ನಮಗೆ ಉದಾರಭಾವದಿಂದ ತೋರಿಸಿಕೊಟ್ಟ, **ತಕವುಡೈಯಾರ್** - ಕೃಪಾಶಾಲಿಗಳಾದ ನಮ್ಮ ಆಚಾರ್ಯರು, **ಮೂಳುಂ** - ಅಭಿವೃದ್ಧಿ ಹೊಂದಿರುವ, **ಇರುಳ್‌ಗಳ್** - ಪರಬ್ರಹ್ಮ ಜೀವಾತ್ಮರುಗಳ ಸ್ವರೂಪ ತಿಳಿಯದ ಅಜ್ಞಾನ, ದೇಹಾತ್ಮಭ್ರಾಂತಿ ಸ್ವತಂತ್ರಾತ್ಮಭ್ರಾಂತಿ ಮುಂತಾದ ಅಜ್ಞಾನಾಂಧಕಾರಗಳು, **ವಿಳ್ಳ** - ಹೇಗೆ ನಶಿಸಿಹೋಗಬೇಕೋ ಹಾಗೆ **ಮುಯನ್ನು** - ಸಾದರದಿಂದ, **ಓದಿಯ** - ಉಪದೇಶಮಾಡಿದ, **ಮೂನ್ರಿನ್** - ಮೂರು ರಹಸ್ಯಗಳ (ಮೂಲಮಂತ್ರ, ದ್ವಯ ಚರಮಶ್ಲೋಕ,) **ಉಳ್ಳಂ** - ತಾತ್ಪರ್ಯವನ್ನು (ಇದು ಈ ಗ್ರಂಥದಲ್ಲಿ ಚರ್ಚಿಸಲ್ಪಡುವ ವಿಷಯವು), **ನಾಳುಂ** - ಪ್ರತಿದಿನದಲ್ಲೂ, (ಅನುಸಂಧಾನಮಾಡಿ, ಎಂದು ಅಧ್ಯಾಹಾರ), **ಉಕಕ್ಕ** - ಹೇಗೆ ಸಂತುಷ್ಟತೆಯನ್ನು ಹೊಂದುವೆವೋ ಹಾಗೆ, **ಇಂಗೇ** - ಇಲ್ಲೇ, ಅಂದರೆ ಕಾಮಕ್ರೋಧ ಅಸೂಯೆ ಮುಂತಾದವು ತುಂಬಿರುವದರಿಂದ ಅಂತಹ ಜ್ಞಾನಪ್ರಾಪ್ತಿಗೆ "ಶ್ರೇಯಾಂಸಿ ಬಹು ವಿಘ್ನಾನಿ" ಎನ್ನುವ ಹಾಗೆ ಅನೇಕ ಪ್ರತಿಬಂಧಕಗಳುಳ್ಳ ಈ ಪ್ರಕೃತಿ ಮಂಡಲದಲ್ಲೇ, **ನಮಕ್ಕು** - ಅನೇಕ ಜನ್ಮ ಸಹಸ್ರಗಳಿನ್ನೆತ್ತಿ ಸಂಸಾರಬಂಧದಲ್ಲಿ ಸಿಕ್ಕಿರುವ ನಮಗೆ (ಇದರಿಂದ ಅಧಿಕಾರಿ ಯಾರೆಂದು

ಮೂಳುಮಿರುಳ್‌ಗಳ್ ವಿಳ್ಳಮುಯನ್ರೋದಿಯ ಮೂನ್ರಿನುಳ್ಳಂ।
ನಾಳುಮಾಕ್ಕೈವಿಂಗೇ ನಮಕ್ಕೋರ್‌ವಿದಿ ವಾಯ್‌ಕ್ಕಿನ್ರದೇ॥೭॥

ಸೂಚಿತವಾಯಿತು) ಓರ್ - ಅದ್ವಿತೀಯವಾದ, ಅಥವಾ ವಿಲಕ್ಷಣವಾದ, ಒಂದು, ವಿಧಿ - ಭಾಗ್ಯ ವಿಶೇಷವು, **ವಾಯಿಕ್ಕಿನ್ರದು** - ಬಂದು ಹತ್ತಿರ ನಿಂತಿರುತ್ತದೆ, ಅಂದರೆ ನಿರ್ಹೇತುಕವಾಗಿ ಈ ಭಾಗ್ಯೋದಯವು ಸನ್ನಿಹಿತವಾಗಿರುತ್ತದೆ, ದೊರೆತಿರುತ್ತದೆ ಎಂಬ ಭಾವವು.

ತಾತ್ಪರ್ಯ—ನಮ್ಮ ಆಚಾರ್ಯರಾದರೋ ಶ್ರಿಯಃಪತಿಯ ಚರಣದ್ವಂದಗಳನ್ನಾಶ್ರಯಿಸುವದೇ ಪರಮೋಪಾಯವೆಂದು ನಂಬಿ ಪ್ರಪದನಾನುಷ್ಠಾನವಂ ಕೈಗೊಂಡು ಕೃತಕೃತ್ಯರಾಗಿ, ತಾವು ಅನುಷ್ಠಿಸಿದ ಮಾರ್ಗವೇ ಪರಮೋಪಾಯವೆಂದು ತಿಳಿದು ಉದಾರಭಾವದಿಂದ ಅದನ್ನೇ ನಮಗೂ ಉಪದೇಶಿಸಿ ನಾವೂ ಅನುಷ್ಠಾನಮಾಡುವ ಹಾಗೆ ಮಾಡಿ, ಅನೇಕ ಜನ್ಮಗಳಿಂದನುಸರಿಸಿ ಬಂದ ಕರ್ಮ ಪ್ರಾಬಲ್ಯದಿಂದುಂಟಾದ ಅಜ್ಞಾನಾಂಧಕಾರಗಳನ್ನು ಬಹು ಸುಲಭವಾಗಿ ಹೋಗಲಾಡಿಸಿ ನಮ್ಮನ್ನು ಕೃತಾರ್ಥರಾಗಿ ಮಾಡಿದರಲ್ಲಾ! ನಮ್ಮ ಸುಕೃತದ ಮುಂದೆ ಸುಕೃತವೇ ಎಂದು ಆಶ್ಚರ್ಯವನ್ನು ತೋರುತ್ತಾರೆ

ಈ ಪ್ರಬಂಧದಲ್ಲಿ ಉಪಪಾದಿಸಿರುವ **ವಿಷಯವೇ**ನೆಂದರೆ :—

ಜನ್ಮಜನ್ಮದಲ್ಲೂ ಮಾಡಿದ ಕರ್ಮಗಳ ಪ್ರಾಬಲ್ಯದಿಂದುಂಟಾದ ಜ್ಞಾನ ಸಂಕೋಚದ ಮೂಲಕ ಪ್ರಾಪ್ತವಾದ ಜೀವಾತ್ಮ ಪರಮಾತ್ಮ ಸ್ವರೂಪ ವಿಷಯಿಕ ಅಜ್ಞಾನ, ದೇಹಾತ್ಮಭ್ರಮೆ, ಸ್ವತಂತ್ರಾತ್ಮ ಭ್ರಾಂತಿ ಮೊದಲಾದ ಅಜ್ಞಾನಾಂಧಕಾರವನ್ನು ತೊಲಗಿಸಿ ಒಳ್ಳೇ ಜ್ಞಾನ ಭಕ್ತ್ಯಾದಿಗಳನ್ನು ಕೊಟ್ಟು ಶ್ರೀಮನ್ನಾರಾಯಣನನ್ನು ಹೊಂದುವ ಮಾರ್ಗವನ್ನು ತಿಳಿಸುವ ರಹಸ್ಯತ್ರಯಗಳ ಸಾರವತ್ತಾದ ಅರ್ಥ ತಾತ್ಪರ್ಯಗಳು.

ಅಧಿಕಾರಿ ಯಾರೆಂದರೆ:—ಅನಾದಿ ಸಂಸೃತಿಯಲ್ಲಿ ಬಿದ್ದು ತೊಳಲಿ **ತೊಳಲಿ** ಸ್ವಾಮಿಯು ಕೃಪೆಯಿಂದಿತ್ತ ಕರಣ ಕಳೇಬರಾದಿಗಳನು, ದುರುಪಯೋಗಪಡಿಸಿ ಮಹಾದೀನದೆಶೆಯನ್ನು ಹೊಂದಿದ ಚೇತನನಿಗೆ

ಯಾವುದೋ ಒಂದು ಭಾಗ್ಯವಿಶೇಷಮೂಲಕ ಸದ್ಗುರು ಪ್ರಾಪ್ತಿಯುಂಟಾಗಿ ತನ್ಮೂಲಕ ಜ್ಞಾನಸಂಪಾದಿಸಿಕೊಂಡು ಸಾಧ್ಯೋಪಾಯವಾದ ಪ್ರಪದನ ದ್ವಾರ ಸ್ವಾಮಿಯನ್ನು ಹೊಂದಬೇಕೆಂಬಭಿಲಾಷೆಯುಳ್ಳ ಮೊಕ್ಷಾರ್ಥಿಯು.

ಪ್ರಯೋಜನ ಯಾವುದೆಂದರೆ—ಅಂತಹ ಮುಮುಕ್ಷುವು ಅಂತಹ ಸದ್ಗುರು ಸಹಾಯದಿಂದ ಜ್ಞಾನವನ್ನು ಹೊಂದಿ, ಅಜ್ಞಾನಾಂಧಕಾರಗಳು ದೂರೀಕೃತವಾಗಿ "ಮೂನ್ರಿನುಳ್ಳಂ" ರಹಸ್ಯತ್ರಯಗಳ ಸಾರವತ್ತಾದ ಅರ್ಥಗಳನ್ನು ಗ್ರಹಿಸಿದವನಾಗಿ, "ತಾಳಿಣೈಶೇರ್‌ನ್ದು" ಶರಣಾಗತಿಯನ್ನನುಷ್ಠಿಸಿ, "ಅಡೈಕ್ಕಲುಂ ಆಳುಮುನ್ರುಂ" ದೇಹಾವಸಾನಾನಂತರ ಪರಮಪುರುಷನ ಕೈಂಕರ್ಯರೂಪವಾದ ನಿರತಿಶಯಾನಂದ ಸುಖವನ್ನು ಹೊಂದುವನು ಎಂಬುದೇ ಪ್ರಯೋಜನವು.

ಅವತಾರಿಕೆ—ಸ್ವಾಮಿ ನಿಗಮಾಂತ ದೇಶಿಕರವರು ಪ್ರತಿಯೊಂದು ಅಧಿಕಾರದ ಅಭಿಪ್ರಾಯವನ್ನೂ ಪ್ರಥಮತಃ ಒಂದು ಸಂಸ್ಕೃತ ಶ್ಲೋಕದಿಂದ ಸೂಚಿಸಿ ಅದರ ಅಭಿಪ್ರಾಯವನ್ನು ತಮಿಳ್ ಭಾಷೆಯಲ್ಲಿ ವಿಶದವಾಗಿ ಉಪಪಾದನೆ ಮಾಡಿ, ಹಾಗೆ ಉಪಪಾದಿತಾಂಶವನ್ನು ಪುನಃ ಸೂಕ್ಷ್ಮವಾಗಿ ಒಂದು ತಮಿಳ್ ಪಾಶುರದಿಂದಲೂ, ಒಂದು ಸಂಸ್ಕೃತ ಶ್ಲೋಕದಿಂದಲೂ, ಸಂಗ್ರಹಿಸಿ ಹೇಳಿ ಅಧಿಕಾರವನ್ನು ಪೂರೈಸುತ್ತಾರೆ. ಆ ಕ್ರಮಪ್ರಕಾರ, ಉಪೋದ್ಘಾತಾಧಿಕಾರಕ್ಕೆ 'ಮಣಿವರ' ವೆಂಬ ಶ್ಲೋಕವು ವಿಷಯಸೂಚಕವಾದುದಾಗಿರುತ್ತದೆ.

ಹಿಂದೆ ಈ ಗ್ರಂಥಕ್ಕೆ ಮೋಕ್ಷಪ್ರಾಪ್ತಿಯೇ ಪ್ರಯೋಜನವೆಂದು ಹೇಳಲ್ಪಟ್ಟಿತು ಆದರೆ ಜೀವನು ಅನಾದಿ ಸಂಸೃತಿಯಲ್ಲಿ ಬಿದ್ದು ಅನೇಕ ಕರ್ಮಗಳಿಂದ ಬಂಧಿಸಲ್ಪಟ್ಟು, ತ್ರಿವಿಧವಾದ ಅಜ್ಞಾನಾಂಧಕಾರದಲ್ಲಿ ಕಣ್ಣು ಕಾಣದೆ ಸಂಚರಿಸುತ್ತಾ ಕಾಲುಜಾರಿ ಬಿದ್ದಿರುವಾಗ, ಮತ್ತೂ ಅಸ್ವತಂತ್ರನಾಗಿ, "ಸರ್ವಂ ಪರವಶಂ ದುಃಖಂ" ಎಂದೂ "[1]ಧಿಗ

---

1 ಶಾ. ಸಂ. ೨೪, ೨೦.

ಮಣಿವರ ಇವ ಶೌರೇರ್ನಿತ್ಯಹೃದ್ಯೋಽಪಿ ಜೀವಃ ।
ಕಲುಷಮತಿರವಿನ್ದರ್ ಕಿಙ್ಕರತ್ವಾಧಿರಾಜ್ಯಂ ॥

ಸ್ತು ಪರವಶ್ಯತಾಂ" ಎಂದೂ ಹೇಳಿರುವರೀತ್ಯಾ, ಇಂತಹ ಅಸ್ವತಂತ್ರನು ತನ್ನ ಬಂಧನವಂ ನೀಗಿಕೊಂಡು ಮೋಕ್ಷವನ್ನು ಹೊಂದುವದು ಹೇಗೆ, ಹಾಗೆ ಮೋಕ್ಷಪ್ರಾಪ್ತಿಯು ಸಾಮಾನ್ಯವಾಗಿ ದೊರೆಯದ ಪಕ್ಷದಲ್ಲಿ ಇಂತಹ ಗ್ರಂಥರಚನೆಗೆ ಫಲವೇನು, ಇವೇ ಮೊದಲಾದ ಶಂಕಾಗಳನ್ನು ಹೋಗಲಾಡಿಸುವದಕ್ಕಾಗಿ, ಇಂತಹ ದುಃಖಸಾಗರದಲ್ಲಿ ಮುಳಗಿದವನೂ ಕೂಡ ಬಂದಾನೊಂದು ಕಾಲದಲ್ಲಿ ಸುಲಭವಾಗಿ ಸ್ವಾಮಿಯಿಂದ ಕೈ ಹಿಡಿದು ಎತ್ತಲ್ಪಡುತ್ತಾನೆ; ಅದರಿಂದ ಈ ಗ್ರಂಥಕ್ಕೆ ಅಂತಹ ಪ್ರಯೋಜನ ಉಂಟೆಂದು ಒಬ್ಬ ರಾಜಕುಮಾರನ ದೃಷ್ಟಾಂತ ಮೂಲಕ ವ್ಯಕ್ತಪಡಿಸುತ್ತಾರೆ. ಅಂತಹ ಅಭಿಪ್ರಾಯವನ್ನು ಈ ಅಮೋಘಶ್ಲೋಕವು ಸೂಚಿಸುತ್ತದೆ.

ಅರ್ಥ—ಜೀವಃ - ಜೀವಾತ್ಮನು, **ಶೌರೇಃ**[1] - ಶ್ರೀಮನ್ನಾರಾಯಣನಿಗೆ, **ಮಣಿವರಇವ**[2] - ಶ್ರೇಷ್ಠವಾದುದಾಗಿಯೂ ಪ್ರಕಾಶವಾಗಿಯೂ ಸುಂದರವಾಗಿ ನಿರ್ಮಲವಾಗಿಯೂ ಇರುವ **ಕೌಸ್ತುಭರತ್ನದ** ಹಾಗೆ ಜ್ಞಾನತ್ವ, ಆನಂದತ್ವ, ಅಮಲತ್ವ, ಶೇಷತ್ವ ಮೊದಲಾದ ಗುಣಗಳಿಂದ ಪ್ರಕಾಶಿಸುವನಾಗಿ, **ನಿತ್ಯಹೃದ್ಯೋಽಪಿ** - **ಸ್ವಾಮಿಗೆ ಕೌಸ್ತುಭ** ಮಣಿಯು ಹೇಗೆ ಪ್ರಿಯವೋ ಹಾಗೆ ಈ ಚೇತನನೂ ತುಂಬಾ ಪ್ರಿಯವಾಗಿದ್ದರೂ, **ಕಿಂಕರತ್ವಾಧಿರಾಜ್ಯಂ** - ಸ್ವಾಮಿಗೆ ಶೇಷಭೂತನಾಗಿ ಮಾಡುವ ಕೈಂಕರ್ಯಸಾಮ್ರಾಜ್ಯಾನುಭವದ ಸ್ವಾರಸ್ಯವನ್ನು, **ಅವಿಂದರ್** - ಅನಾದ್ಯವಿದ್ಯಾ ಮೂಲಕವಾಗಿ ಉಂಟಾದ ದುಷ್ಕರ್ಮಪರಿಪಾಕದಿಂದ ತಿಳಿಯದವನಾಗಿ ಅಂದರೆ ಹೊಂದದೇ ಇರುವವನಾಗಿ, **ಕಾಲೆ** -

---

1 ಶೌರಿಃ - ಅಂದರೆ ಶ್ರೀಕೃಷ್ಣನು, ಶೂರನೆಂಬ ವಸುದೇವನ ತಂದೆಯ ಕುಲದಲ್ಲಿ ಹುಟ್ಟಿದವನು. 2 ಆತ್ಮನು ಸ್ವಾಮಿಗೆ ಅಪೃಥಕ್ಸಿದ್ಧವಿಶೇಷಣನಾಗಿ ಕೌಸ್ತುಭಸ್ಥಾನೀಯನೆಂದು ಭಾವಿಸತಕ್ಕದ್ದು.

ವಿಧಿಪರಿಣತಿ ಭೇದಾದ್ವೀಕ್ಷಿತಸ್ತೇನ ಕಾಲೇ ।
ಗುರುಪರಿಷದುಪಜ್ಞಂ ಪ್ರಾಪ್ಯಗೋಪಾಯತಿಸ್ವಂ ॥೬॥

ಕಡೆಗೆ ಬಂದು ಕಾಲವಿಶೇಷದಲ್ಲಿ **ವಿಧಿಪರಿಣತಿಭೇದಾತ್** - ಯಾದೃಚ್ಛಿಕ ಸುಕೃತ ಪರಿಪಾಕಭೇದದಿಂದ, **ತೇನ** - ಆ ಕರುಣಾಸಾಗರನಿಂದ, **ಈಕ್ಷಿತಃ** - ದಿವ್ಯಕಟಾಕ್ಷದಿಂದ ನೋಡಲ್ಪಟ್ಟವನಾಗಿ, ಗುರುಪರಿಷದುಪಜ್ಞಂ - ಸತ್ಸಂಪ್ರದಾಯಾನುಷ್ಠಾನಪರರಾಗಿ ಮಹಾ ಭಾಗವತೋತ್ತಮರೆನಿಸಿದ ಗುರುಪರಂಪರೆಯಜ್ಞಾನಕ್ಕೆ, ಮೊದಲು ವಿಷಯನಾಗೋಣ ಹೇಗೋ ಹಾಗೆ ಅಂದರೆ ಸದ್ಗುರುಗಳ ಕಟಾಕ್ಷಕ್ಕೆ ಸಿಕ್ಕಿದವನಾಗಿ ಅವರ ಸಾನ್ನಿಧ್ಯದಿಂದ ಸತ್ಸಂಪ್ರದಾಯಾನುಷ್ಠಾನಪರನಾಗಿರೋಣ ಹೇಗೋ ಹಾಗೆ ಅಥವಾ ಗುರುಗಳ ಸಮೂಹದ ದೆಶೆಯಿಂದ ಪರಬ್ರಹ್ಮಪ್ರಾಪ್ತಿಗೆ ಸಾಧಕವಾದ ಪ್ರಥಮ ಜ್ಞಾನರೂಪವಾದ ಸತ್ಸಂಪ್ರದಾಯಾನುಷ್ಠಾನ ಜ್ಞಾನವನ್ನು ಹೊಂದೋಣವು ಹೇಗೋ ಹಾಗೆ, **ಸ್ವಂ** - ಸ್ವಕೀಯವಾದ ಜ್ಞಾನಾನಂದಾಮಲತ್ವ ಮೊದಲಾದ ನೈಜಸ್ವಭಾವವನ್ನು ಅಂದರೆ ತನ್ನ ಮೊದಲಿನ ಜ್ಞಾನವಿಕಾಸತ್ವ,ಆನಂದತ್ವ, ಹೇಯಗುಣರಾಹಿತ್ಯ ಮೊದಲಾದ ಸ್ವಭಾವವನ್ನು, **ಪ್ರಾಪ್ಯ** - ಹೊಂದಿದವನಾಗಿ, **ಗೋಪಾಯತಿ** - ರಕ್ಷಿಸಿಕೊಳ್ಳುತ್ತಾನೆ, ಅಂದರೆ ಆ ಸ್ವಾಮಿಕೈಂಕರ್ಯರೂಪವಾದ ಸಾಮ್ರಾಜ್ಯವನ್ನು ಹೊಂದುತ್ತಾನೆಂಬ ಭಾವವು.

ತಾತ್ಪರ್ಯ — ಜೀವಾತ್ಮನು ಸ್ವಭಾವತಃ ಜ್ಞಾನವಿಕಾಸವುಳ್ಳವನು, ತುಂಬಾ ವಿಲಕ್ಷಣವಾದ ಆನಂದ ಉಳ್ಳವನು, ಹೇಯಗುಣಗಳೇನೂ ಇಲ್ಲದೆ ತುಂಬಾ ಪರಿಶುದ್ಧನು. ಆದುದರಿಂದಲೇ ಇವನು "ಮಣಿವರ ಇವಶೌರೇಃ" ಸ್ವಾಮಿಯ ಕೌಸ್ತುಭರತ್ನವು ಹೇಗೆ ನಿರ್ದೋಷವಾಗಿಯೂ, ಪ್ರಕಾಶವಾಗಿಯೂ, ಸುಂದರವಾಗಿಯೂ ಇದ್ದುಕೊಂಡು ಸ್ವಾಮಿಯವಕ್ಷಸ್ಥಳವನ್ನು ಅಲಂಕರಿಸಲು ಯೋಗ್ಯವಾದುದಾಗಿ ತುಂಬಾ ಪ್ರಿಯವಾದುದೋ ಹಾಗೆಯೇ ಕೌಸ್ತುಭಸ್ಥಾನೀಯವಾದ ಜೀವಾತ್ಮನೂ ಕೂಡ ಸ್ವಾಮಿಗೆ ತುಂಬಾ ಪ್ರಿಯನು "ಜ್ಞಾನಾನಂದಮಯಸ್ತ್ವಾತ್ಮಾ ಶೇಷೋಹಿ ಪರಮಾತ್ಮನಃ[1]" ಅಂದರೆ "ಜೀವಾತ್ಮನು ಜ್ಞಾನಾಂದಸ್ವರೂ

1 ಎ. ಪು.

ಪನು ಪರಮಾತ್ಮನಿಗೆ ಶೇಷಭೂತನು" ಎಂಬದಾಗಿ ಹೇಳಲ್ಪಟ್ಟಿರುತ್ತದೆ. "ಮಮ ಪ್ರಾಣಾಹಿ ಪಾಂಡವಾಃ" ಎಂಬ ಶ್ರೀ ಕೃಷ್ಣನ ಉಕ್ತಿಯೂ "ತ್ವಯಿ ಕಿಂಚಿತ್ಸಮಾಪನ್ನೇ ಕಿಂಕಾರ್ಯಂ ಸೀತಯಾ ಮಮ" ಎಂಬ ಶ್ರೀರಾಮೋಕ್ತಿಯೂ ಇದಕ್ಕೆ ನಿದರ್ಶನಂಗಳಾಗಿವೆ. ಮತ್ತೂ "ಕದಾ ನ್ವಹಂ ಸಮೇಷ್ಯಾಮಿ ಭರತೇನ ಮಹಾತ್ಮನಾ । ಶತ್ರುಘ್ನೇನಚ ವೀರೇಣ[1]" "ಯಾವಾಗಲಾದರೆ ನಾನು ಆ ಮಹಾತ್ಮನಾದ ಭರತನೊಂದಿಗೂ ಆ ವೀರನಾದ ಶತ್ರುಘ್ನನೊಂದಿಗೂ ಸೇರುವೆನೋ" ಎಂದು ಶೋಕಿಸಿದ ಶ್ರೀರಾಮನಿಗೆ ಭರತ ಶತ್ರುಘ್ನರು ಅತೀವ ಪ್ರಿಯರು. ಅಂತಹ ಭಕ್ತನ ಮಾತುಗಳೂ ಕೂಡ ತುಂಬಾಪ್ರಿಯವು. "ಸಂಸ್ಮರಾ ಮ್ಯಸ್ಯ ವಾಕ್ಯಾನಿ ಪ್ರಿಯಾಣಿ ಮಧುರಾಣಿಚ | ಹೃದ್ಯಾನ್ಯಮೃತಕಲ್ಪಾನಿ ಮನಃ ಪ್ರಹ್ಲಾದನಾನಿಚ[2]" ಎಂದು ಹೇಳುತ್ತಾರೆ. ಅಂತಹ ಪರಿಶುದ್ಧವಾದ ಸ್ಥಿತಿಯಲ್ಲಿ ಚೇತನನು ಸ್ವಾಮಿಯ "ಕಿಂಕರತ್ವಾಧಿ ರಾಜ್ಯಂ" ಸ್ವಾಮಿಯ ಸನ್ನಿಧಿಯಲ್ಲಿ ಕೈಂಕರ್ಯವನ್ನೆಸಗುವದನ್ನು ಸಾಮ್ರಾಜ್ಯ ಪದವಿಯನ್ನಾಗಿ ಭಾವಿಸುವನು. "ಲಕ್ಷ್ಮಣೋ ಲಕ್ಷ್ಮಿವರ್ಧನಃ[3]" ಎಂಬಲ್ಲಿ ಲಕ್ಷ್ಮಣನು, ಯಾವಾಗಲೂ "ಅಹಂ ಸರ್ವಂಕರಿಷ್ಯಾಮಿ ಜಾಗ್ರತಸ್ಸ್ವಪತಶ್ಚತೇ[4]" ಶ್ರೀರಾಮನಿಗೆ, ಎಲ್ಲಾ ವಿಧ ಕೈಂಕರ್ಯವನ್ನೂ, ನೀನು ಎದ್ದೇ ಇರಲಿ, ಮಲಗಿಯೇ ಇರಲಿ, ಮಾಡಲುಳ್ಳವನೆಂದು ಪ್ರತಿಜ್ಞೆಯನ್ನು ಮಾಡಿ ದಾಸನಾಗಿರುವಲ್ಲಿ, "ಲಕ್ಷ್ಮಿವರ್ಧನನು" ಹೇಗೆ ? ವಾಲ್ಮೀಕಿ ಮಹರ್ಷಿಯ ಈ ಪ್ರಯೋಗವು ಸರಿಯೇ ? ಎಂದರೆ ತಾನು ಶೇಷಭೂತನೆಂದು ಅರಿತು ಕೈಂಕರ್ಯ ಸಾಮ್ರಾಜ್ಯದ ಮಹಿಮೆಯನ್ನರಿತವನಾದ ಪ್ರಯುಕ್ತ ಲಕ್ಷ್ಮಿವರ್ಧನನೇ ಹೌದು ಎಂದು ಮಹರ್ಷಿಯು ಸಮರ್ಥನೆ ಮಾಡಿ ಹೇಳಿರುತ್ತಾರೆ. ಈ ಚೇತನನು ಇಂತಹ ದಿವ್ಯ ಸ್ವರೂಪವುಳ್ಳವನಾಗಿದ್ದರೂ "ಕಲುಷಮತಿ" ಯಾಗಿರುವದರಿಂದ ಅಂತಹ ಮಹಿಮೆಯನ್ನು ಅರಿಯದವನಾಗಿರುತ್ತಾನೆ. ಏಕೆಂದರೆ,

---

1 ರಾ. ಅರಣ್ಯ ೧೬-೪೦. 2 ರಾ. ಅರಣ್ಯ ೧೬-೪೯.
3 ರಾ.ಬಾ. ೧೮-೨೮. 4 ರಾ. ಅಯೋ. ೩೧-೨೫.

ಅನೇಕ ಜನ್ಮ ಸಾಹಸ್ರೀಂ ಸಂಸಾರ ಪದವೀಂ ವ್ರಜನ್ ।
ಮೋಹಾಚ್ಛ್ರಮಂಪ್ರಯಾತೋಽಸೌ ವಾಸನಾರೇಣುಕುಂಠಿತಃ[1]॥

ಎಂದು ಹೇಳಿರುವಹಾಗೆ ಅನೇಕಸಹಸ್ರ ಜನ್ಮ ಸಂತತಿಗಳನ್ನು ಎತ್ತಿ ಸಂಸಾರದ ಬಲೆಗೆ ಸಿಕ್ಕಿ ಕರ್ಮವಾಸನಾದಿಗಳಿಂದ ಬಂಧಿಸಲ್ಪಟ್ಟವನಾಗಿ ಜ್ಞಾನಸಂಕೋಚವನ್ನು ಹೊಂದಿ ತನ್ನ ಶುದ್ಧಸ್ವರೂಪವನ್ನೆಲ್ಲಾ ಕಳದುಕೊಂಡಿರುವದರಿಂದ ಇಂತಹ "ಕಿಂಕರತಾಧಿರಾಜ್ಯದ ಮಹಿಮೆಯನ್ನು ತಿಳಿಯದೆ ಹೋಗುತ್ತಾನೆ. ಹೀಗೆಯೇ ಹೆಚ್ಚಾದ ಕ್ಲೇಶಗಳನ್ನನುಭವಿಸುತ್ತಲೇ ಹೋದರೆ ಇವನಿಗೆ ಪರಿಣಾಮ ಹೇಗೆ? ಇವನಿಗೇನೂ ಗತಿಇಲ್ಲವೋ ಎಂದರೆ, ಉತ್ತರಾರ್ಧದಿಂದ ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ. ಈ ಚೇತನನ ಯಾವುದಾದರೂ ಒಂದು ಸುಕೃತ ವಿಶೇಷವನ್ನು ಮುಂದಿಟ್ಟು, ಆತನು ಹುಟ್ಟುವಕಾಲದಲ್ಲಿ ತನ್ನ ದಿವ್ಯ ಕಟಾಕ್ಷದಿಂದ ನೋಡಿದವನಾಗಿ ಆ ಚೇತನನು ಸದ್ಗುರುವಿನ ಸಾನ್ನಿಧ್ಯವನ್ನು ಸೇರುವ ಹಾಗೆ ಮಾಡುವನು. ಸ್ವಾಮಿಗೆ ವೈಷಮ್ಯ ನೈರ್ಘೃಣ್ಯಾದಿಗಳ ಸಂಬಂಧವಿಲ್ಲವಾದುದರಿಂದ ಯಾವುದಾದರೂ ಒಂದು ಸುಕೃತವನ್ನು ಮುಂದಿಟ್ಟೇ ತನ್ನ ಕೃಪಾಕಟಾಕ್ಷದಿಂದ ಜಾಯಮಾನ ದೆಶೆಯಲ್ಲಿ ನೋಡುವನು. ಅ ಪ್ರಭಾವದಿಂದ ಸಾತ್ವಿಕ ಸಂಭಾಷಣೆಯು ಲಭಿಸಿ, ಅದರಿಂದ ಸದ್ಗುರು ಸಾನ್ನಿಧ್ಯವನ್ನು ಈ ಚೇತನನು ಹೊಂದಿ, ಅವರ ದಯೆಯಿಂದ ಜ್ಞಾನವನ್ನು ಸಂಪಾದಿಸಿ ಕೊಂಡು, ಮೋಕ್ಷವನ್ನು ಹೊಂದುವನು. ಅಂತಹ ಸದಾಚಾರ ಪ್ರಾಪ್ತಿಗೆ ಆರು ಕಾರಣಗಳನ್ನು ಹೇಳುತ್ತಾರೆ:

ಈಶ್ವರಸ್ಯಚ ಸೌಹಾರ್ದಂ ಯದೃಚ್ಛಾ ಸುಕೃತಂ ತಥಾ ।
ವಿಷ್ಣೋಃ ಕಟಾಕ್ಷ ಮದ್ವೇಷಂ ಆಭಿಮುಖ್ಯಂಚ ಸಾತ್ವಿಕೈಃ।
ಸಂಭಾಷಣಂ ಷಡೇತಾನಿ ಆಚಾರ್ಯ ಪ್ರಾಪ್ತಿ ಹೇತವಃ ॥

ಇಂತಹ ಆಚಾರ್ಯ ಪ್ರಾಪ್ತಿಯಿಂದ "ಕಲುಷಮತಿಯು" ಹೋಗಿ ತನ್ನ ಪೂರ್ವದ ನಿರ್ಮಲವಾದ ಸ್ವರೂಪ ಜ್ಞಾನವುಂಟಾಗಿ ಉಪಾಯಾನು

---

1 ವಿ. ಪು. ೬, ೭, ೧೪.

ಶ್ರಿಯಃಪತಿಯಾನ ಸರ್ವೇಶ್ವರನುಕ್ಕು ಶ್ರೀಕೌಸ್ತುಭಸ್ಥಾನೀಯನಾಯ್ ಕ್ಕೊಂಡು ಹೃದಯಙ್ಗಮನಾಯ್ ಕುಮಾರನೆನ್ರುಂ, ಪುತ್ರನೆನ್ರುಂ, ಶಿಷ್ಯನೆನ್ರುಂ, ಪ್ರೇಷ್ಯನೆನ್ರುಂ, ಶೇಷಭೂತನೆನ್ರುಂ, ದಾಸಭೂತನೆನ್ರುಂ, ಅಪ್ಪೋ ಶಾಸ್ತ್ರಂಗಳಿಲೇ ಪ್ರತಿಪನ್ನನಾಯಿಱುಕ್ಕುಂ ಜೀವಾತ್ಮಾ,

---

ಷ್ಠಾನವನ್ನು ಮಾಡಿ, ಸ್ವಾಮಿಚರಣಾರವಿಂದ ಕೈಂಕರ್ಯರೂಪಸಾಮ್ರಾಜ್ಯಲಕ್ಷ್ಮಿಯನ್ನೂ ತನ್ಮೂಲಕ ನಿರತಿಶಯಾನಂದವನ್ನೂ ಹೊಂದುವನೆಂಬ ತಾತ್ಪರ್ಯವು.

ಇಲ್ಲಿ "ಗುರುಪರಿಷದುಪಜ್ಞಂ" ಎಂದು ಹೇಳಿರುವದರಿಂದ ಸಾಧಾರಣವಾಗಿ ಚೇತನನು ಗುರುಸಾನ್ನಿಧ್ಯವನ್ನು ಹೊಂದಿ ಜ್ಞಾನಸಂಪಾದಿಸಿದಲ್ಲದೆ ಮೋಕ್ಷಪ್ರಾಪ್ತಿಯುಂಟಾಗಲಾರದೆಂಬುವದನ್ನು ಇದರಿಂದ ವ್ಯಕ್ತಪಡಿಸಿರುತ್ತಾರೆ, ಗುರುವು ಏತಕ್ಕೆ, ನಾನೇ ಜ್ಞಾನವನ್ನು ಸಂಪಾದಿಸಿಕೊಳ್ಳುವೆನು ಎಂಬ ಹೆಮ್ಮೆಯು ಸರಿಯಾದುದಲ್ಲವು. ಸರಿಯಾದ ಗುರೂಪದೇಶದ ಸಂಸ್ಕಾರವಿಲ್ಲದ ಜ್ಞಾನವು, ಋಜುವಲ್ಲದ ಮಾರ್ಗಗಳಲ್ಲಿ ಪ್ರವರ್ತನೆಯನ್ನುಂಟುಮಾಡಬಹುದು. ಈ ಅಭಿಪ್ರಾಯವು "ಗುರುಪರಿಷದುಪಜ್ಞಂ ಪ್ರಾಪ್ಯ" ಎಂಬುವದರಿಂದ ತೋರಿಬರುತ್ತದೆ.

ಜೀವನ ಮತ್ತು ಪರಮಾತ್ಮನ ಸ್ವಾಭಾವಿಕ ಸ್ವರೂಪಗಳು.

ಮೇಲೆ ಹೇಳಿದ " ಮಣಿವರ " ಎಂಬ ಶ್ಲೋಕಾರ್ಥವನ್ನು ದೃಷ್ಟಾಂತದೊಂದಿಗೆ ಉಪಪಾದಿಸುತ್ತಾರೆ. ಜೀವಾತ್ಮನು ಸರ್ವೇಶ್ವರನಿಗೆ " ಹೃದ್ಯ " ನೆಂಬದಾಗಿ ಹೇಳಲ್ಪಟ್ಟಿತು. ಅದು ಹೇಗೆ ಎಂಬುವದನ್ನು ಉಪಪಾದಿಸುತ್ತಾರೆ. ಜೀವಾತ್ಮನಿಗೂ ಪರಮಾತ್ಮನಿಗೂ ಇರುವ ಸಂಬಂಧವನ್ನು ತಿಳಿಸಿ ಜೀವನು ತನ್ನ ಸ್ವಾಭಾವಿಕವಾದ ಪರಿಶುದ್ಧಸ್ಥಿತಿಯಲ್ಲಿದ್ದಿದ್ದೇಯಾದರೆ ಎಂತಹ ಅನುಭವ ಉಂಟಾಗುತ್ತಿತ್ತೆಂಬುವದನ್ನು ಹೇಳಿ ಅದು ಹೇಗೆ ತಪ್ಪಿಹೋಗಿರುತ್ತದೆಂಬುದನ್ನು ವಿಶದವಾಗಿ ತೋರಿಸುತ್ತಾರೆ.

ಜೀವಾತ್ಮನಿಗೆ ಸ್ವತಸ್ಸಿದ್ಧನಾದ ಶೇಷಿಯು ಸರ್ವೇಶ್ವರನು.

[1]ಇವರ್ ತನಕ್ಕು [2]ವಕುತ್ತ ಶೇಷಿಯಾಯ್, "ಅಯರ್ವರು ಮಮು

" ಶ್ರಿಯಃಪತಿಯಾನ " ಅಂದರೆ ಲಕ್ಷ್ಮೀವಲ್ಲಭನಾದ ಸರ್ವೇಶ್ವರನಿಗೆ ಜೀವನು ಶ್ರೀ ಕೌಸ್ತುಭಸ್ಥಾನೀಯನು ಅಂದರೆ ಕೌಸ್ತುಭ ಮಣಿಯು ಹೇಗೆ ಪ್ರಿಯವೋ ಹಾಗೆ ಪ್ರಿಯನು. (ಹೇಗೆಂದರೆ ಕೌಸ್ತುಭವು ಜೀವಾತ್ಮರುಗಳಿಗೆ ಅಭಿಮಾನದೇವತೆಯು, ಆದುದರಿಂದ ಕೌಸ್ತುಭವು ಯಾವಾಗ ಸ್ವಾಮಿಗೆ ಪ್ರಿಯವಾಗಿ ವಕ್ಷಸ್ಥಳದಲ್ಲಿರಲು ಯೋಗ್ಯವೋ ಹಾಗೆಯೇ ತತ್ಸ್ಥಾನೀಯರಾದ ಜೀವಾತ್ಮರೂ ಕೂಡ ಪ್ರಿಯರು.) ಆದುದರಿಂದ ಜೀವಾತ್ಮನನ್ನು ಸ್ವಾಮಿಗೆ ' ಕುಮಾರ ' ನೆಂಬದಾಗಿಯೂ ' ಶಿಷ್ಯ ' ನೆಂಬದಾಗಿಯೂ, ' ಪ್ರೇಷ್ಯ ' ಎಂದರೆ ಸೇವಕನೆಂಬದಾಗಿಯೂ, ಶೇಷಭೂತನೆಂಬದಾಗಿಯೂ, ದಾಸಭೂತನೆಂಬದಾಗಿಯೂ, ಶಾಸ್ತ್ರಗಳಲ್ಲಿ ಉಪಪಾದಿಸಲ್ಪಟ್ಟದೆ. ಹಾಗೆ ಹೇಳಿರುವ ಶಾಸ್ತ್ರಪ್ರಮಾಣಗಳು ಯಾವವೆಂದರೆ—

(೧) ಅವಿಜ್ಞಾತಾಃ ಕುಮಾರಕಾಃ, (೨) ಭಗವತೋಽಹಂ ಪುತ್ರಃ ಪ್ರೇಷ್ಯಶ್ಶಿಷ್ಯಶ್ಚ, (೩) ಶಿಷ್ಯಸ್ತೇಽಹಂ ಶಾಧಿಮಾಂ ತ್ವಾಂ ಪ್ರಪನ್ನಂ, (೪) ದಾಸೋಽಹಂತೇ ಜಗನ್ನಾಥ ಸಪುತ್ರಾದಿ ಪರಿಗ್ರಹಃ । ಪ್ರೇಷ್ಯಃ ಪ್ರಶಾಧಿಕರ್ತವ್ಯೇಮಾಂ ನಿಯುಂಕ್ಷ್ವಹಿತೇ ಸದಾ, (೫) ನಾಯಂ ದೇವೋ ನಮರ್ತ್ಯೋವಾ ನತಿರ್ಯಕ್ಸ್ಥಾವರೋಽಪಿವಾ, (೬) ಮಕಾರೋಸ್ತು ತಯೋರ್ದಾಸಃ, (೭) ದಾಸಭೂತಾಸ್ಸ್ವತಸ್ಸರ್ವೇಹ್ಯಾತ್ಮಾನಃ ಪರಮಾತ್ಮನಃ ಇತ್ಯಾದಿಗಳು.

---

1 ಇವರ್‌ತನಕ್ಕು - ಇವನಿಗೆ ಅಂದರೆ ಜೀವಾತ್ಮನಿಗೆ ಅಥವಾ, ಇವರ್ ತನಕ್ಕು ಎಂದು ಬೇರೆಬೇರೆ ಪದವಾಗಿ ತೆಗೆದುಕೊಂಡರೆ, ಇವರ್ ಎಂಬುದು " ಇಟ್ಟು ಎರಡು " ಎಂಬುವದಕ್ಕೆ ಕರ್ತೃಪದವಾಗಿ ಊಹಿಸಬಹುದು.

2 ವಕುತ್ತ - ಪ್ರಾಪ್ತನಾದ.

ರರ್ಗಳಧಿಪತಿಯಾಯ್, ಉಯರ್ವರವುಯ ರ್ ನಲ" ಮುಡೈಯ ವನಾಯ್, ನಮುಕ್ಕುಮ್ಪೂರ್ವಿ ಮಿಶೈ ನಂಗೈಕ್ಕುಮಿನ್ಬನಾ ಯ್, ಞಾಲತ್ತಾರ್ ತಮುಕ್ಕುಂ ವಾನತ್ತವರ್ಕ್ಕುಂ ಪೆರುಮಾ

"ಜೀವಾತ್ಮಾ" ಎಂಬ ಕರ್ತೃ ಪದಕ್ಕೆ "ಯಥಾವತ್ಪ್ರಕಾಶರ ಹಿತನಾಯ್‌ನಿರ್ಕ" ಎಂದು ಮುಂದು ಬರುವದರೊಂದಿಗೆ ಅನ್ವಯವು

(ಇಂತಹ ಅಮಲನಾದ ಜೀವಾತ್ಮನಿಗೆ ಅನುರೂಪನಾದ ಶೇಷಿ ಯೊಬ್ಬನುಂಟು, ಅವನೇ ಸರ್ವೇಶ್ವರನೆಂದು ಹೇಳುತ್ತಾರೆ.)

ಅರ್ಥ—ಇಂತಹ ಜ್ಞಾನಾನಂದಾಮಲತ್ವಾದಿಗಳಿಂದ **ಪರಿಶುದ್ಧ** ನಾದ ಜೀವಾತ್ಮನಿಗೆ ದೊರೆತ ಶೇಷಿಯಾಗಿಯೂ **ಅಯರ್ವರುಂ** - ಅಜ್ಞಾನಗಳ ಗಂಧವೇ ಇಲ್ಲದಿರುವ, **ಅಮರರ್ಗಳ್** - ನಿತ್ಯಸೂರಿಗಳಿಗೆ ಅಧಿಪತಿಯೂ, **ಉಯರ್ವರ**-ತನಗಿಂತಲೂ ಇತರವಾದವುಗಳಿಗೆ ಉಚ್ಛ್ರಾಯವಿಲ್ಲದಿರುವ, **ಉಯರ್ನಲಮುಡೈಯವನಾಯ್** - ನಿರವಧಿಕಾನಂದಾದಿ ಕಲ್ಯಾಣಗುಣಗಣಮಹೋದಧಿಯಾದ, ಮತ್ತೂ **ನಮುಕ್ಕುಂ**-ಈಗ ದುಷ್ಕರ್ಮಪರಿಪಾಕದಿಂದ ನೀಚರಾಗಿರುವ ನಮಗೂ, **ಪೂರ್ವಿ ಮಿಶೈ** - ಕಮಲಾಲಯಳಾದ, **ನಂಗೈಕ್ಕುಂ** - (ವಿಲಕ್ಷಣ ದಿವ್ಯಮಂಗಳ ವಿಗ್ರಹ, ಸೌಕುಮಾರ್ಯಲಾವಣ್ಯಾದಿ ಗುಣಗಳಿಂದ) ಪರಿಪೂರ್ಣಳಾದ ಲಕ್ಷ್ಮಿಗೂ ಸಹ ಪ್ರೇಮಪಾತ್ರನಾಗಿ, (ಅಂದರೆ ದೀನರಾದ ನಮ್ಮಲ್ಲೂ ಪರಿಪೂರ್ಣ ವಿಭವೈಶ್ವರ್ಯಾದಿಗಳುಳ್ಳ ಲಕ್ಷ್ಮಿಯಲ್ಲೂ ಒಂದೇ ವಿಧವಾದ ಪ್ರೀತಿಯನ್ನಿಟ್ಟಿರುವ ಎಂಬ ಭಾವವು) ಮತ್ತೂ **ಞಾಲತ್ತಾರ್ ತಮುಕ್ಕುಂ** - ಭೂಮಿಯಲ್ಲಿರುವವರಿಗೂ, **ವಾನತ್ತವರ್ಕ್ಕುಂ** - ವೈಕುಂಠದಲ್ಲಿರುವವರಿವಿಗೂ ಕೂಡ, **ಪೆರುಮಾನಾನ** - ಸ್ವಾಮಿಯಾದ, (ಅಂದರೆ ಲೀಲಾವಿಭೂತಿ, ನಿತ್ಯವಿಭೂತಿಗಳಾದ ವಿಭೂತಿದ್ವಯಗಳಿಗೂ ಸ್ವಾಮಿಯಾದ ಸರ್ವೇಶ್ವರನಿಗೂ ಶೇಷಶೇಷಿಸಂಬಂಧವು ಹೇಳಲ್ಪಟ್ಟು, ಸರ್ವೇಶ್ವರನಿಗೆ ಲಕ್ಷ್ಮಿಯು ಹೇಗೆ ಪ್ರಿಯಳೋ, ಹಾಗೆಯೇ ಈ ಚೇತನನೂ ಪ್ರಿಯನೆಂಬದಾಗಿ ಹೇಳಲ್ಪಟ್ಟಿತು. "ಪ್ರಿಯೋಹಿ ಜ್ಞಾನಿನೋಽರ್ಥಂ

ಸಾನ ಸರ್ವೇಶ್ವರ್ರ " ವೈಕುಂಠೇತು ಪರೇಲೋಕೇ ಶ್ರಿಯಾಸಾರ್ಥಂ ಜಗತ್ಪತಿಃ । ಆಸ್ತೆ " ಎನ್ರುಂ, "[1] ಒಣ್ದೊಡಿಯಾಳ್ ತಿರುಮಗಳುಂ ನೀಯುಮೇ ನಿಲಾನಿರ್ಪ" ಎನ್ರುಂ, ಶೊಲ್ಲುಗಿರಪಡಿಯೇ

ಅಹಂಸಚ ಮಮಪ್ರಿಯಃ" (ಗೀತೆ ೭, ೧೭) ಎಂಬ ಗೀತಾಶ್ಲೋಕಾರ್ಥವು ಇಲ್ಲಿ ಅನುಸಂಧೇಯವು.)

ಪರೇಲೋಕೆ - ಶ್ರೇಷ್ಠವಾದ ಲೋಕವಾದ, **ವೈಕುಂಠೇತು** - ವೈಕುಂಠದಲ್ಲಾದರೋ, **ಶ್ರಿಯಾಸಾರ್ಥಂ** - ಲಕ್ಷ್ಮೀದೇವಿಯೊಡನೆ, **ಜಗತ್ಪತಿಃ** - ಲೋಕನಾಯಕನಾದ, ಪರಮಪುರುಷನು, ಎಂಬದಾಗಿಯೂ (ಸ್ವಾಮಿಯು ತನ್ನ ಲೀಲಾವಿಭೂತಿಯಾದ ಈ ಜಗತ್ತನ್ನೆಲ್ಲಾ ವ್ಯಾಪಿಸಿದವನಾಗಿದ್ದರೂ, ತನ್ನ ನಿತ್ಯವಿಭೂತಿಯಲ್ಲಿ ಅರ್ಚ್ಯಾವತಾರರೂಪದಲ್ಲಿ ಹೇಗೋ ಹಾಗೆ ದಿವ್ಯಮಂಗಳ ವಿಗ್ರಹಯುಕ್ತನಾಗಿ, ತನಗೆ ತುಂಬಾ ಪ್ರಿಯರಾದ ನಿತ್ಯಮುಕ್ತರಿಗೆ ದಿವ್ಯಾನುಭವಗಳನ್ನುಂಟುಮಾಡಿರುವನೆಂಬರ್ಥವು.)

ಒಣ್ - ಬಹಳ ಸೌಂದರ್ಯವುಳ್ಳ, **ತೊಡಿಯಾಳ್** - ಕೈಬಳೆ ಮೊದಲಾದ ಭರಣಗಳನ್ನು ಧರಿಸಿರುವ, **ತಿರುಮಗಳುಂ** - " ಸರ್ವಲಕ್ಷಣಸಂಪನ್ನಾ ನಾರೀಣಾಂ ಉತ್ತಮಾವಧೂಃ[2]" ಎಂದು ವಾಲ್ಮೀಕಿ ಮಹರ್ಷಿಯು ಹೇಳಿರುವ ಹಾಗೆ, **ನೀಯುಮುಂ** – ನೀನೂ ಸಹ, **ನಿಲಾನಿರ್ಪ** – ಇರುತ್ತಿರುವಾಗ ಎಂದು ಹೇಳಿರುವ ಹಾಗೆ ತನ್ನ ಹಿರಿಯ ಹೆಂಡತಿಯಾದ ಶ್ರೀಮಹಾಲಕ್ಷ್ಮಿಯೊಂದಿಗೆ, **ತೆಳಿವಿಶುಂಬಿಲೆ** - ನಿರ್ಮಲವಾದ ಶುದ್ಧಸತ್ವಮಯ ವೈಕುಂಠದಲ್ಲಿ •(ಇಲ್ಲಿ ಯಾವಾಗಲೂ ರಜಸ್ತಮೋಗುಣಗಳಿಗೆ ಅವಕಾಶವಿಲ್ಲದುದರಿಂದ, ಜ್ಞಾನವಿಕಾಸವುಂಟು, ಅದರಿಂದ ಜ್ಞಾನವಿಕಾಸವನ್ನುಂಟುಮಾಡುವ ಪರಮಾಕಾಶವೆಂದು ತಾತ್ಪರ್ಯವು), **ಯಾ** - ಯಾವ ಪ್ರಸಿದ್ಧವಾದ ನಗರಿಯು, (ದಿವ್ಯ ವೈಕುಂಠವು.) **ನಾಕಂಪರೇಣ** - ಸ್ವರ್ಗಕ್ಕೂ ಮೇಲಿರುವದಾಗಿಯೂ, **ಸ್ಥಿತಾ** -

1 ತಿರುವಾಯ್ಮೊಳಿ ೪, ೯, ೧೦. 2 ರಾ. ಬಾ. ೧, ೨೭.

ಪೆರಿಯ ಪಿರಾಟ್ಟಿಯಾರೋಡೆ ಕೂಡ ತ್ತೆಳಿವಿಶುಂಬಿಲೆ “[1]ಯಾ ಯೋಧ್ಯೇತ್ಯ ಪರಾಜಿತೇತಿ ವಿದಿತಾ ನಾಕಂ ಪರೇಣ ಸ್ಥಿತಾ[2]” ಎನ್ನಿರಪಡಿಯೇ ಅಯೋಧ್ಯಾದಿ ಶಬ್ದವಾಚ್ಯಮಾನ ಕಲಂಗಾಪ್ಪೆರಿನಗರಿಲೆ ಸಹಸ್ರಸ್ಥೂಣಾದಿ ವಾಕ್ಯಂಗಳಾಲೇ ಯೋದಪ್ಪಡುಗಿರ ತಿರುಮಾ

ಇರುವಂಥಾದ್ದಾಗಿ, **ಅಯೋಧ್ಯೇತಿ** - ಅಯೋಧ್ಯೆ ಎಂಬದಾಗಿಯೂ (ಭಗವದನುಭವಕ್ಕೆ ಸ್ವಲ್ಪವೂ ವಿಚ್ಛೇದವಿಲ್ಲದ್ದು) **ಅಪರಾಜಿತೇತಿ** - ಜಯಿಸಲಸಾಧ್ಯವಾದುದು ಎಂಬದಾಗಿಯೂ, **ವಿದಿತಾ**[3] - ಶ್ರುತಿಗಳಲ್ಲಿ ಹೇಳಲ್ಪಟ್ಟಿರುತ್ತದೋ ಎಂದು ಹೇಳಿರುವಹಾಗೆ, ಅಯೋಧ್ಯೆಯೇ ಮೊದಲಾದ ಶಬ್ದಗಳಿಂದ ಹೇಳಿಸಿಕೊಳ್ಳುವ, **ಕಲಂಗಾಪ್ಪೆರುನಗರಿಲೆ** - ಒಂದು ವಿಧವಾದ ವಿಚ್ಛೇದವೂ ಇಲ್ಲದ ದೊಡ್ಡ ಪಟ್ಟಣದಲ್ಲಿ (ಅಲ್ಲಿನ ಆನಂದಕ್ಕೂ ಸ್ವಾಮಿ ಕೈಂಕರ್ಯಕ್ಕೂ ಯಾವದೊಂದು ವಿಚ್ಛೇದವಿಲ್ಲವೆಂಬ ತಾತ್ಪರ್ಯವು.)

ಸಹಸ್ರಸ್ಥೂಣ[4]—ಸಾವಿರ ಕಂಭಗಳು, ಇವೆ, ಎಂಬಿವೇ ಮೊದಲಾದ ವಾಕ್ಯದಿಂದ ತೋರಿಬರುವ ಶ್ರೇಷ್ಠವಾದ ರತ್ನಖಚಿತವಾದ

1 ಶ್ರೀಗುಣರತ್ನಕೋಶಂ ೨೨.

2 ಪರೇಣನಾಕಂ ನಿಹಿತಂ ಗುಹಾಯಾಂ ವಿಭ್ರಾಜತೇ ಯದ್ಯತಯೋ ವಿಶಂತಿ ಎಂಬ ಶ್ರುತಿಯ ಉಪಬ್ರಹ್ಮಣವು ಪ್ರಕೃತಿಗೂ ವಿಲಕ್ಷಣವಾಗಿ ನಿರತಿಶಯ ಸುಖಕ್ಕಾವಾಸವಾಗಿ ಯಾವ ವೈಕುಂಠವು ಪ್ರಕಾಶಿಸುತ್ತಿದೆಯೋ ಅದನ್ನು ಯತಿಗಳು ಪ್ರವೇಶಿಸುವರು.

3 ಅಂತಹ ಶ್ರುತಿಪ್ರಮಾಣಗಳು ಯಾವುವೆಂದರೆ—“ ದೇವಾನಾಂ ಪೂರಯೋಧ್ಯಾ ” “ ಪುರೀಂ ಹಿರಣ್ಮಯೀಂ ಬ್ರಹ್ಮ ಪರೇಣನಾಕಂ ನಿಹಿತಂ ”.

4 ದಿವ್ಯ ಶ್ರೀ ವೈಕುಂಠದಲ್ಲಿ ಶ್ರೀಮನ್ನಾರಾಯಣನು ಬಿಜಮಾಡಿಸಿರುವ ಮಂಟಪಕ್ಕೆ ಸಾವಿರ ಕಂಭಗಳಿವೆ ಎಂಬದಾಗಿ ಕೌಷೀತಕೀ ಬ್ರಾಹ್ಮಣ ಪ್ರಮಾಣವಿದೆ ಎಂದು ತಿಳಿಸುತ್ತಾರೆ. ಶ್ರೀರಂಗಕ್ಷೇತ್ರವು ಭೂವೈಕುಂಠವೆಂದು ನಿದರ್ಶನ ಮಾಡುವದಕ್ಕಾಗಿ ಪ್ರಪನ್ನನು ದೇಹಾವಸಾನಾನಂತರ ಹೇಗೆ ಹೋಗಿ ಪರಮಪದ

ಮಣಿಮಂಟಪತ್ತಿಲೆ ಕೌಷೀತಕೀ ಬ್ರಹ್ಮಣಾದಿಗಳಿಲೇ ಯೋಡಪ್ಪ ಡುಗಿರ ಪರ್ಯಂಕ ವಿಶೇಷತ್ತಿಲೆ "ಶೆನ್ರಾಲ್[1] ಕುಡೈಯಾ ಮಿರುನ್ದಾಲ್ ಶಿಂಗಾಸನಮಾಂ" ಎನ್ರುಂ, "ನಿವಾಸ[2] ಶಯ್ಯಾಸನ" ಎನ್ರುಂ

ಮಂಟಪದಲ್ಲಿ ಕೌಷೀತಕೀ[3] ಬ್ರಾಹ್ಮಣದಲ್ಲಿ ಹೇಳಿರುವ, ಪರ್ಯಂಕ ವಿಶೇಷ ಅಂದರೆ ದಿವ್ಯ ಮಂಚದಲ್ಲಿ, "ಶೆನ್ರಾಲ್ ಕುಡೈಯಾಂ" ಅಂದರೆ ಹೋಗುತ್ತಿದ್ದರೆ ಕೊಡೆಯಾಗುವನು. "ಇರುನ್ದಾಲ್ ಸಿಂಗಾಸನ ಮಾಂ" ಸಿಂತರೆ ಸಿಂಹಾಸನವಾಗುವನು, (ಆದಿಶೇಷನು, ಸ್ವಾಮಿ ಸಂ ಚಾರಕಾಲದಲ್ಲಿ ಬಿಸಲು ಮುಂತಾದವುಗಳ ಬಾಧೆ ಇಲ್ಲದ ಹಾಗೆ ಶ್ವೇತ ಛತ್ರರೂಪವನ್ನು ತಾಳುವನು, ವಿಶ್ರಮಿಸಿಕೊಳ್ಳುವ ಕಾಲದಲ್ಲಿ ಸಿಂಹಾ ಸನರೂಪವನ್ನು ಹೊಂದುವನು. ಹೀಗೆ ಯಾವಾಗಲೂ ಕೈಂಕರ್ಯನಿರತ ನಾಗಿಯೇ ಇರುವನು ಎಂಬ ಭಾವವು) ಎಂಬದಾಗಿಯೂ, "ನಿವಾಸ ಶಯ್ಯಾ ಸನ ಪಾದುಕಾಂಶುಕೋಪಧಾನ ವರ್ಷಾತಪವಾರಣಾದಿಭಿಃ। ಶರೀರಭೇದೈಸ್ತವ ಶೇಷತಾಂಗತೈ ಯಥೋಚಿತಂ ಶೇಷ ಇತೀರ್ಯತೇ ಜನೈಃ" ಅಂದರೆ ಆದಿಶೇಷನು ಮಳೆ, ಬಿಸಲು ಮುಂತಾದವುಗಳ ತೊಂದರೆ ಇಲ್ಲದ ಹಾಗೆ, ಮನೆ, ಹಾಸಿಗೆ, ಸಿಂಹಾಸನ, ಪಾದುಕೆ, ಅಂಶುಕ ಅಂದರೆ ಪೀತಾಂ

ವನ್ನು ಹೊಂದುವನೆಂಬುವದರ ಪ್ರದರ್ಶನಕ್ಕಾಗಿ ತಿರುವಧ್ಯಯನೋತ್ಸವವು ಏರ್ಪಟ್ಟ ಆಗ ಸ್ವಾಮಿಯು ಆಳ್ವಾರ ಮೋಕ್ಷಕಾಲದಲ್ಲಿ ಇಂತಹ ಮಂಟಪದಲ್ಲಿ ಸೇವೆ ಯನ್ನು ಕೊಡುವದಕ್ಕಾಗಿ ಸಾವಿರ ಕಂಭಗಳ ಮಂಟಪವು (ಆಯಿರಂ ಕಾಲ್ ಮಂ ಟಪಂ) ನಿರ್ಮಿಸಲ್ಪಟ್ಟಿರುತ್ತದೆ. ಅವುಗಳಲ್ಲಿ ಕೆಲವು ಕಂಭಗಳು ಈಗ ಶಿಥಿಲ ವಾಗಿ ಬಿದ್ದುಹೋಗಿವೆ.

1 ಮುದಿಲ್ ತಿರುವಂದಾದಿ ೫೩. 2 ಆಳವಂದಾರ್ ಸ್ತೋತ್ರ ೪೦.

3 ಸಹಸ್ರಸ್ಥೂಣಾದಿವಾಕ್ಯ ಯಾವುದೆಂದರೆ—" ಸಹಸ್ರಸ್ಥೂಣೇ ವಿಮಿತೇ ದೃಢ ಉಗ್ರೇಯತ್ರ ದೇವಾನಾಂ ಮಧಿದೇವ ಆಸ್ತೇ ". ಕೌಷೀತಕೀ ಬ್ರಾಹ್ಮಣವಾಕ್ಯವು—" ಸ ಆಗಚ್ಛತ್ಯಮಿತೌಜಸಂ ಪರ್ಯಂಕಂ ಸಪ್ರಾಣಂ ತಸ್ಯ ಭೂತಂಚ ಭವಿಷ್ಯಂಚ " " ತಸ್ಮಿನ್ ಬ್ರಹ್ಮಾಸ್ತೇ "

ಶೊಲ್ಲುಗಿರಪಡಿಯೆ ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತ ಸರ್ವವಿಧ ಕೈಂಕರ್ಯಗಳೈಯುಂ ಸರ್ವವಿಧಶರೀರಂಗಳಾಲೆ ಯನುಭವಿತ್ತು, ಶೇಷತ್ವಮೇ ತನಕ್ಕು ನಿರೂಪಕಮಾಕೈಯಾಲೆ ಶೇಷನೆನ್ರೇ ತಿರುನಾಮಮಾಂಪಡಿಯಾನ ತಿರುವನಂತಾಳ್ವಾನಾಕಿರ ತಿರುಪಳ್ಳಿಮೆತ್ತೈಯಿಲೆ ವಾನಿಳವರಶಾಯ್ ಕ್ಕೊಂಡು ತಾಣ್ವಾಳ್ ಗಿರವಾಳ್ವೈಸರ್ವಾತ್ಮಕ್ಕಳುಮನುಭವಿತ್ತು ಕೃತಾರ್ಥರಾಗವೇಣುಮೆನ್ರು ಸಹೃದನಾಯಿರುಕ್ಕಿರ ವಿರುಪ್ಪಡಿಯಾಕ ನಿತ್ಯಾನುಭವಂ ಪಣ್ಣುಕಿರ ಅಂತಮಿಲ್[1] ಪೇರಿನ್ಬ[2]ತ್ತಡಿಯರಾನ ನಿತ್ಯಸೂರಿಗ

ಬರ, ಉಪಧಾನವೆಂದರೆ ದಿಂಬು, ಈ ರೀತಿಯಾಗಿ ಸ್ವಾಮಿಗೆ ಕೈಂಕರ್ಯವನ್ನು ಮಾಡುವದರಿಂದ ಶೇಷಶಬ್ದವು ತನಗೆ ಸಾರ್ಥವತ್ತಾಗಿದೆ ಎಂದು ಜನರು ಹೇಳುವ ಹಾಗೆ, ಸರ್ವದೇಶ, ಸರ್ವಕಾಲ, ಸರ್ವಾವಸ್ಥೆಯಲ್ಲೂ ಸ್ವಾಮಿಗೆ ಯೋಗ್ಯವಾದ ಕೈಂಕರ್ಯಗಳನ್ನೂ, ಮೇಲೆ ಹೇಳಿದ ನಾನಾವಿಧ ರೂಪದಲ್ಲಿ ಮಾಡುವದೇ ತನ್ನ ಸ್ವರೂಪಕ್ಕೆ ನಿಯತಧರ್ಮವಾದುದರಿಂದ "ಶೇಷ" ನೆಂಬ ಶ್ರೇಷ್ಠವಾದ ನಾಮವನ್ನು ಹೊಂದಿದ ಅನಂತನೆಂಬ ದಿವ್ಯವಾದ ಹಾಸಿಗೆಯಲ್ಲಿ **ವಾನಿಳವರಶಾಯ್ ಕೊಂಡು** ಅಂದರೆ ಪರಮಪದದಲ್ಲಿ ಯುವರಾಜನಾಗಿದ್ದುಕೊಂಡು, ತಾನನುಭವಿಸುವ ನಿರತಿಶಯಭೋಗಸುಖಗಳನ್ನು ಸರ್ವಜೀವಾತ್ಮರೂ ಹೊಂದಿ ಕೃತಾರ್ಥರಾಗಬೇಕೆಂಬ ಸ್ಥಿರಸಂಕಲ್ಪಚಿತ್ತನಾಗಿರುವದಕ್ಕನುಸಾರವಾಗಿ (ಅದು ಹೇಗೆಂದರೆ ಆತನನ್ನು ಕುರಿತು, "ಸರ್ವಸ್ಯಶರಣಂ ಸುಹೃತ್" "ಸುಹೃದಂ ಸರ್ವಭೂತಾನಾಂ" ಎಂಬದಾಗಿ ಪ್ರಮಾಣಗಳು ಉದ್ಘೋಷಿಸುವದರಿಂದ ಆತನು ಪರಮ ಕಾರುಣಿಕನಾದ ಪ್ರಯುಕ್ತ ಎಲ್ಲರಿಗೂ ಪ್ರಿಯನು ಮತ್ತು ರಕ್ಷಕನು. ಹೀಗೆ ಜೀವನನ್ನು ರಕ್ಷಿಸ

1 ಅಂತಮಿಲ್ - ಅಂತ್ಯವಿಲ್ಲದ ಅಂದರೆ ನಾಶರಹಿತವಾದ.

2 ಪೇರಿನ್ಬು - ದೊಡ್ಡಸುಖ, ಪೇರಿನ್ಬತ್ತು ಅಂದರೆ ನಿರತಿಶಯಾನಂದವನ್ನು ಹೊಂದಿದ, ಅಡಿಯರಾನ - ದಾಸಭೂತರಾದ, ಒಕ್ಕ - ಸಮನಾಗಿ.

ಟೋಡೊಕ್ಕತ್ತಾನುಂ ಸ್ವಾಮಿ ಕೈಂಕರ್ಯತ್ತುಕ್ಕು ಸ್ವರೂಪಯೋಗ್ಯತೆಯಾಲೆ ಇಟ್ಟುಪಿರಂದು ವೈತ್ತು [1]ಅನಾದಿಮಾಯಯಾಲೆ ಸುಪ್ತನಾಯ್. " [2]ಅನೇಕ ಜನ್ಮ ಸಾಹಸ್ರೀಂ ಸಂಸಾರ ಪದವೀಂ ವ್ರಜ್ । ಮೋಹಶ್ರಮಂ[3] ಪ್ರಯಾತೋ ಸೌ ವಾಸನಾ ರೇಣು

ಬೇಕೆಂದು ಸತ್ಯಸಂಕಲ್ಪವನ್ನು ಧರಿಸಿರುತ್ತಾನೆಂಬ ಭಾವವು) ನಿರಂತರ ಅನುಭವಿಸುತ್ತಿರುವ, ನಿರತಿಶಯವಾದ ನಾಶರಹಿತವಾದ ಆನಂದವನ್ನು ಹೊಂದಿ ದಾಸಭೂತರಾಗಿ ಕೈಂಕರ್ಯಮಾಡಿಕೊಂಡಿರುವ ನಿತ್ಯಸೂರಿಗಳ ಹಾಗೆಯೇ ಜೀವಾತ್ಮನಾದ ತಾನೂ ಸರ್ವೇಶ್ವರನಿಗೆ ಕೈಂಕರ್ಯ ಮಾಡಲು ಯೋಗ್ಯತೆಯನ್ನು ತಂದೆಯಿಂದ ಪ್ರಾಪ್ತವಾದ ದಾಯಧನದ ಹಾಗೆ ಕೊಟ್ಟು ಇಟ್ಟದ್ದರೂ, ಈ ಜೀವನು ತನಗೆ ಅನಾದಿಯಾಗಿ ಬಂದ ಅವಿದ್ಯೆಯಿಂದ ಜ್ಞಾನಸಂಕೋಚವನ್ನು ಹೊಂದಿದವನಾಗಿ, " **ಅನೇಕ ಜನ್ಮಸಾಹಸ್ರೀಂ** - ಅನೇಕ ಜನ್ಮ ಸಹಸ್ರಗಳಿಂದ ಬಂದ, **ಸಂಸಾರ ಪದವೀಂ** - ಸಂಸಾರಮಾರ್ಗವನ್ನು ಕುರಿತು, **ವ್ರಜ್** - ಸಂಚರಿಸುವವನಾಗಿ

1 ಮಾಯಾ ಶಬ್ದಕ್ಕೆ "ಮಾಯಾಂತು ಪ್ರಕೃತಿಂ ವಿದ್ಧಿ ಮಾಯಿನಂತು ಮಹೇಶ್ವರಂ" ಎಂಬ ಪ್ರಮಾಣರೀತ್ಯಾ ಪ್ರಕೃತಿ ಎಂದು ಅರ್ಥ ಹೇಳಬಹುದು. ಯಾವಾಗ ಜೀವನು ಲೀಲಾವಿಭೂತಿಗೆ ಸ್ವಾಮಿ ಸಂಕಲ್ಪದಿಂದ ಸೇರಿದನೋ ಆಗ ಕರ್ಮಸಂಬಂಧವೂ ಇರುವದರಿಂದ ಅಜ್ಞಾನದಿಂದ ಆವೃತನಾಗಿದ್ದಾನೆಂದು ಹೇಳಬಹುದು. ಅಥವಾ ಪ್ರಳಯ ದೆಶೆಯಲ್ಲೂ " ಅಕ್ಷರಂ ತಮಸಿಲೀಯತೆ ತಮೋ ದೇವೇ ಏಕೀಭವತಿ " ಎಂದು ಹೇಳಿರುವಹಾಗೆ ಪ್ರಕೃತಿ ಸಂಬಂಧದೊಡನೆ ಸ್ವಾಮಿಯಲ್ಲೇ ಲೀನನಾಗಿರುತ್ತಾನೆಂದೂ ಅನಂತರ ಸೃಷ್ಟಿಕಾಲದಲ್ಲಿ ಈತನು ಪ್ರಬುದ್ಧನಾದರೂ ಆಗಲೂ " ಅನೇಕಜನ್ಮಸಾಹಸ್ರೀಂ " ಎಂಬ ವಿಷ್ಣುಪುರಾಣ ವಚನರೀತ್ಯಾ ಅನೇಕ ಜನ್ಮಗಳ ವಾಸನಾಬಲದಿಂದ ಜ್ಞಾನಮಾಲಿನ್ಯವನ್ನು ಹೊಂದಿರುತ್ತಾನೆಂದು ಹೇಳುತ್ತಾರೆ.

3 ವಿ. ಪು. ೬, ೭, ೧೯.

3 " ಮೋಹಾಚ್ಛ್ರಮಂ " ಎಂದು ಪಾಠಾಂತರವುಂಟು.

ಕುಂಠಿತಃ ॥ ಎಙ್ಙರಪಡಿಯೋ ಪ್ರಕೃತಿಯಾಗಿರ [1]ಪಾಳಿಲೆ ವಿಳುಂದು, ಓಡಿಯೋಡಿಪ್ಪಲ ಪಿರಪ್ಪುಂ ಪಿರನ್ದು [2]ತಟ್ಟಿತ್ತಾವತ್ತು [3]ಅಳುಕ್ಕಡೈನ್ದೊಳಿಯುಳಿಂದ ಪಡಿಯಾಲೆ ತತ್ವಹಿತ ವಿಷಯನಾಯ್ ಯಥಾವತ್ಪ್ರಕಾಶರಹಿತನಾಯ್ ನಿರ್ಕ ;

ಅಸೌ - ಈ ಜೀವನು, **ವಾಸನಾರೇಣುಕುಂಠಿತಃ** - ಪೂರ್ವಜನ್ಮವಾಸನಾ ಎಂಬ ಧೂಳಿನಿಂದ ಕಲುಷಿತನಾಗಿ, **ಮೋಹಶ್ರಮಂ** - ಮೋಹದಿಂದ ಶ್ರಮವನ್ನು, **ಪ್ರಯಾತಃ** - ಹೊಂದಿದವನಾಗುತ್ತಾನೆ ಎಂದು ಹೇಳಿರುವಹಾಗೆ ಪ್ರಕೃತಿ ಎಂಬ ಹಾಳು ಹಳ್ಳದಲ್ಲಿ ಬಿದ್ದು, ಅಲ್ಲಿ (ತಲೆಹುಳತನಾಯಿಯಂದದಲಿ) ಓಡಿಯೋಡಿ ಸುತ್ತುತ್ತಾ ಅಥವಾ (ಯಂತ್ರದಹಾಗೆ) ಸುಮ್ಮನೆ ಚಕ್ರಾಕಾರವಾಗಿ ಸುತ್ತುತ್ತಾ (" ಜಾಯಸ್ವಮ್ರಿಯಸ್ವ " ಎಂಬ ಉಕ್ತಿಗನುಸಾರವಾಗಿ) ಅನೇಕ ಜನ್ಮಗಳನ್ನೆತ್ತಿ, (ದಾವಾನಲಮಧ್ಯೆ ಸಿಕ್ಕಿದ ಮೃಗಗಳೋಪಾದಿಯಲ್ಲಿ) ಸರಿಯಾಗಿ ನೆಲೆಯಾಗಿ ನಿಲ್ಲಲು ಸ್ಥಳ ಸಿಕ್ಕದೆ ಮಾಲಿನ್ಯವನ್ನು ಹೊಂದಿ, ಜ್ಞಾನ ಸಂಕೋಚದಿಂದ ಕಲುಷಿತನಾಗಿ, ತತ್ತ್ವವೆಂದರೆ ಜೀವಾತ್ಮ ಪರಮಾತ್ಮ ಸ್ವರೂಪಗಳ ಯಾಥಾರ್ಥ್ಯದ, ಮತ್ತು ಹಿತವೆಂದರೆ ಜೀವಾತ್ಮನಾದ ತನ್ನ ಸ್ವರೂಪಕ್ಕನುಗುಣವಾಗಿ ಪುರುಷಾರ್ಥವನ್ನು ಹೊಂದಲು ಆವಶ್ಯಕವಾದ ಉಪಾಯಾವಲಂಬನ ಇವುಗಳ ವಿಷಯದಲ್ಲಿ ಬೇಕಾದ ಜ್ಞಾನಪ್ರಕಾಶರಹಿತನಾಗಿ ಇರಲು.

1 ಪಾಳಿಲೆ - ಒಂದು ದೊಡ್ಡ ಗುಂಡಿ ಅಥವಾ ಹಳ್ಳ.

2 ತಟ್ಟಿತ್ತಾವತ್ತು - ಪರಮಪುರುಷಾರ್ಥ ಸಿಕ್ಕದೆ ಸುಮ್ಮನೆ ಓಡುವವನಾಗಿ, ವಿಶ್ರಾಂತಿ ದೊರೆಯದೆ ಎಂಬ ಭಾವವು,

3 ಅಳುಕ್ಕಡೈನ್ದು - ಮಾಲಿನ್ಯ ಹೊಂದಿ, ರಾಗದ್ವೇಷ ಸುಖದುಃಖಾಕ್ರಾಂತನಾಗಿ ಎಂಬ ಭಾವವು, ಒಳಿಯುಳಿನ್ತ ಪಡಿಯಾಲೆ - ಸ್ವಾಭಾವಿಕವಾಗಿ ಸ್ವಯಂಪ್ರಕಾಶವಾದ ಧರ್ಮಭೂತಜ್ಞಾನಕ್ಕೆ ಕರ್ಮಮೂಲಕ ಸಂಕೋಚ ವುಂಟಾದುದರಿಂದ.

ಒರುರಾಜಾ ಅಂತಃಪುರತ್ತುಡನೇ ವೇಟ್ಟೈಕ್ಕು ಶೆನ್ರು, ವಿಳೈಯಾಟ್ಟಿಲೆಸಕ್ತನಾನ ವಳವಿಲೆ ಮಾತ್ರೈ ಯರಿವದರ್ಕು ಮುನ್ನೈವಳಿತಪ್ಪಿನ ರಾಜಕುಮಾರ್ರ ಎಡುತ್ತಾರ್ ಕೈಯಿಲ್ ಪಿಳ್ಳೈಯಾಯ್ ಏತೇನುಮೊರುಕುರುಚ್ಚಿಯಿಲೇ ವಳರ, ಅವ್ರ ತನಕ್ಕಿಲ್ಲಾದ ಶಬರತ್ವಾದಿ ಜಾತಿಗಳೈ ಏರಿಟ್ಟುಕೊಂಡು,

---

(ಜ್ಞಾನತ್ವ, ಆನಂದತ್ವ, ಅಮಲತ್ವ ಮುಂತಾದವುಗಳಿಂದ ಯುಕ್ತನಾದ ಜೀವಾತ್ಮನು ಹೇಗೆ ಇಂತಹ ದುರ್ದಶೆಯನ್ನು ಹೊಂದಬಹುದೆಂಬುವದನ್ನು ಒಂದು ನಿದರ್ಶನಪೂರ್ವಕವಾಗಿ "ಒರುರಾಜಾ" ಎಂದು ಆರಂಭಿಸಿ, ಉಪಪಾದಿಸುತ್ತಾರೆ. ಜೀವನನ್ನು ಬೇಡರ ಮಧ್ಯದಲ್ಲಿ ಬೆಳೆದ ರಾಜಕುಮಾರನಿಗೆ ಹೋಲಿಸುತ್ತಾರೆ.)

ಈ ಸಂದರ್ಭದಲ್ಲಿ ರಾಜಕುಮಾರ ದೃಷ್ಟಾಂತವು.

ಒಬ್ಬ ರಾಜನು ತನ್ನ ಅಂತಃಪುರಜನರೊಂದಿಗೆ ಮೃಗಯಾರ್ಥವಾಗಿ ಕಾಡಿಗೆ ಹೋಗಿ ಸೇರಿ ವನವಿಹಾರದಲ್ಲಿ ಆಸಕ್ತನಾಗಿರುವಾಗ, ಆತನ ಬಾಲನಾದ ರಾಜಕುಮಾರನು ಇನ್ನೂ ಮಾತು ಬರುವುದಕ್ಕೆ ಮುಂಚಿತವಾಗಿಯೇ ಮಾರ್ಗ ತಪ್ಪಿಹೋಗಿ, ಯಾರ ಕೈಗೋ ಸಿಕ್ಕಿ, ಹಾಗೆ ಎತ್ತಿಕೊಂಡು ಹೋದವರ ಕೈಯಲ್ಲೆತ್ತಿದ ಬಾಲನಾಗಿ ಯಾವುದೋ ಒಂದು ಗುಡಿಸಲಿನಲ್ಲಿ ಬೆಳೆಯಲು, ಆಗ ಆ ಬಾಲನು ತನಗೆ ಜನ್ಮತಃ ಉಂಟಾಗದೆ ಈಗ ಪ್ರಾಪ್ತವಾಗಿರುವ ಬೇಡರೇ ಮೊದಲಾದ ಜಾತಿಗಳನ್ನು ಆರೋಪಿಸಿಕೊಳ್ಳುವನು. ಹೇಗೆಂದರೆ:

(ಸಂಸರ್ಗದಿಂದ ಹೇಗೆ ಆರೋಪಿತವಾಗಬಹುದೆಂಬುವದನ್ನು ಒಂದು ಇತಿಹಾಸದಿಂದ ವ್ಯಕ್ತಪಡಿಸುತ್ತಾರೆ. ಒಂದೇ ತಾಯಿತಂದೆಗಳಿಂದ ಹುಟ್ಟಿದ ಎರಡು ಗಿಳಿಗಳಲ್ಲಿ ಒಂದು ಕಟಕರ ಮನೆಯಲ್ಲೂ ಇನ್ನೊಂದು ಮುನಿಗಳಾಶ್ರಮದಲ್ಲೂ ಬೆಳೆಯಲು; ಕಟಕರ ಮನೆಯ ಮುಂದಿನ ಮರದಲ್ಲಿ ಕುಳಿತ್ತಿದ್ದ ಗಿಳಿಯ ಹತ್ತಿರ ಒಬ್ಬ ಋಷಿಪುತ್ರನು ಬರಲು, ಆ ಗಿಳಿಯು ಇವನಂ ಕಂಡು ಈತನಲ್ಲಿ ದ್ರವ್ಯವಿರಬಹುದಾ

“ ಮಾತಾಪ್ಯೇಕಾ ಪಿತಾಪ್ಯೇಕೋ ಮಮತಸ್ಯಚ ಪಕ್ಷಿಣಃ ।
ಅಹಂಮುನಿಭಿರಾನೀತ ಸ್ಸಚಾನೀತೋಗವಾಶನೈಃ ।
ಅಹಂ ಮುನೀನಾಂವಚನಂ ಶೃಣೋಮಿಗವಾಶನಾನಾಂ ಸವಚಶ್ಶೃಣೋತಿ।
ಪ್ರತ್ಯಕ್ಷಮೇತದ್ಭವತಾಪಿ ದೃಷ್ಟಂ ಸಂಸರ್ಗಜಾ ದೋಷಗುಣಾಭವಂತಿ॥ ”

ಎಜ್ಞಿರಪಡಿಯೇ [1]ವೇಡುವಚ್ಚೇರಿಯಿಲ್ ಕಿಳಿಪೋಲೆ ಅವರ್‌ಗಳ್ [2]ಪಳಿಕ್ಕಿವೈತ್ತ ಪಾಶುರಮೇ ತನಕ್ಕು ಪ್ಪಾಶುರಮಾಯ್, ಅವರು

ದುರಿಂದ ಈತನನ್ನು ತಿವಿ, ಕೊಲ್ಲು ಎಂದು ಕೂಗಲು, ಋಷಿಕುಮಾರನು ಭಯಗ್ರಸ್ತನಾಗಿ ಓಡಿಹೋಗಿ, ಆಮುನಿಗಳಾಶ್ರಮದ ಬಳಿ ಇದ್ದ ಮರದ ನೆರಳಿನಲ್ಲಿ ನಿಲ್ಲಲು; ಮರದ ಮೇಲಿದ್ದ ಗಿಳಿಯು, ಈತನಂ ಕಂಡು ಯಾರೋ ಅತಿಥಿ ಬಂದಿರುವರು, ಅವರಿಗೆ ಅರ್ಘ್ಯಪಾದ್ಯಾದಿಗಳನ್ನು ಸಮರ್ಪಿಸಿ ಫಲಗಳನ್ನು ಕೊಡಿ ಎಂದು ಕೂಗಲು, ಇದಕ್ಕಾ ಋಷಿಪುತ್ರನು ಆಶ್ಚರ್ಯಪಟ್ಟು, ಆ ಗಿಳಿಯಂ ಕುರಿತು, ನೀನೂ,ಆ ಇನ್ನೊಂದು ಗಿಳಿಯೂ ರೂಪದಿಂದ ಸಹೋದರರಾಗಿ ಕಾಣುತ್ತೀರಿ, ನಡತೆಯಲ್ಲಿ ಮಾತ್ರ ಇಷ್ಟು ವ್ಯತ್ಯಾಸವೇಕೆಂದು ಪ್ರಶ್ನಿಸಲು ; ಅದಕ್ಕೆ ಗಿಳಿಯು ಉತ್ತರ ಹೇಳುತ್ತದೆ) “ ನನಗೂ ಆ ಪಕ್ಷಿಗೂ ಸಹ ತಾಯಿಯೂ ಒಬ್ಬಳೇ, ತಂದೆಯೂ ಒಬ್ಬನೇ, ನನ್ನನ್ನು ಮುನಿಗಳು ಕರತಂದರು, ಅದನ್ನು ಕಟಕರು ಕರತಂದರು; ಮುನಿಗಳ ಸಲ್ಲಾಪಗಳು ನನ್ನ ಕಿವಿಯಲ್ಲಿ ಬೀಳುತ್ತವೆ, ಅವರ ಕಿವಿಯಲ್ಲಿ ಕಟಕರ ಮಾತುಗಳು ಬೀಳುತ್ತವೆ. ಆದುದರಿಂದಲೇ ಈ ವ್ಯತ್ಯಾಸವನ್ನು ನೀವೇ ಪ್ರತ್ಯಕ್ಷವಾಗಿ ಕಂಡಿರುತ್ತೀರಿ. ಸಂಸರ್ಗದಿಂದಲೇ ದೋಷಗಳೂ ಸದ್ಗುಣಗಳೂ ಸಹ ಉಂಟಾಗುತ್ತವೆ” ಎಂಬದಾಗಿ ಹೇಳಿರುವ ರೀತಿಯಲ್ಲಿ ಈ ವ್ಯಾಧರ ಶ್ರೇಣಿಯನ್ನು ಹೊಂದಿದ ಗಿಳಿಯು ಹಾಗೆ, ಆರಾಜಕುಮಾರನಿಗೆ

1 ವೇಡುವಚ್ಚೇರಿ - ವ್ಯಾಧರಶ್ರೇಣಿ, ಬೀದಿ.

2 ವಳ್ಳಿಕ್ಕಿವೈತ್ತ - ಅಭ್ಯಾಸಮಾಡಿಸಿದ, ಪಾಶುರಮೇ - ವಾಕ್ಯೆ, ಭಾಷೆಯೇ.

ಗಳುಕ್ಕು [1]ಪ್ಪಿರಂದವರ್‌ಗಳೈ ಪ್ಪೋಲೇ ವರಯ್‌ಗಳೂಣುಂ ವೃತ್ತಿಯುಮೇ ತನಕ್ಕು [2]ಊಣುಂ ವೃತ್ತಿಯು ಮಾಯ್ [3]ತ್ತ ಪಿರವಿಕ್ಕು ಕ್ಕುರಿಯ ಭೋಗಂಗಳಿಲುಂ ಆಚಾರ ಸಂಸ್ಕಾರಾದಿಗಳಿಲುಂ [4]ಪುತಿಯದುಣ್ಣಾದೇ, ರಾಜಭೋಗವಿರುದ್ಧಂಗಳಾನ ಜುಗುಪ್ಸಿತ ವಿಷಯಂಗಳಿಲೆ ತನಕ್ಕು [5]ಪೇರುಮಿಳವುಂ ಹರ್ಷಶೋಕಂಗಳುಮಾಯ್, ರಾಜಕುಮಾರನೆನ್ರುತ್ತ ಪಿರವಿಯುರಿವಾರ್ ಶಿಲ ಋಷಿಪ್ರಾಯರುಂಡಾನಾಲು ಮವರ್‌ಗಳಕ್ಕು ಕ್ಕಿಟ್ಟವೊಣ್ಣಾದವವಸ್ಥೈಯುಡೈಯವನಾಯ್, ಇಪ್ಪಡಿ ಭ್ರಾಂತಿಸಿದ್ಧ ಶಬರತ್ವಾದ್ಯವಸ್ಥೆ

ಬೇಡರು ಅಭ್ಯಾಸಮಾಡಿಸಿದ ಭಾಷೆಯೇ ತನಗೂ ಭಾಷೆಯಾಗಿಯೂ, ಆ ಬೇಡರಿಗೆ ಹುಟ್ಟಿದವರುಗಳ ಊಟ ಭೋಗಾದಿಗಳೂ ನಡತೆಗಳೂ ಯಾವವೋ ಅವೇ ತನಗೂ ಊಟ ಭೇದಾದಿಗಳೂ ನಡತೆಗಳೂ ಆಗಿ, ತನ್ನ ರಾಜಕುಮಾರ ಜನ್ಮಕ್ಕನುಗುಣವಾದ ಭೋಗಗಳಲ್ಲೂ ನಡತೆಗಳಲ್ಲೂ, ಸಂಧ್ಯಾವಂದನಾದಿ ನಿತ್ಯ ಕರ್ಮಾನುಷ್ಠಾನಗಳಲ್ಲೂ, ಉಪನಯನ ಧನುರ್ವಿಧ್ಯಾಭ್ಯಾಸ ಮೊದಲಾದ ಸಂಸ್ಕಾರಗಳಲ್ಲೂ, ಮೊದಲು ಬಾದು ಕಾಲದಲ್ಲೂ ಕಾಣದವನಾಗಿ, ಈ ರಾಜಭೋಗವಿರುದ್ಧಗಳಾದ ಮತ್ತು ತುಂಬಾ ಹೇಯವಾದ ವಿಷಯಗಳಲ್ಲಿ ಪ್ರವರ್ತಿಸುವನಾಗಿ, ಅದರಿಂದುಂಟಾದ ಲಾಭಾಲಾಭಗಳಿಂದಲೇ ಸಂತೋಷವನ್ನೂ ದುಃಖವನ್ನೂ ಹೊಂದಿದವನಾಗಿ, ಸೂಕ್ಷ್ಮ ಬುದ್ಧಿಯಿಂದಲೋ ಜ್ಞಾನ ವಿಕಾಸದಿಂದಲೋ ತನ್ನ ಜನ್ಮ ವೃತ್ತಾಂತವನ್ನು ತಿಳಿದ ಕೆಲವು ಪ್ರಾಜ್ಞರಾದ ಋಷಿ ಸಮಾನರಾದವರಿದ್ದರೂ ಅವರ ಹತ್ತಿರ ಸೇರಲು ಸಾಧ್ಯವಲ್ಲದ ಅವಸ್ಥೆಯನ್ನು ಹೊಂದಿದವನಾಗಿ, ಹೀಗೆ ಭ್ರಾಂತಿಯಿಂದ ತನಗುಂಟಾದ ಬೇಡರಜಾತಿಯ ಅವಸ್ಥೆಯೊಂದಿಗೆ ಯಾವಜ್ಜೀವವೂ

---

1 ಪಿರಂದವರ್‌ಗಳ್ - ಹುಟ್ಟಿದವರುಗಳು.

2 ಊಣುಂ - ಊಟವು. 3 ತಾನು ಹುಟ್ಟಿದ ಜಾತಿಗೆ ಉಚಿತವಾದ.

4 ಪುದಿಯದುಣ್ಣಾದೆ - ಮೊದಲು ಅನುಭವವಿಲ್ಲದೆ.

5 ಪೇರುಂ - ಲಾಭ, ಮಿಳವುಂ - ನಷ್ಟ.

**ಯೋಡೆಯಾವಜ್ಜೀವಂ ನಡಕ್ಕಿಲ್, ಉತ್ತರ ಜನ್ಮಙ್ಗಳಿಲುಂ ಮೊ
ರುಯೋಗ್ಯತೈ [1]ಪೆರ ವಿರಗಿಲ್ಲಾದ ಪಡಿಯಾಯ್ [2]ತ್ತಟ್ಟುಪ್ಪಟ್ಟು
ನಿರ್ಕುಮಾಪ್ಪೋಲೆ ಇವನುಂ ದೇಹಾತ್ಮಾಭಿ ಮಾನಾದಿಗಳಾಲೆ
[3]ತನ್ನುರುಕ್ಕೊಡುತ್ತು [4]ವೇತ್ತುರುಕ್ಕೊಂಡು ನಿರ್ಕ;**

ಇರುವವನಾಗಿ, ಮುಂದಿನ ಜನ್ಮಗಳಲ್ಲೂ ರಾಜಭೋಗಾದಿಗಳನ್ನನು ಭವಿಸಲು ಬಂದು ಯೋಗ್ಯತೆಯನ್ನು ಹೊಂದುವದಕ್ಕೆ ಉಪಾಯ ವಿಲ್ಲದೆ ಹೇಗೆ ಪ್ರತಿಬದ್ಧನಾಗಿರುತ್ತಾನೋ, ಹಾಗೆಯೇ ಈ ಜೀವನೂ ಕೂಡ ದೇಹವೇ ಆತ್ಮವೆಂಬ ಅಭಿಮಾನವೇನು, ಮತ್ತು ತಾನೇ ಸ್ವತಂತ್ರನು ಎಂಬ ಭ್ರಮೆ ಏನು ಇವುಗಳಿಂದ ತನ್ನ ದಾಸ್ಯವಾದ ಶೇಷವೃತ್ತಿಯನ್ನು ಮರತು, ದೇಹಸ್ವರೂಪವನ್ನು ತನ್ನಲ್ಲಿ ಆರೋಪಿಸಿಕೊಳ್ಳುವನಾಗುತ್ತಾನೆಂಬ ಭಾವವು.

(ಮಹಾನುಭಾವರಾದ ಆಚಾರ್ಯರವರು ಜೀವನಿಗೆ ಈ ರಾಜ ಕುಮಾರ ದೃಷ್ಟಾಂತವನ್ನು ಬಹು ಸ್ವಾರಸ್ಯವಾಗಿ ತೋರಿಸಿರುತ್ತಾರೆ. ಮಹಾರಾಜನು ಮೃಗಯಾರ್ಥವಾಗಿ ಹೊರಟನು ಎಂದು ಹೇಳಿರುವದ ರಿಂದ ಪರಬ್ರಹ್ಮನಿಗೆ ಲೀಲಾವಿಭೂತಿಯಲ್ಲಿ ಅನುರಾಗವೂ ಅದಕ್ಕಾಗಿ ಸೃಷ್ಟಿಯೂ ಹೇಳಲ್ಪಟ್ಟಿತು. “ **ಅಂತಃಪುರತ್ತೊಡನೆ** ” ಎಂದು ಹೇಳಿ ರುವದರಿಂದ ಈ ಸೃಷ್ಟ್ಯಾದಿಕರ್ಮವನ್ನೆಲ್ಲಾ, ಸರ್ವೇಶ್ವರನು ಲಕ್ಷ್ಮೀ ಸಹಾಯಕನಾಗಿಯೇ ಮಾಡುವನು. “**ಸಪಿಕಾಕೀನರಮೇತ**” ಎಂಬ ಅಭಿ ಪ್ರಾಯವೂ ಸೂಚಿಸಲ್ಪಟ್ಟದೂ ಅಲ್ಲದೆ, ಆತನು ಪುತ್ರಭಾವದಲ್ಲಿರುವ ಜೀವಾತ್ಮ, ಇವನಿಗೆ ಉಪಭೋಗವಾದ ಅಚಿತ್ತು, ಇವುಗಳಿಂದ ಯಾವಾ ಗಲೂ ವಿಶಿಷ್ಟನಾಗಿಯೇ ಇರುವನೆಂಬ ವಿಶಿಷ್ಟಾದ್ವೈತ ಸಿದ್ಧಾಂತ

1 ಪೆರ - ಉತ್ಕೃಷ್ಟವಾದ, ವಿರಗು - ಉಪಾಯ.

2 ತಟ್ಟುಪ್ಪಟ್ಟು - ಪ್ರತಿಬದ್ಧನಾಗಿ.

3 ತನ್ನುರು ಕೊಡುತ್ತು - ತನಗೆ ಸ್ವಾಭಾವಿಕವಾದ ಶೇಷವೃತ್ತಿಯನ್ನು ಮರೆಯುವದು.

4 ವೇತ್ತುರುಕೊಂಡು- ದೇಹಸ್ವರೂಪವನ್ನು ತನ್ನಲ್ಲಾರೋಪಿಸಿಕೊಂಡು.

ಭಾವನೆಯೂ ತೋರಿಬರುತ್ತದೆ. ರಾಜಕುಮಾರನು ಇನ್ನೂ ಮಾತು ಕೂಡ ಬರುವದಕ್ಕೆ ಮುಂಚೆಯೇ ಎಲ್ಲಿಯೋ ತಪ್ಪಿಸಿಕೊಂಡು ಹೋಗಿ ಬೇಡರ ಕೈಗೆ ಸಿಕ್ಕಿದನು ಎಂಬದಾಗಿ ಹೇಳಿರುವದರಿಂದ ರಾಜಕುಮಾರನ ಹಾಗೆ ಈ ಜೀವನೂ ಸ್ವಾಮಿಗೆ ಪುತ್ರಭಾವದಿಂದ ತುಂಬಾ ಪ್ರಿಯನೆಂಬುದಾಗಿಯೂ, ತನಗಿರುವ ಜ್ಞಾನತ್ವ ಆನಂದತ್ವ, ಅಮಲತ್ವಾದಿಗಳಿಂದ ಪರಿಶುದ್ಧನಾಗಿ ರಾಜಕುಮಾರನು ರಾಜಭವನದಲ್ಲಿರಲು ಯೋಗ್ಯತೆ ಇರುವಹಾಗೆ ದಿವ್ಯವೈಕುಂಠದಲ್ಲಿದ್ದು ದಿವ್ಯಭೋಗಗಳನ್ನನುಭವಿಸುವ ಸ್ಥಿತಿಯಲ್ಲಿದ್ದರೂ ಕರ್ಮವಶ್ಯನಾದುದರಿಂದ ಮಾರ್ಗತಪ್ಪಿ ಅನಾರ್ಯವಿದ್ಯೆಗೆ ಗುರಿಯಾಗಿ ಸ್ವಾಮಿಯನ್ನು ಹೊಂದಲು ಮಾರ್ಗಕಾಣದೆ ಸಂಸೃತಿಯಲ್ಲಿ ಬಿದ್ದು ದೇವ ಮನುಷ್ಯ ಪಶು ಮೊದಲಾದ ದೇಹಗಳ ಸಂಬಂಧ ಉಂಟಾಗುತ್ತದೆಂದು ಭಾವವು. "**ವಳಿತಪ್ಪಿನ**" ಎಂಬುವದರಿಂದ ಈ ಚೇತನನು ಇಂದ್ರಿಯಗಳ ವ್ಯಾಪಾರಕ್ಕೆ ಶಿಲುಕಿದವನಾಗಿ ದುಷ್ಕರ್ಮಗಳನ್ನು ಸಂಪಾದಿಸಿಕೊಂಡು ಸ್ವಾಮಿಯನ್ನು ಹೊಂದುವ ಮಾರ್ಗಗಳಿಂದ ದೂರೀಕೃತನಾಗಿ ಸ್ವಾಮಿ ಕೈಂಕರ್ಯಪ್ರಾಪ್ತಿ ಇಲ್ಲದ ದುರ್ದಶೆಯು ಸೂಚಿಸಲ್ಪಟ್ಟಿತು. "**ಎಡುತ್ತಾರ್ ಕೈಯಿಲ್ ಪಿಳ್ಳೈಯಾಯ್**" ಎನ್ನುವದರಿಂದ ತತ್ತತ್ಕರ್ಮಾನುಸಾರ ಪ್ರವರ್ತನೆಯೂ ಅವಿದ್ಯಾದಿಗಳಿಗೆ ಪರವಶನಾಗಿರುವ ದುಸ್ಥಿತಿಯೂ, ಈಶ್ವರನನ್ನು ಬಿಟ್ಟು ಅನ್ಯದೇವತಾರಾಧನೆ ಮೊದಲಾದ ಅಶಾಸ್ತ್ರೀಯ ಪ್ರವರ್ತನೆಯೂ ಬೋಧಿತವಾಗುತ್ತದೆ. ಯಾವುದೋ ಒಂದು "**ಕುರಿಚ್ಚಿ**" ಗುಡಿಸಲಿನಲ್ಲಿ ಬೆಳದನು ಎನ್ನುವದರಿಂದ, ತನ್ನ ಸ್ವರೂಪಕ್ಕೆ ಉಚಿತವಾದ ಉತ್ಕೃಷ್ಟವಾದ ಪರಮಪದವಿಲ್ಲದೆ, ತುಂಬಾ ನೀಚವಾದ ಇಹಲೋಕದ ಸಂಸೃತಿಪದವಿಯನ್ನು ಹೊಂದಿದನೆಂದು ತಾತ್ಪರ್ಯವು. "**ತನಕ್ಕಿಲಾದ ಶಬರಶ್ಯಾದಿ ಜಾತಿಗಳೈ ಏರಿಟ್ಟುಕೊಂಡು**" ಎಂಬುವದರಿಂದ ಈ ಜೀವನಿಗೆ ಪ್ರಕೃತಿ ಸಂಬಂಧದ್ವಾರಾ ದೇಹಗಳನ್ನು ಹೊಂದುವದು ಈತನಿಗೆ ಸ್ವರೂಪಾನುಗುಣವಾದ ಧರ್ಮವಲ್ಲವೆಂದೂ, ಕರ್ಮಪ್ರಾಬಲ್ಯದಿಂದ ಇಂತಹ ದುರ್ದಶೆಯು ಇವನಿಗೆ ಪ್ರಾಪ್ತವಾಗುತ್ತೆಂದೂ ತೋರಲ್ಪಟ್ಟಿತು. ಗಿಳಗಳ ವೃತ್ತಾಂತದಿಂದ ಈ ಜೀವನು ಸ್ವಾಮಿ ಕರುಣೆಯಿಂದ ತನಗೆ

ಲಬ್ಧವಾದ ಕರಣ ಕಳೇಬರಯುಕ್ತವಾದ ಮನುಷ್ಯದೇಹವನ್ನು ಹೊಂದಿರುವ ಕಾಲದಲ್ಲೇ, ಒಳ್ಳೇ ಸಂಸರ್ಗವನ್ನು ಹೊಂದಿ ಅದರಿಂದ ಸತ್ವಾಧಿಕ್ಯವನ್ನು ಪಡೆದು ರಾಜಸ ತಾಮಸ ಗುಣಗಳನ್ನು ನೀಗಿಕೊಳ್ಳುವ ಹಾಗೆ ಭಾಗವತೋತ್ತಮನಂ ಆಶ್ರಯಿಸತಕ್ಕದ್ದೆಂದೂ, ಆತನ ಕೃಪೆಯಿಂದ ಸಚ್ಛಾಸ್ತ್ರೋಪದೇಶವನ್ನು ಹೊಂದತಕ್ಕದ್ದೆಂದೂ, ಹಾಗೆ ಪ್ರವರ್ತಿಸದೆ ದುಷ್ಟರಲ್ಲಿ ಸೇರಿದರೆ ಆ ದೋಷಗಳೇ ತನ್ನಲ್ಲೂ ಆರೋಪಿತವಾದುದಾಗಿ, ಅಜ್ಞಾನಗಳಿಗೆ ಗುರಿಯಾಗಿ, ಇಂದ್ರಿಯಂಗಳಿಗೆ ವಶನಾಗಿ, ದೇಹಾತ್ಮ ಭ್ರಾಂತಿ ಸ್ವತಂತ್ರಾತ್ಮ ಭ್ರಾಂತಿಗಳುಳ್ಳವನಾಗಿ, ಕೆಟ್ಟು ಹೋಗುವನೆಂದೂ ಸೂಚಿಸಲ್ಪಟ್ಟಿತು. ಈ ಅಭಿಪ್ರಾಯವು "**ಕಳಿಯಪ್ಪೋಲೆ ಪಳಿಕ್ಕ ವೈತ್ತಪಃಶುರವೆ**" ಎಂಬ ಪ್ರಯೋಗದಿಂದ ತೋರಿಬರುತ್ತದೆ "**ಆಚಾರ** **ಸಂಸ್ಕಾರಾ**ದಿಗಳಲುಂ **ಪುಕಿಯುದುಣ್ಣಾದೆರಾಜಭೋಗವಿರುದ್ಧಂಗಳಾ**ನ ಜುಗುಪ್ಸಿತ **ವಿಷ**ಯಂಗಳಿ**ಲೆ**" ಎಂದು ಹೇಳಿರುವದರಿಂದ, ಜೀವನು ತನ್ನ ಅಮೋಘವಾದ ಸ್ವರೂಪಕ್ಕನುಗುಣವಾದ ಆನುಕೂಲ್ಯಾಚರಣೆಯನ್ನೂ ಪ್ರತಿಕೂಲವರ್ಜನೆಯನ್ನೂ ಮಾಡತಕ್ಕದ್ದೆಂದೂ, ಕರ್ಮಬಲದಿಂದ ಹಾಗೆಮಾಡದೆ ವಿಪರೀತ ಪ್ರವರ್ತನೆಯಿಂದ ಸ್ವಾಮಿಪ್ರಾಪ್ತಿಗೆ ವಿರೋಧವಾದ ಹೇಯಕರ್ಮಗಳಲ್ಲೇ ಆಸಕ್ತಿಯುಳ್ಳವನಾಗುವನೆಂದೂ, ಹೇಳಲ್ಪಟ್ಟಿತು. ಇಂತಹ ಸಂದರ್ಭದಲ್ಲಿ ಯಾವುದು ಈ ಜೀವನಿಗೆ ಲಾಭಕರವಾಗಿ ಹಿತವಾದುದು, ಯಾವುದು ಲಾಭಕರವಾದುದಲ್ಲದೆ ಅಹಿತವಾದುದು ಎಂದು ತಿಳಿಯದೆ ಮಹಾಪುರುಷಾರ್ಥರೂಪವಾದ ಮೋಕ್ಷಪ್ರಾಪ್ತಿ, ಸ್ವಾಮಿಕೈಂಕರ್ಯ, ಇವುಗಳಲ್ಲಿ ಸ್ವಲ್ಪವೂ ಮಮತೆ ಇಲ್ಲದೆ ಇರುವನಾಗುವನೆಂಬುವದನ್ನು "**ಭೋಗವಿರುದ್ಧಂಗಳಾನ ಜುಗುಪ್ಸಿತ ವಿಷ**ಯಂಗಳಿ**ಲೆ**" ಎಂಬುವದರಿಂದ ತೋರಿಸಿರುತ್ತಾರೆ. ಜೀವನು ತುಂಬಾ ಪರಿಶುದ್ಧನೆಂದೂ ಕರ್ಮಪ್ರಾಬಲ್ಯದಿಂದ ಇಂತಹ ದುರವಸ್ಥೆಯನ್ನು ಹೊಂದಿರುವನೆಂದೂ ತಿಳಿಸುವ ಮಹಾನುಭಾವರಾದ ಕೃಪಾಶಾಲಿಗಳಾದ ಬ್ರಹ್ಮವಿತ್ತುಗಳು ಈ ಭೂಲೋಕವನ್ನಲಂಕರಿಸುವಹಾಗೆ ಕೃಪಾಸಾಗರನಾದ ಸರ್ವೇಶ್ವರನು ಅನುಗ್ರಹಿಸಿದ್ದರೂ, ಅವರನ್ನು ಕಣ್ಣೆತ್ತಿನೋಡದೆ, ಗುರೂಪಸದನ, ಪ್ರಣಾಮದ್ವಾರಾಸದುಪ

ಅನ್ದ ರಾಜಕುಮಾರನುಡೈಯ ಲಕ್ಷಣಾದಿಗಳಾಲೆ ಜಾತಿವಿಶೇಷ ತ್ತೈಯರಿನಾರ್ ಶಿಲ [1]ಧಾರ್ಮಿಕರ್ ಒರು [2]ವಿರಕಾಲೆ ಇವನ್ನೈ

ದೇಶವನ್ನು ಹೊಂದದೇ ಮತ್ತನಾಗಿರುವನು ಎಂಬುವದನ್ನು **ತೆಱಪಿರವರಿ ನಾರ್ ಶಿಲ ಋಷಿ ಪ್ರಾಯರ್**” ಎಂಬ ವಾಕ್ಯದಿಂದ ತಿಳಿಸುತ್ತಾರೆ.

ಈ ವಿಧವಾಗಿ ಜೀವಾತ್ಮನು ತನ್ನ ಸ್ವರೂಪಕ್ಕೆ ಯೋಗ್ಯವಾದ ಮತ್ತು ಋಜುವಾದ ಮಾರ್ಗವನ್ನು ಹೇಗೆ ತ್ಯಜಿಸಿ, ಸ್ವಾಮಿಯ ಅನುಗ್ರಹಕ್ಕೆ ಪಾತ್ರನಾಗಿ ಪುತ್ರಭಾವದಲ್ಲಿರುವನು ಹೇಗೆ ಸ್ವಾಮಿಯ ನಿಗ್ರಹಕ್ಕೆ ಪಾತ್ರನಾಗಿ ದುರ್ದಶೆಯನ್ನು ಹೊಂದುವನೆಂಬುವವನ್ನು ಈ ಅಮೋಘವಾದ ರಾಜಕುಮಾರ ದೃಷ್ಟಾಂತದಿಂದ ಬೋಧಿಸಿದವರಾಗಿ, ಇನ್ನೂ ಅಂತಹ ಜೀವನೇ ಹೇಗೆ ಇಂತಹ ದುರವಸ್ಥೆಯನ್ನು ಕಳದುಕೊಂಡು ಸದ್ಗುರುವನ್ನು ಹೊಂದಿ, ಸದ್ವಿಷಯಗಳಲ್ಲಿ ರುಚಿಯುಳ್ಳವನಾಗಿ, ಸದುಪದೇಶ ಹೊಂದಿ ಪುನಃ ಸ್ವಾಮಿಕೃಪೆಗೆ ಪಾತ್ರನಾಗಿ ಸ್ವಸ್ವರೂಪ ಪರಸ್ವರೂಪಗಳನ್ನು ತಿಳಿದವನಾಗಿ ನಿರತಿಶಯಾನಂದವನ್ನು ಹೊಂದಿ ಸ್ವಾಮಿಕೈಂಕರ್ಯದಲ್ಲೇ ನಿರತನಾಗುವನೆಂಬುವದನ್ನೂ ಆಮೇಲೆ ಹೇಳಿದ ರಾಜಕುಮಾರ ನಿದರ್ಶನದಿಂದಲೆ ಸಮರ್ಥನ ಮಾಡಿ ವ್ಯಕ್ತ ಪಡಿಸುತ್ತಾರೆ.

ಸಾತ್ವಿಕ ಸಂಭಾಷಣದ ಮಹಿಮೆ.

(ಹೀಗಿರುವಲ್ಲಿ) ಆ ರಾಜಕುಮಾರನ ರಾಜಚಿನ್ಹೆಗಳಿಂದ ಆ ಬಾಲನ ಜಾತಿ ವಿಶೇಷವನ್ನು ತಿಳಿಯುವ ಕೆಲವು ಧರ್ಮಿಷ್ಟರು (ಒಳ್ಳೇ ಸ್ಥಿತಿಯಲ್ಲಿರಬೇಕಾಗಿದ್ದವನು ಇಂತಹ ಹೀನಸ್ಥಿತಿಗೆ ಬಂದಿದ್ದಾನಲ್ಲಾ ಎಂಬ ಪರಿತಾಪದಿಂದ ಆತನು ಕೇಳಿ ಕೊಳ್ಳದಿದ್ದರೂ ತಾವೇ ಸ್ವತಂತ್ರಿಸಿ) ಬಂದುಪಾಯದಿಂದ ಇವನನ್ನು ಹಿಂತಿರುಗಿಸಲು ಅವಕಾಶ ದೊರೆಯಿತು, ಇವನನ್ನು ಹೇಗಾದರೂ ಮಾಡಿ ಒಳ್ಳೇ ಸ್ಥಿತಿಗೆ ತರ

1 ಧಾರ್ಮಿಕರು - ಪರಪ್ರಯೋಜನವೇ ತಮ್ಮ ಪ್ರಯೋಜನವೆಂದು ಭಾವಿಸುವರು. 2 ವಿರಕು - ಉಪಾಯ.

[1]ವಿಾಳ್ ಕಪೆತ್ತಭಿಮಾನಿಕ್ಕ, ವಿನನುಕ್ಕು [2]ವಂದೇರಿಯಾನ ಜಾ ತ್ಯಂತರಾಭಿಮಾನತ್ತೈ [3]ವಳಿವಿಲಕ್ಕಿ ದೃಷ್ಟಾದೃಷ್ಟ ಸಂಸ್ಕಾರಾದಿ ಗಳಾಲೆ ಉತ ರೋತ್ತರ [4]ಭೋಗ ತದುಪಾಯಂಗಳಕ್ಕು ಯೋ

ತಕ್ಕದ್ದೆಂದು ಅಭಿಮಾನಿಸಲಾಗಿ, ಇವನಿಗೆ ಆರೋಪಿಸಲ್ಪಟ್ಟು ಬಂದ ಬೇಡರ ಜಾತಿಯಲ್ಲಿ ಅಭಿಮಾನವನ್ನು ಹೋಗಲಾಡಿಸಿ, ಸ್ನಾನಮಾಡಿ ಸುವದು, ಶುಭ್ರವಾದ ಉಡುಪನ್ನು ಕೊಡುವದು, ಇವೇ ಮೊದಲಾದ ಕಣ್ಣಿಗೆ ಕಾಣುವ ಸಂಸ್ಕಾರಗಳಿಂದಲೂ, ಉಪನಯನ ಮುದ್ರಾಧಾರಣೆ ವೇದಾಧ್ಯಯನ, ಸಮಾವರ್ತನ ಮೊದಲಾದ ಕಣ್ಣಿಗೆ ಕಾಣದ ಸಂಸ್ಕಾ ರಾದಿಗಳಿಂದಲೂ, ಮುಂದೆ ಅನುಭವಿಸಬೇಕಾಗಿರುವ ರಾಜಭೋಗ ಗಳೇನು, ಅವುಗಳನ್ನು ಹೊಂದುವ ಮಾರ್ಗಗಳೇನು, ಇವುಗಳಿಗೆ ಹೇಗೆ ಯೋಗ್ಯನಾಗಬೇಕೋ ಹಾಗೆ, ಮಾರ್ಗವನ್ನು ತೋರಿಸುವರು, ಈ ರಾಜಕುಮಾರನಿಗೆ ತನ್ನ ಸ್ವಂತಜಾತಿಯಾದ ಕ್ಷತ್ರಿಯ ಕುಲಕ್ಕೆ ಯೋಗ್ಯವಾದ ದಾಕ್ಷಿಣ್ಯ, ಶಾಂತಭಾವ, ವೀರ್ಯ, ಮೊದಲಾದ ಸದ್ಗುಣ ಗಳನ್ನೂ ಮತ್ತು ಕ್ಷತ್ರಿಯ ಧರ್ಮಕ್ಕೆ ಉಚಿತವಾದ ವೈದಿಕಕರ್ಮಗಳ ನ್ನೂ ಇವನಿಗೆ ಉಪದೇಶಿಸಿವುದು ಮತ್ತು ತಾವೇ ಅನುಷ್ಠಿಸುವದು, ಇವುಗಳಿಂದ ಆ ಉಪದೇಶವು ಮನಸ್ಸಿಗೆ ಹಿಡಿಯುವ ಹಾಗೆ ಮಾಡು ವರು, ಮತ್ತೂ ಆ ಧರ್ಮಿಷ್ಠರು, ಈತನಿಗೆ ಅನೇಕ ದೋಷಗಳಿಂದ ದುಷ್ಟವಾಗಿರುವ ಬೇಡರೇ ಮೊದಲಾದವರಿಗೆ ಭೋಗ್ಯವಾಗಿ ತೋ ರುವ ನೀಚ ವಿಷಯಗಳನ್ನೆಲ್ಲಾ ನಿಂದಿಸಿ, ರಾಜರೇ ಮೊದಲಾದವರಿಗೆ ಭೋಗ್ಯಗಳಾದ ಉತ್ತಮಪುರುಷಾರ್ಥ ವಿವೇಚನಮಾಡಿ ಪರಿಗ್ರಹಿ ಸುವ ಸಾಮರ್ಥ್ಯವುಳ್ಳ ಜ್ಞಾನವನ್ನು ಕೊಟ್ಟು, ತನ್ನ ಸ್ವಂತಪದವಿ

1 ಮಾಳ್ಕಪೆತ್ತು - ಅವಕಾಶದೊರೆಯಿತೆಂದು

2 ವಂದೇರಿಯಾನ - ಆರೋಪಿಸಲ್ಪಟ್ಟ.

3 ವಳಿವಿಲಕ್ಕಿ - ಮಾರ್ಗದಿಂದ ತಿರುಗಿಸಿ ಅಂದರೆ ಹೋಗಲಾಡಿಸಿ.

4 ಭೋಗ - ರಾಜಭೋಗಗಳು.

ಗ್ಯನಾಂಪಡಿ ವಿರಗು ಶೆಯ್ದ್ದು ಇವನುಕ್ಕು [1]ಸ್ವಜಾತ್ಯನುರೂಪ ಮಾನ ಗುಣವೃತ್ತಂಗಳೈ ತ್ತಂಗಳುಪದೇಶಾನುಷ್ಠಾನಂಗಳಾಲೆ [2]ಕುಡಿಪ್ಪುಗಿರವಿಟ್ಟು, ಇವನುಕ್ಕನೇಕದೋಷ ದುಷ್ಟಂಗಳಾನ ಶಬರಾದಿ ಭೋಗ್ಯಕ್ಷುದ್ರ ವಿಷಯಂಗಳೈ [3]ಯರುವರುಪ್ಪಿತ್ತು ರಾಜಾದಿ ಭೋಗ್ಯಂಗಳಾನ ವತಿಶಯಿತ ಪುರುಷಾರ್ಥಂಗಳೈ [4]ಯಾಯ್ನ್ದಿಡುಕ್ಕ [5]ವಲ್ಲವೌಡೈವೈಯೈ ಯುಂಡಾಕ್ಕಿನಿರುತ್ತು ಮಾಪ್ಪೋಲೇ, ಇವ್ವಾತ್ಮಾವುಕ್ಕುಚ್ಚಿಲಧಾರ್ಮಿಕರ್ ಪಿತ್ರಾದಿ ಮುಖೇನ [6]ನೊಡಿತ್ತು,

---

ಯಾದ ಯುವರಾಜಪಟ್ಟದಲ್ಲಿ ಸ್ಥಾಪಿಸುವರು. ಹಾಗೆಯೇ, ಕೆಲವು ಪುರುಷಕಾರ ಭೂತರಾದ, ಲೋಕಸಂಗ್ರಹದಲ್ಲಿ ಮಮತೆಯುಳ್ಳ, ಆತ್ಮರು ಉಜ್ಜೀವಿಸಲೆಂಬ ಉದಾರಭಾವವುಳ್ಳ ಭಾಗವತೋತ್ತಮರು, ಹೀಗೆ ತನ್ನ ನೈಜಸ್ವರೂಪವನ್ನು ನೀಗಿಕೊಂಡು ಇಂತಹ ದುರ್ದಶೆಯಲ್ಲಿರುವ ಜೀವಾತ್ಮನಿಗೆ ತಂದೆಯರೂಪದಲ್ಲೋ, ಅಥವಾ ಆದಿಪದದಿಂದ ಹಿತೈಷಿಯ ರೂಪದಲ್ಲೋ ಶೀಘ್ರದಲ್ಲೇ ಬಂದು, ಉಪದೇಶಿಸುವರೇನೆಂದರೆ 'ಪುಮಾನ್' ಅಂದರೆ ಜೀವಾತ್ಮನು, (ಸ್ವತಃ ಪರಿಶುದ್ಧನಾಗಿ ತನ್ನೊಡನೆ ಸೇರಿದ ಅಚಿತ್ತಿಗೂ ಕೂಡ ಪವಿತ್ರತೆಯುನ್ನುಂಟುಮಾಡುವದರಿಂದ "ಪುಮಾನ್" ಎನಿಸುವನು. ಇಂತಹ ಜೀವನು), ದೇವತೆಯೂ ಅಲ್ಲವು; ಮನುಷ್ಯನೂ ಅಲ್ಲವು

---

1 ಸ್ವಜಾತಿ - ಕ್ಷತ್ರಿಯಜಾತಿ. ಉಪದೇಶವು ಅನುಷ್ಠಾನವಿಲ್ಲದೆ ಪ್ರಯೋಜನಕಾರಿಯಾಗುವದಲ್ಲವಾದುದರಿಂದ ಉಪದೇಶಿಕನಲ್ಲಿ ಉಪದೇಶಮಾತ್ರವಲ್ಲದೆ ಅನುಷ್ಠಾನವೂ ಇರಬೇಕೆಂಬಭಿಪ್ರಾಯವು.

2 ಕುಡಿಪ್ಪುಕರವಿಟ್ಟು - ಪ್ರವೇಶಿಸುವ ಹಾಗೆ ಮಾಡಿ ಅಂದರೆ ಸಂಪಾದಿಸಿ ಕೊಟ್ಟು ಎಂಬ ಭಾವವು.

3 ಅರುವರಪ್ಪಿತ್ತು - ತುಚ್ಛವಾದುವೆಂದು ನಿಂದಿಸಿ.

4 ಆಯ್ನ್ದಿಡುಕ್ಕ - ಆರಿಸಿ ತೆಗೆಯುವ.

5 ವಲ್ಲವುಡೈಮೈಯೈ - ಸಾಮರ್ಥ್ಯವುಳ್ಳ ಜ್ಞಾನನನ್ನು.

9 ನೊಡಿತ್ತು - ಶೀಘ್ರದಲ್ಲಿ

ಪುಮಾನ್ನದೇವೋ ನನರೋ ನಪಶು ರ್ನಚ [1]ಪಾದಪಃ ।
ಶರೀರಾಕೃತಿ ಭೇದಸ್ತು ಭೂಪೈತೇ ಕರ್ಮಯೋನಯಃ ।

ವಿ. ಪು. ೨, ೧೩, ೯೮.

ಎಜ್ಞಿರಪಡಿಯೇ [2]ಉರುವಿಯನ್ದ [3]ಇನ್ನಿಲಮೈಯೈ [4]ಯುಣರ್ತ್ತಿ ಅದಕ್ಕನುರೂಪಮಾನ ಪುರುಷಾರ್ಥ ತದುಪಾಯಂಗಳಿಲೆ [5]ಅನ್ವಯಿಕ್ಕಲಾಂಪಡಿ [6]ವಿರಗುಶೆಯ್ದು [7]ಉಡಂಬುತಿನ್ರಾರ್ ಪಡಿಯನ್ರಿಕ್ಕೆ [8]ಒರುವೆಳಿಚ್ಚಿರಪ್ಪುಣ್ಡೈಯಾರ್ಕ್ಕು ವರುಂಗುಣವೃತ್ತಂಗಳೈಯುಂಡಾಕ್ಕಿ[9]ಹೇಯೋಪಾದೇಯವಿಭಾಗಜ್ಞನಾನುಮಾಕ್ಕಿನಿರುತ್ತಿನ

ಪಶುವೂ ಅಲ್ಲವು, ವೃಕ್ಷವೂ ಅಲ್ಲವು; ಶರೀರಾಕೃತಿಗಳಭೇದವಾದರೋ ಓ ರಾಜನೇ ಕರ್ಮಮೂಲಕವಾಗಿ ಉಂಟಾದವುಗಳು" ಎಂದು ಜಡ ಭರತರು ರಾಜನಾದ ರಹೂಗಣನಿಗೆ ಉಪದೇಶಿಸಿದ ಹಾಗೆ ಶರೀರಗಳಿಗಿಂತಲೂ ಅಣುವಾದ ಆತ್ಮನು (ಜ್ಞಾನತ್ವ, ಆನಂದತ್ವ, ಅಮಲತ್ವಾದಿಗಳಿಂದ) ತುಂಬಾ ವಿಲಕ್ಷಣನೆಂದು ಜ್ಞಾಪಕಕ್ಕೆ ತಂದು, ಅಂತಹ

---

1 ಪಾದಪಃ - ವೃಕ್ಷವು, ಪಾದವಾದ ಬುಡದಿಂದ ನೀರನ್ನು ಹೀರುತ್ತದೆ. ಆದುದರಿಂದ.

2 ಉರು - ಶರೀರಕ್ಕಿಂತಲೂ, ವಿಯನ್ದ - ವಿಲಕ್ಷಣವಾದ.

3 ಇನ್ನಿಲಮೈಯೈ - ಈ ಸ್ಥಿತಿಯನ್ನು ಅಂದರೆ ಜೀವಾತ್ಮನ ಸ್ವರೂಪ ಸ್ಥಿತಿಯನ್ನು. 4 ಉಣರ್ತ್ತಿ - ಜ್ಞಾಪಿಸಿಕೊಟ್ಟು ಅಂದರೆ ಉಪದೇಶಿಸಿ

5 ಅನ್ವಯ - ಸಂಬಂಧ. 6 ವಿರಗು - ಉಪಾಯ.

7 ಉಡಂಬು ತಿನ್ರಾರ್ ಪಡಿಯನ್ರಿಕ್ಕ-ದೇಹವೇ ಆತ್ಮಾ ಎಂದು ಭ್ರಮಿಸಿ ದೇಹಾಭಿಮಾನಿಗಳಾದವರ ಹಾಗೆ ಅಲ್ಲದೆ.

8 ಒರುವೆಳಿಚ್ಚಿರಪ್ಪು - ಒಂದು ಜ್ಞಾನವಿಕಾಸದ ಸ್ಫೂರ್ತಿ.

9 ಹೇಯೋಪಾದೇಯ - ಯಾವುದು ಹೇಯವು, ಯಾವುದು ಉಪಾದೇಯ ಅಂದರೆ ಪರಿಗ್ರಹಿಸತಕ್ಕದ್ದು. ದೇಹ ಸಂಬಂಧವಾದುದೆಲ್ಲಾ ತುಚ್ಛವಾದುದರಿಂದ ಹೇಯವಾದುದು. ಆತ್ಮ ಸಂಬಂಧವಾದುದೆಲ್ಲಾ ಉಪಾದೇಯವಾದದು.

ವಳಿನಿಲೆ, ಇವನುಡೈಯ [1]ಅಡಿಯುಡಮೈಯೈಯುಂ, ಶಿಲಧಾರ್ಮಿಕರಡಿಯಾಕವಂದ[2] ಯೋಗ್ಯತೈಯೈಯುಂ, [3]ಅಳವುಡಮೈಯೈ

ಜೀವಸ್ವರೂಪಕ್ಕೆ ಯೋಗ್ಯವಾದ ಪುರುಷಾರ್ಥಗಳೇನು, ಅವುಗಳನ್ನು ಹೊಂದುವ ಮಾರ್ಗಗಳೇನು, ಇವುಗಳಲ್ಲಿ ಇವನಿಗೆ ಸಂಬಂಧವುಂಟಾಗುವ ಹಾಗೆ ಉಪಾಯ ಮಾಡುವರು. ದೇಹಕ್ಕಿಂತ ಬೇರೆ ಇನ್ನೊಂದಿಲ್ಲವು, ದೇಹವೇ ಆತ್ಮಾ ಎಂಬ ಭ್ರಾಂತಿಯಿಂದಿರುವ ದೇಹಾಭಿಮಾನಿಗಳಹಾಗೆ ಅಲ್ಲದೆ ದೇಹಕ್ಕಿಂತಲೂಬೇರೆಯಾಗಿ ವಿಲಕ್ಷಣನಾಗಿಆತ್ಮನುಂಟು ಎಂಬ ಜ್ಞಾನವಿಕಾಸ ಸ್ಫೂರ್ತಿಯುಳ್ಳವರಿಗೆ ಯಾವಗುಣಗಳೂ ಸದಾಚಾರಗಳೂ ಇರಬೇಕೋ ಅಂಥಾವುಗಳನ್ನುಂಟುಮಾಡುವರು. ಯಾವುದು ಹೇಯವಾಗಿ ತಿರಸ್ಕರಿಸತಕ್ಕದ್ದು, ಯಾವುದು ಉಚಿತವಾದುದಾಗಿ ಪರಿಗ್ರಹಿಸತಕ್ಕದ್ದೆಂದು ವಿವೇಚನೆಮಾಡಿ ವಿಭಾಗಿಸುವಯೋಗ್ಯತೆಯನ್ನುಂಟುಮಾಡುವರು. ಹೀಗೆ ಇವನನ್ನು ಸರಿಯಾದ ಮಾರ್ಗದಲ್ಲಿ ನಿಲ್ಲಿಸಿದ ಸಮಯದಲ್ಲಿ,

ಸದಾಚಾರ್ಯಪ್ರಾಪ್ತಿ

ಯುಂಟಾಗುತ್ತದೆಂದು ಮುಂದೆ ತಿಳಿಸುತ್ತಾರೆ. (ಮುಂದಕ್ಕೆ ಅಂತಹ ಸಂದರ್ಭದಲ್ಲಿ ಭಗವತ್ಪ್ರಾಪ್ತಿಗೆ ಕಾರಣಭೂತವಾದ ಸದ್ಗುರುವಿನ ಪ್ರಾಪ್ತಿಯು ಹೇಗೆ ಉಂಟಾಗುತ್ತದೆಂಬುವದನ್ನೂ ತಿಳಿಸುತ್ತಾರೆ) ಹೀಗಿರುವಲ್ಲಿ ಈ ಜೀವನ ಭಗವಚ್ಛೇಷತ್ವಭಾವವನ್ನೂ, ಸ್ವಾಮಿಯ ಸ್ವಾಭಾವಿಕವಾದ ಸಹಜಕಾರುಣ್ಯಭಾವವನ್ನೂ ಕೆಲವು ಧರ್ಮಿಷ್ಠರ ಮೂಲಕ ಇವನಿಗೆ ಉಂಟಾದ ಶಾಸ್ತ್ರದಲ್ಲಿ ಮಮತೆ, ಅಸೂಯೆಯಿಲ್ಲದ ಭಾವ ಆಸ್ತಿಕ್ಯಬುದ್ಧಿ ಮೊದಲಾದ ಯೋಗ್ಯತೆ

---

1 ಅಡಿಯುಡೈಮೈಯೈಯುಂ - ಶೇಷತ್ವಭಾವವನ್ನೂ ಮತ್ತು ಭಗವತ್ಕಟಾಕ್ಷಕ್ಕೆ ಪಾತ್ರನಾಗಿರುವದನ್ನೂ.

2 ಯೋಗ್ಯತೆ - ಆಸ್ತಿಕ್ಯ, ಶಾಸ್ತ್ರವಶ್ಯತೆ ಮೊದಲಾದವು.

3 ಅಳವುಡಮೈಯೈಯುಂ - ಯಾವುದು ಹೇಯವು ಯಾವುದು ಪರಿಗ್ರಹಿಸತಕ್ಕದ್ದು ಎಂದು ವಿವೇಚನೆ ಮಾಡುವ ವಿವೇಕವನ್ನೂ.

ಯುಂ ನೇರಾಕಕ್ಕಂಡು ಪರಮ ಕಾರುಣಿಕನಾನ ಪರಮಶೇಷಿ ಯಾಲೆಪ್ರೇರಿತರಾಯ್ ತ್ತಾಂಗಳುಂ ಕಾರುಣಿಕೊತ್ತಮರಾಯಿ ರುಪ್ಪಾರ್ ಶಿಲದೇಶಿಕರ್,

ಈಶ್ವರಸ್ಯಚ ಸೌಹಾರ್ದಂ ಯದೃಚ್ಛಾ ಸುಕೃತಂತಥಾ ।
ವಿಷ್ಣೋಃಕಟಾಕ್ಷ ಮದ್ವೇಷ ಮಾಭಿಮುಖ್ಯಂಚ ಸಾತ್ವಿಕೈಃ ।
ಸಂಭಾಷಣಂ ಷಡೇತಾನಿಹ್ಯಾಚಾರ್ಯಪ್ರಾಪ್ತಿ ಹೇತವಃ ॥

ಯುನ್ನೂ, ಸ್ಪಷ್ಟವಾಗಿ ತಿಳಿದು, ಪರಮ ಕಾರುಣಿಕನಾದ ಸರ್ವರಕ್ಷಕ ನಾದ ಪರಮಾತ್ಮನಿಂದ ಪ್ರೇರೇಪಿಸಲ್ಪಟ್ಟವರಾಗಿ, ಅದರಿಂದಲೇ ತಾವೂ ಕೂಡ ಸರ್ವೇಶ್ವರನಹಾಗೆಯೇ ಕೃಪಾಶಾಲಿಗಳಾದ ಕೆಲವು ಧರ್ಮಿಷ್ಠ ರಾದ ಆಚಾರ್ಯರು,

ಅರ್ಥ—ಈಶ್ವರಸ್ಯಚ ಸೌಹಾರ್ದಂ - ಈಶ್ವರನಿಗೆ ಚೇತನರ ವಿಷಯದಲ್ಲಿರುವ ಪ್ರೇಮವೂ, **ಯದೃಚ್ಛಾಸುಕೃತಂತಥಾ** - ಹಾಗೆಯೇ ಆನುಷಂಗಿಕವಾಗಿ ಬಂದ ಅಥವಾ ಮಾಡಿದ ಸುಕೃತವೂ (ಹೇಗೆಂದರೆ ದೇವಸ್ಥಾನಕ್ಕೆ ಹೋಗಬೇಕೆಂಬ ಇಷ್ಟವಿಲ್ಲದಿದ್ದರೂ ತನ್ನ ಆಕಳು ಒಳಗೆ ನುಗ್ಗಿದರೆ ತಾನು ಅದನ್ನು ಹಿಂಬಾಲಿಸಿ ಹೋಗಿ ಸ್ವಾಮಿಯ ಪ್ರದಕ್ಷಿಣೆ ಮಾಡುವದು ಮೊದಲಾದವು) **ವಿಷ್ಣೋಃಕಟಾಕ್ಷಂ** - ಜಾಯ ಮಾನಂ ಹಿ ಪುರುಷಂ ಯಂ ಪಶ್ಯೇನ್ಮಧುಸೂದನಃ" ಎಂದು ಹೇಳಿರುವ ಹಾಗೆ ವಿಷ್ಣುವು ತನ್ನ ಕಟಾಕ್ಷದಿಂದ ಜೀವನನ್ನು ಆತನು ಹುಟ್ಟುವ ಕಾಲದಲ್ಲಿ ನೋಡುವದೂ, **ಅದ್ವೇಷಂ** - ವಿಷ್ಣುವಿನ ವಿಷಯದಲ್ಲಿ ದ್ವೇಷ ವಿಲ್ಲದಿರುವಿಕೆಯೂ, **ಅಭಿಮುಖ್ಯಂ** - ಸ್ವಾಮಿಯ ವಿಷಯದಲ್ಲಿ ಭಕ್ತಿ ಇಟ್ಟಿರುವದೂ, **ಸಾತ್ವಿಕೈಃ** - ಸಾತ್ವಿಕರೊಂದಿಗೆ, **ಸಂಭಾಷಣಂ** - ಸಂಭಾಷಣೆಯು, **ಷಡೇತಾನಿ** - ಈ ಆರೂ, **ಆಚಾರ್ಯಪ್ರಾಪ್ತಿಹೇತವಃ**- ಸದಾಚಾರ್ಯಪ್ರಾಪ್ತಿಯನ್ನುಂಟುಮಾಡುವವು" ಎಂದು ಹೇಳಿರುವ ಹಾಗೆ, ಯಾದೃಚ್ಛಿಕವಾಗಿ ದೊರೆಯುವರು. (ದೊರೆಯುವರು ಎಂಬುವದಕ್ಕೆ "ಶಿಲದೇಶಿಕರ್" ಎಂಬುವದರೊಂದಿಗೆ ಅನ್ವಯವು) ಮಹಾರಾಜನ ಮುಖೋಲ್ಲಾಸವನ್ನುಂಟುಮಾಡಿ ಆತನ ಕರುಣೆಯನ್ನು ಹೊಂದ

ಎಜ್ಞಿರಪ್ಪಡಿಯೇ [1]ನೇರ್ಪಟ್ಟ ಅಂದರಾಜಕ್ಕುಮಾರನುಕ್ಕು ಶಿಲ [2]ರಾಜಾಂತ್ರರಂಗರ್ ನೇರ್ಪಟ್ಟು [3]ಪ್ಪಿರಿವಿಯೈ ಯುಣರ್ತಿ, ಮೇಲುಳ್ಳ [4]ಪ್ರಿಯತಮಂಗಳೈಯುಂ [5]ಹಿತತಮಂಗಳೈ

ಬೇಕೆಂಬಪೇಕ್ಷೆಯುಳ್ಳವರು ಹೇಗೆ ರಾಜಕುಮಾರನಿಗೆ ದೊರೆತು, ಆತನು ಮಹಾರಾಜನಿಗೆ ಪುತ್ರನಾಗಿ ಜನಿಸಿದುದನ್ನು ತಿಳಿಯ ಪಡಿಸಿ, ಯುವರಾಜಪದವಿ ಮೊದಲಾದ ಅತಿಶಯವಾದ ಪ್ರಿಯವಾದವುಗಗಳನ್ನೂ, ಅವುಗಳನ್ನು ಪಡೆಯುವ ಮಾರ್ಗ ಅನುಕೂಲತೆ ಮುಂತಾಗಿ ಹಿತವಾದವುಗಳನ್ನು ತಿಳಿಯಪಡಿಸಿ, ಒಂದು ಉಪಾಯದಿಂದ ರಾಜನಿಗೆ ತನ್ನ ಮಗನೊಂದಿಗೆ ಸೇರಬೇಕೆಂಬ ಆಶೆಯನ್ನೂ ರಾಜಕುಮಾರನಿಗೆ ತನ್ನ ತಂದೆಯೊಂದಿಗೆ ಸೇರಬೇಕೆಂಬ ಇಚ್ಛೆಯನ್ನೂ, ಹೀಗೆ ಪರಸ್ಪರ ಸೇರಿರಬೇಕೆಂಬ ಆಶೆಯು ವೃದ್ಧಿಯುಂಟಾಗುವಹಾಗೆ, ಮಾಡುವರು. ಹಾಗೆಯೇ ಈ ಜೀವಾತ್ಮನಿಗೂ ಕೂಡ, "**ನಾಯಂದೇವಃ** - ಈತನು

ನೇರ್ಪಟ್ಟು - ಯಾದೃಚ್ಛಿಕವಾಗಿ ಬಂದು, ತಾವಾಗಿಯೇ ಹೀಗೆ ಆಚಾರ್ಯರು ಪ್ರವರ್ತಿಸುವದರಿಂದ, ಅವರು ತುಂಬಾ ಕರುಣಾಶಾಲಿಗಳು, ಉದಾರ ಸ್ವಭಾವಯುಕ್ತರು ಮತ್ತು ಪ್ರತಿಪ್ರಯೋಜನವಿಲ್ಲದೆ ನಿಸ್ಪೃಹರಾಗಿ ಉಪದೇಶಿಸತಕ್ಕವರೆಂದು ಹೇಳಲ್ಪಟ್ಟಿತು.

2 ಇಲ್ಲಿ ರಾಜಾಂತರಂಗರ್ - ರಾಜಕುಮಾರನಿಗೆ ಹೇಗೋ ಹಾಗೆಯೇ ಭಗವದ್ಭಕ್ತರಾದ ಭಾಗವತೋತ್ತಮರು ಮಾರ್ಗತಪ್ಪಿದ ಚೇತನನಿಗೆ ಗುರುಗಳು.

3 ಪಿರವಿಯೈಯುಣರ್ತಿ ಎಂಬುವದರಿಂದ ಜೀವಾತ್ಮ ಸ್ವರೂಪವು ಬಹು ಪರಿಶುದ್ಧವಾದುದಾಗಿ ಸ್ವಾಮಿಗೆ ಶೇಷಭೂತವಾದುದೆಂಬದಾಗಿ ಗುರುವು ಮಾಡುವ ಉಪದೇಶವನ್ನು ಸೂಚಿಸುತ್ತದೆ.

4 ಪ್ರಿಯತಮಂಗಳ್ ಎಂಬುವದರಿಂದ ಮೋಕ್ಷದೆಶೆಯಲ್ಲಿ ನಿರತಿಶಯ ಸುಖ ಮತ್ತು ಸ್ವಾಮಿ ಕೈಂಕರ್ಯ ಸಾಮ್ರಾಜ್ಯಪದವಿಯು ಸೂಚಿಸಲ್ಪಟ್ಟಿವೆ.

5 ಹಿತತಮಂಗಳ್ ಎಂಬುವದರಿಂದ ಮೇಲೆ ಹೇಳಿದವುಗಳನ್ನು ಹೊಂದುವ ಮಾರ್ಗಗಳಾದ ಭಕ್ತಿ ಪ್ರಪತ್ತಿ, ಭಾಗವತಸಂಶ್ರಯಣಾದಿಗಳು ಹೇಳಲ್ಪಟ್ಟವು.

ತೆಳಿವಿತ್ತು, ಒರುವಿರುಕಾಲೆ ಅಂದ ರಾಜಾವುಕ್ಕುಂ ರಾಜಕುಮಾ
ರನುಕ್ಕುಂ ಪರಸ್ಪರ [1]ಸಂಶ್ಲೇಷಾಕಾಂಕ್ಷೈಯ್ಯೈ [2]ಯುತ್ತುಂಭಿಕ್ಕುಂ
ಮಾಪ್ಪೋಲೇ, ಇವನುಕ್ಕುಂ

ನಾಯಂದೇವೋ ನಮರ್ತ್ಯೋವಾ ನ ತಿರ್ಯಕ್‌ಸ್ಥಾವರೋಽಪಿವಾ ।
ಜ್ಞಾನಾನಂದಮಯಸ್ತ್ವಾತ್ಮಾ ಶೇಷೋಹಿ ಪರಮಾತ್ಮನಃ। ಎನ್ರುಂ,
[3]ದಾಸಭೂತಾಃ ಸ್ವತಸ್ಸರ್ವೆಹ್ಯಾತ್ಮಾನಃ ಪರಮಾತ್ಮನಃ ॥ ಎನ್ರುಂ
ಪ್ರಮಾಣಂಗಳ್ ಶೊಲ್ಲುಗಿರಪಡಿಯೇ ಪೋಂಗೋದಂಶೂಳ್‌ನ್ದ

ಅಂದರೆ ಈ ಆತ್ಮನು ದೇವನಲ್ಲವು, **ನಮರ್ತ್ಯೋವಾ**-ಮನುಷ್ಯನೂ ಅಲ್ಲವು, **ನತಿರ್ಯಕ್**-ತಿರ್ಯಗ್ಜಂತುವೂ ಅಲ್ಲ, **ನಸ್ಥಾವರೋಽಪಿವಾ**-ಚಲಿಸದಿರುವ ವೃಕ್ಷಾದಿಗಳೂ ಅಲ್ಲವು,ಪರಂತು, **ಆತ್ಮಾ** - ಆತ್ಮನು, **ಜ್ಞಾನಾನಂದಮಯಃ**-ಜ್ಞಾನಾನಂದಗಳುಳ್ಳವನು, **ಪರಮಾತ್ಮನಃ**-ಪರಮಾತ್ಮನಿಗಾಗಿಯೇ **ಶೇಷೋಹಿ**-ದಾಸಭೂತನಾಗಿರುವ ಭೋಗ್ಯವಸ್ತುವು,"ಎಂಬದಾಗಿಯೂ, "**ಸರ್ವೆಆತ್ಮಾನಃ** - ಎಲ್ಲಾಜೀವಾತ್ಮರುಗಳೂ, **ಪರಮಾತ್ಮನಃ** - ಪರಮಾತ್ಮನಿಗೆ **ಸ್ವತಃ** - ಸ್ವಾಭಾವಿಕವಾಗಿಯೇ, **ದಾಸಭೂತಾಃ** - ದಾಸಭೂತರು" ಎಂಬದಾಗಿಯೂ, ಪ್ರಮಾಣಗಳಲ್ಲಿ ಹೇಳಿರುವಹಾಗೆ, ಉಕ್ಕುತ್ತಿರುವ, ಸಮುದ್ರದಿಂದ ಆವೃತವಾದ ಭೂಮಂಡಲವಾದ ಈ ಲೀಲಾವಿಭೂತಿಯನ್ನೂ, ಪರಮಾಕಾಶವೆನ್ನುವ ನಿತ್ಯವಿಭೂತಿಯನ್ನೂ, ಈ ಎರಡು

1 ಸಂಶ್ಲೇಷ ಎಂದರೆ ಸೇರಿರುವಿಕೆ, ವಿಶ್ಲೇಷ ಎಂದರೆ ಅಗಲಿರುವಿಕೆ,ಆಕಾಂಕ್ಷೆ ಎಂದರೆ ಆಶೆ, ಕುತೂಹಲ.

2 ಉತ್ತುಂಭಿಕ್ಕುಂ - ವೃದ್ಧಿ ಹೊಂದುವದು. ಇದರಿಂದ ಪರಮಾತ್ಮನಿಗೆ ಆತನ ಸಹಜಕರುಣೆಯಿಂದ ಜೀವನನ್ನು ತನ್ನಲ್ಲಿಗೆ ಸೇರಿಸಿಕೊಳ್ಳಬೇಕೆಂಬ ಅವಸರ ನಿರೀಕ್ಷಣೆಯೂ ಜೀವನು ಸದ್ಗುರೂಪದೇಶದಿಂದ ತನ್ನ ಸ್ವರೂಪಜ್ಞಾನ ಯಾವಾಗ ಉಂಟಾಯಿತೋ ಆಗ ಸರ್ವೇಶ್ವರ ಸಾನ್ನಿಧ್ಯವನ್ನು ಹೊಂದಬೇಕೆಂಬ ಕುತೂಹಲವೂ ಇದರಿಂದ ಸೂಚಿಸಲ್ಪಟ್ಟಿತು.

3 ಮಂತ್ರರಾಜಪದಸ್ತೋತ್ರಂ.

[1]ಪುವನಿಯುಂ ವಿಣ್ಣುಲಕುಮಂಙ್ಕಾದುಂ [2]ಶೋರಾಮೆಯಾಳ್ ಗಿನ್ರ [3]ಶೆಂಗೋಲುಡೈಯ ಶ್ರಿಯಃಪತಿನಾರಾಯಣನುಡನೆ [4]ಕುಡಲ್‌ತುವಕ್ಕೈಯತ್ತೈಇವತ್ತು, ಇವನುಕ್ಕು ತತ್ಪ್ರಾಪ್ತ್ಯುಪಾಯಂಗಳಿಲೆ [5]ಮುಯುನ್ರು, ಇರ್ವರ್ (6ಇವನ್ರಿರುವರುಂ) ಪೆರುಕಿರ

ವಿಭೂತಿಗಳ ಸ್ವಲ್ಪಭಾಗವನ್ನೂ ಕೂಡ ಬಿಡದಹಾಗೆ ಆಳುತ್ತಿರುವ, ಮತ್ತು ನಿಯಂತಾವಾಗಿರುವ ಲಕ್ಷ್ಮೀವಲ್ಲಭನಾದ ನಾರಾಯಣನಿಗೂ ಇವನಿಗೂ ಇರುವ ಶೇಷಿಶೇಷಭಾವಸಂಬಂಧವನ್ನು ಚನ್ನಾಗಿಈಆಚಾರ್ಯರು ಉಪದೇಶಿಸಿ, ಈತನಿಗೆ ಆ ಪರಮಪುರುಷನನ್ನು ಹೊಂದುವ, ಭಕ್ತಿ ಪ್ರಪತ್ತಿ, "**ತವಾಹಂ**" ಎಂಬ ಉಕ್ತಿ, ಭಾಗವತ ಸಂಶ್ರಯಣರೂಪವಾದ ಉಪಾಯಗಳಲ್ಲಿ ಅಭಿನಿವೇಶ ಉಂಟಾಗುವಹಾಗೆಮಾಡುವರು. ಸ್ವಾಮಿಗೆ ಶಿಷ್ಯನ ಕೈಂಕರ್ಯವೆಸಗಿದನೆಂಬ ಅತಿಶಯವೂ, ಇವನಿಗೆ,

1 ಪುವನಿಯುಂ - ಭೂಮಿಯನ್ನು, ವಿಣ್ಣುಲಕಂ - ಪರಮಪದವನ್ನೂ ಅಂಶಾದಂ - ಆ ಎರಡು ವಿಭೂತಿಗಳ ಸ್ವಲ್ಪ ಭಾಗವನ್ನೂ.

2 ಶೋರಾಮೆ - ಬಿಟ್ಟುಹೋಗದ ಹಾಗೆ.

3 ಶೆಂಗೋಲುಡೈಯ - ದಂಡವನ್ನು ಧರಿಸಿ ಆಜ್ಞಾಪಿಸುವ.

4 ಕುಡಲ್ ತುವಕ್ಕೈ - ಸಹಜವಾದಸಂಬಂಧವನ್ನು.

5 ಮುಯುನ್ರು - ಅಭಿನಿವೇಶವನ್ನುಂಟುಮಾಡಿ.

6 ಇವನ್ರಿರುವರುಂ ಎಂಬುದು ಪಾಠಾಂತರವು. ಇರುವರುಂ ಅಂದರೆ ಪರಮಾತ್ಮ ಜೀವಾತ್ಮರಿಬ್ಬರೂ, ಪೆರುಕಿರ - ಹೊಂದುವ. ಪೇರೆ - ಪ್ರಯೋಜನವನ್ನೇ. ಸ್ವಾಮಿಗೆ ಪ್ರಯೋಜನವೇನೆಂದರೆ, ತನ್ನ ಕೈಂಕರ್ಯಲಭಿಸಿ ಜೀವನು ಉತ್ತಾರಣೆಯನ್ನು ಹೊಂದಿದನೆಂಬುದು, ಶಿಷ್ಯನಿಗೆ ಪ್ರಯೋಜನವೇನೆಂದರೆ ತಾನು ಮಾಡುವ ಕೈಂಕರ್ಯದಿಂದ ಸ್ವಾಮಿಗೆ ಮುಖೋಲ್ಲಾಸ ಉಂಟಾಯಿತೆಂಬುದು, ಹಾಗೆ ಇಬ್ಬರಿಗೂ ಪರಸ್ಪರ ಪ್ರಯೋಜನವೆಂದು ಭಾವವು. ಇವರಿಬ್ಬರಿಗೂ ಉಂಟಾಗುವ ಸಂಶ್ಲೇಷವೂ, ಮತ್ತೂ ಶೇಷನಕೈಂಕರ್ಯದಿಂದ ಶೇಷಿಗೆ ಒಂದು ಅತಿಶಯಯವೂ ಉಂಟಾಯಿತೆಂದು ತಾತ್ಪರ್ಯವು.

ಪೇರೇತಂಗಳುಕ್ಕ [1]ಪ್ಪೊನ್ನುಲಕ್ಕೈಯುಂ [2]ಪ್ಪುವನಿಮುಳುತ್ತೈಯುಂ ನಾಳುಕ್ಕೈಯೂಕ [3]ವುಕನ್ದು, ಅವಡಿಯೂಕ [4]ವನ್ರೀನ್ರ ಕನ್ರು

ಇನನಿಗೆ ಸ್ವಾಮಿಕೈಂಕರ್ಯ ದೊರೆತು ಆತನ ಮುಖೋಲ್ಲಾಸ ಉಂಟಾಯಿತೆಂಬತಿಶಯವೂ, ಹೀಗೆ ಪರಮಾತ್ಮ ಜೀವಾತ್ಮರುಗಳ ಸಂಶ್ಲೇಷರೂಪವಾಗಿ ಅವರುಗಳು ಹೊಂದಿದ ಪ್ರಯೋಜನವೇ, ಈ ಆಚಾರ್ಯರುಗಳು ತಮಗೆ ಪ್ರಯೋಜನವೆಂದೆಸಿಸುತ್ತಾರೆ. (ಇದರಿಂದ ನಮ್ಮ ಆಚಾರ್ಯರುಗಳು ಎಷ್ಟು ಕೃಪಾಶಾಲಿಗಳು, ಎಷ್ಟು ಉದಾರಮನಸ್ಕರು, ಸ್ವಾಮಿಯ ಮುಖೋಲ್ಲಾಸವನ್ನೇ ಮತ್ತು ಜೀವರುಗಳು ಉಜ್ಜೀವಿಸುವದನ್ನೇ ಪರಮ ಪ್ರಯೋಜನವಾಗಿ ಭಾವಿಸುವರು ಎಂದು ಹೇಳಿದಂತಾಯಿತು) ನಿತ್ಯ ವಿಭೂತಿ ಲೀಲಾವಿಭೂತಿ ಇವೆರಡನ್ನೂ ಸಂಪೂರ್ಣವಾಗಿ ಆಳುವುದರಿಂದ ಸರ್ವೇಶ್ವರನಿಗೆ ಎಂತಹ ನಿರತಿಶಯಾನಂದವೋ ಹಾಗೆ

1 ಪೊನ್ನುಲಕ್ಕೈಯುಂ - ನಿತ್ಯವಿಭೂತಿಯೂ.

2 ಪುವನೀ - ಲೀಲಾವಿಭೂತಿಯೂ, ಜಗತ್ತು, ಭುವನ.

3 ವುಕನ್ದು - ಸಂತೋಷಪಟ್ಟು, ಇಲ್ಲಿ " ಪೊನ್ನುಲಕ್ಕೈಯಂ ಪುವನಿಮುಳುತ್ತೈಯುಂ" ಎಂಬ ಪ್ರಯೋಗವನ್ನು ನಮ್ಮಾಳ್ವಾರವರ ತಿರುವಾಯ್‌ಮೊಳಿ (೬, ೮, ೧,) ಯನ್ನು ಮನಸ್ಸಿನಲ್ಲಿಟ್ಟವರಾಗಿ, ನಾಡಿದಹಾಗೆ ತೋರುತ್ತದೆ ಅಲ್ಲಿ "ಪೊನ್ನುಲಕಾಳೀರೋ ಪುವನಿಮುಳುತಾಳೀರೊ" ಎಂಬ ಪ್ರಯೋಗವಿರುತ್ತದೆ. ಅಲ್ಲಿ ನಮ್ಮಾಳ್ವಾರವರು ಕೆಲವು ಪಕ್ಷಿಗಳನ್ನು ಕರೆದು ನೀವು ಹೋಗಿ ನಮ್ಮ ಸ್ವಾಮಿಗೆ ನನ್ನ ದುರವಸ್ಥೆಯನ್ನು ತಿಳಿಸಿದರೆ, ಆಗ ನೀವು ಪರಮಪದವನ್ನೂ ಈ ಲೀಲಾವಿಭೂತಿಯನ್ನು ನೀವು ಆಳುವಿರಿ ಅಂದರೆ ಎರಡೂ ನಿಮ್ಮ ವಶವಾಗುವದೆಂದು ಹೇಳಿರುತ್ತಾರೆ.

4 ಅನ್ರೀನ್ರ - ಆಗತಾನೇ ಹುಟ್ಟಿದ, ಈ ಅಭಿಪ್ರಾಯದ ಸಾಮ್ಯವನ್ನೇ ವಾಲ್ಮೀಕಿ ಮಹರ್ಷಿಯು ಬಹುಸ್ವಾರಸ್ಯವಾಗಿ ವ್ಯಕ್ತಪಡಿಸಿರುತ್ತಾರೆ. ಸೀತೆಯು ಆಂಜನೇಯನ ಮೂಲಕ ಕಳುಹಿಸಿಕೊಟ್ಟ ಮಣಿರತ್ನವನ್ನು ನೋಡಿ ಶ್ರೀರಾಮನು ಸುಗ್ರೀವನನ್ನು ಕುರಿತು ಹೇಳುತ್ತಾನೆ "ಯಥೈವ ಧೇನುಸ್ರವತಿ ಸ್ನೇಹಾದ್ವತ್ಸಸ

ಕ್ಕಿರಂಗಿಚ್ಚುರುಕ್ಕುಂ ಧೇನುವೈಪ್ಪೋಲೆ ಇದ್ದೇಶಿಕರಿವ್ವಾತ್ಮಾವುಕ್ಕು ಅಜ್ಞಾನಸಂಶಯ ವಿಪರ್ಯಯಙ್ಗಳ್ ತೀರವೇಣುಮೆನ್ರು [1]ಮಿಕುದಿ ಕುರೈವರಚ್ಚುರ(ರು)ಕ್ಕುಂ ಪಾಶುರಂಗಳೈಕೊಂಡು "ತತ್ವೇ

ಈ ಆಚಾರ್ಯರುಗಳು ಆನಂದಪಡುವರಾಗಿ, ಅಷ್ಟುಮಾತ್ರಕ್ಕಾಗಿಯೇ ಕೇವಲ ಕೃಪೆ ಮಾಡಬೇಕೆಂಬಭಿಪ್ರಾಯದಿಂದಲೇ, ಆಗತಾನೇ ಹುಟ್ಟಿದ ಕರುವಿಗೋಸ್ಕರ ಹಾಲನ್ನು ಸ್ರವಿಸುವ ಗೋವಿನೋಪಾದಿಯಲ್ಲಿ, ಈ ಕೃಪಾಪರಿಪೂರ್ಣರಾದ ಆಚಾರ್ಯರುಗಳು ಈ ಜೀವಾತ್ಮನಿಗೆ ಅಜ್ಞಾನಗಳೂ, ಸಂಶಯಗಳೂ, ಮತ್ತು ವಿರೋಧಾಭಿಪ್ರಾಯಗಳೂ, ಇವೆಲ್ಲವೂ ನಷ್ಟವಾಗಬೇಕೆಂಬದಾಗಿ, ಭಗವಚ್ಛಾಸ್ತ್ರಾದಿಗಳಹಾಗೆ ತುಂಬಾ ವಿಸ್ತಾರವಾಗಿ ಚಿತ್ತಕ್ಷೋಭಕರವಾಗಿಲ್ಲದೆಯೂ, ಜಿತಂತಾದಿ ಸ್ತೋತ್ರಗಳಹಾಗೆ ತುಂಬಾ ಹ್ರಸ್ವಗಳಾಗಿ ಅಜ್ಞಾನಸಂಶಯವಿಪರ್ಯಯಗಳ ನಿವೃತ್ತಿಗೆ ಮಾರ್ಗವಿಲ್ಲದೆಯೂ,ಆಳವಂದಾರ್ ಸ್ತೋತ್ರದನಾಲ್ಕನೇ ಶ್ಲೋಕವಾದ "ತತ್ತ್ವೇನಯಶ್ಚಿದಚಿದೀಶ್ವರ" ಎಂಬಿವೇ ಮೊದಲಾದ ಸಂಗ್ರಹ ಶ್ಲೋಕಗಳ ಮೂಲಕ ಯಾವಯಾವ ಅಂಶಗಳು ಶಿಷ್ಯನಾದ ಚೇತನನು ತಿಳಿದುಕೊಳ್ಳತಕ್ಕದ್ದೋ ಅವೆಲ್ಲವನ್ನೂ ಈ ಆಚಾರ್ಯರು ತಿಳಿಯಪಡಿಸುತ್ತಾರೆ. ಆ ಜ್ಞಾತವ್ಯಾಂಶಗಳು ಯಾವುವೆಂಬುವದನ್ನು ಸಂಕ್ಷೇಪವಾಗಿ ಈಗ ತಿಳಿಸುತ್ತಾರೆ. ಆ ಶ್ಲೋಕ ಯಾವುದೆಂದರೆ,

---

ವತ್ಸಲಾ ತಥಾ ಮಮಾಮಿ ಹೃದಯಂ" "ಆಕಳು ತನಗೆ ತುಂಬಾ ಪ್ರೀತಿಪಾತ್ರವಾದ ಕರುವಿನಲ್ಲಿರುವಪ್ರೇಮದಿಂದ ಹಾಲನ್ನು ಹೇಗೆ ಸ್ರವಿಸುತ್ತದೋ ಹಾಗೆ ನನ್ನ ಹೃದಯವೂ ಕೂಡ ದ್ರವಿಸುತ್ತಿದೆ" ಎಂದು ಹೇಳಿದಹಾಗೆ ಆಚಾರ್ಯರುಗಳ ಹೃದಯವು ಶಿಷ್ಯರ ವಿಷಯದಲ್ಲಿ ಪ್ರೀತಿಯನ್ನು ಸುರಿಸುತ್ತದೆಂಬ ಭಾವವು. ಚುರುಕ್ಕುಂ - ಅಂದರೆ ಹಾಲುಸುರಿಸುವ.

1 ಮಿಕುದಿ - ಹೆಚ್ಚು, ಕುರೈವು - ಕಮ್ಮಿ, ಅರ - ಇಲ್ಲದಹಾಗೆ ಅಂದರೆ ತುಂಬಾ ವಿಸ್ತಾರವಾಗಿಯೂ, ತುಂಬಾ ಹ್ರಸ್ವವಾಗಿಯೂ ಇಲ್ಲದೆ ಎಂಬ ಭಾವವು.

ನ ಯಶ್ಚಿದಚಿದಚಿದೀಶ್ವರ ತತ್ಸ್ವಭಾವ ಇತ್ಯಾದಿಗಳಿರ್ಪಡಿಯೇ [1]ಈಶ್ವರನುಡೈಯವುಂ [2]ಈಶಿತವ್ಯಂಗಳುಡೈಯವುಂ ಸ್ವರೂಪ

ತತ್ತ್ವೇನಯಶ್ಚಿದಚಿದೀಶ್ವರತತ್ಸ್ವಭಾವ ಭೋಗಾಪವರ್ಗತದು
ಪಾಯಗತೀರುದಾರಃ ।
ಸಂದರ್ಶಯನ್ನಿರಮಿಮೀತಪುರಾಣರತ್ನಂ ತಸ್ಮೈನಮೋ ಮುನಿ
ವರಾಯ ಪರಾಶರಾಯ ॥

ಅಂದರೆ "ಯಾವ ಪರಾಶರಮಹರ್ಷಿಯು, ಚಿತ್ತು, ಅಚಿತ್ತು ಈಶ್ವರ ರೆಂಬ ತತ್ವತ್ರಯದ ಸ್ವಭಾವಗಳೇನು, ಸ್ವರ್ಗಕೈವಲ್ಯ ಮೋಕ್ಷಾದಿಗ

---

1 ಈಶ್ವರನ ಸ್ವರೂಪ—ಲಕ್ಷ್ಮೀಪತಿತ್ವ, ಜಗತ್ಕಾರಣತ್ವ, ಸತ್ತಾಸ್ಥಿತಿನಿಯಮನತ್ವ, ಸತ್ಯತ್ವ, ಜ್ಞಾನತ್ವ, ಆನಂದತ್ವ, ಹೇಯಪ್ರತ್ಯನೀಕತ್ವ, ಕಲ್ಯಾಣಗುಣಾಕರತ್ವ, ಮೊದಲಾದವು

ಈಶ್ವರನ ಸ್ವಭಾವ—ಸಹಜಕಾರುಣಿಕತ್ವ, ವಾತ್ಸಲ್ಯ, ಸೌಶೀಲ್ಯ, ಸೌಲಭ್ಯಾದಿಗಳು.

2 ಸ್ವಾಮಿ ಈಶನು, ನಿಯಾಮಕನು, ಚಿದಚಿತ್ತುಗಳು, ಈಶಿತವ್ಯಗಳು ಅಂದರೆ ನಿಯಾಮ್ಯಗಳು.

ಜೀವನ ಸ್ವರೂಪ—ಜ್ಞಾನತ್ವ, ಆನಂದತ್ವ, ಅಮಲತ್ವ, ಅಣುತ್ವ, ಪರಮಾತ್ಮ ಶೇಷತ್ವ.

ಜೀವನ ಸ್ವಭಾವ—ಪರಾಧೀನಕರ್ತೃತ್ವ, ಜ್ಞಾತೃತ್ವ, ಭೋಕ್ತೃತ್ವ ಇತ್ಯಾದಿ.

ಸಂಬಂಧ – ಶೇಷಿಶೇಷಸಂಬಂಧ, ಪರಮಾತ್ಮನಿಗೂ ಜೀವನಿಗೂ ನವವಿಧ ಸಂಬಂಧಗಳನ್ನು ಶಾಸ್ತ್ರವು ಬೋಧಿಸುತ್ತದೆ. ಅವು ಯಾವುವೆಂದರೆ—

(1) ಪಿತಾಪುತ್ರ, (2) ರಕ್ಷ್ಯರಕ್ಷ, (3) ಶೇಷಿಶೇಷ, (4) ಭರ್ತೃಭಾರ್ಯಾ, (5) ಜ್ಞಾತೃಜ್ಞೇಯ, (6) ಸ್ವಾಮಿಸ್ವಂ, (7) ಆಧಾರಾಧೇಯ, (8) ಶರೀರಿಶರೀರ, (9) ಭೋಕ್ತೃಭೋಗ್ಯ ಹೀಗೆ ಒಂಭತ್ತುವಿಧ ಸಂಬಂಧಗಳೂ.

ಸ್ವಭಾವ ಸಂಬಂಧಗಳುಂ ಭೋಗಾಪವರ್ಗಂಗಳುಂ ತ್ಯಾಜ್ಯೋಪಾದೇಯಂಗಳಾನ ವಿನತ್ತಿನುಡೈಯ ಉಪಾಯಂಗಳುಂ,

ಳೇನು, ಅಂತಹ ಸ್ವರ್ಗಕೈವಲ್ಯ ಮೋಕ್ಷಪ್ರಾಪ್ತಿಗಳಿಗಾಗಿ ಈ ಚೇತನನು ಹೋಗುವ ಮಾರ್ಗಗಳೇನು, ಇವೆಲ್ಲವನ್ನೂ ಜೀವರುಗಳು ಉಜ್ಜೀವಿಸಲಿ ಎಂಬ ಉದಾರ ಮನಸ್ಕರಾಗಿ ಪುರಾಣರತ್ನವೆನಿಸಿ ಶ್ರೇಷ್ಠತೆಯನ್ನು ಹೊಂದಿದ ವಿಷ್ಣುಪುರಾಣವನ್ನು ರಚಿಸಿ ತಿಳಿಸಿದರೋ, ಅಂತಹ ಮುನಿಶ್ರೇಷ್ಠರಿಗೆ ನಮಸ್ಕಾರವು ಎಂಬ ಇಂತಹ ಶ್ಲೋಕಗಳ ಮೂಲಕವಾಗಿ ಈಶ್ವರನ, ಮತ್ತು ಆತನ ನಿಯಾಮ್ಯವರ್ಗಕ್ಕೆ ಸೇರಿದ ಚಿದಚಿತ್ತುಗಳ, ಸ್ವರೂಪವೇನು, ಅವುಗಳ ಸ್ವಭಾವಗಳೇನು, ಮತ್ತು ಅವುಗಳಿಗಿರುವ ಪರಸ್ಪರ ಸಂಬಂಧವೇನು, ಇವುಗಳೂ ಮತ್ತು ಐಹಿಕ ಸುಖದಾಯಕಗಳಾದ ಭೋಗಗಳಾವುವು, ಮೋಕ್ಷರೂಪವಾದ ಆಮುಷ್ಮಿಕಾನಂದವ್ಯಾವುದು, ಈ ಐಹಿಕಾಮುಷ್ಮಿಕ ಸುಖಗಳಲ್ಲಿ ಅಲ್ಪವಾಗಿಯೂ ಅಸ್ಥಿರವಾಗಿಯೂ ಇರುವದರಿಂದ ಯಾವುದನ್ನು ನಾವು ತ್ಯಜಿಸತಕ್ಕದ್ದು, ನಿತ್ಯವಾಗಿಯೂ ಸ್ಥಿರವಾಗಿಯೂ ಇರುವದರಿಂದ ಯಾವುದನ್ನು ನಾವು ಪರಿಗ್ರಹಿಸತಕ್ಕದ್ದು, ಮತ್ತೂ ಅವುಗಳನ್ನು ಹೊಂದುವ ಉಪಾಯಗಳಲ್ಲಿ ಐಹಿಕ ಅಥವಾ ಸ್ವರ್ಗಲೋಕದ ಸುಖಭೋಗಗಳಿಗೆ ಸಾಧಕವಾದ ಉಪಾಯಗಳೆಲ್ಲಾ ಕಾಮ್ಯಕರ್ಮಗಳಾ

ಪಿತಾಚ ರಕ್ಷಕಶ್ಶೇಷೀ ಭರ್ತಾಜ್ಞೇಯೋರಮಾಪತಿಃ ।
ಸ್ವಾಮ್ಯಾಧಾರೋಮಮಾತ್ಮಾಚ ಭೋಕ್ತಾಚಾದ್ಯಮನೂದಿತಃ ॥

ಎಂಬ ಶ್ಲೋಕದಲ್ಲಿ ಹೇಳಲ್ಪಟ್ಟಿವೆ.

ಅಚಿತ್ತಿನ ಸ್ವರೂಪ—ಜಡತ್ವ, ಪರಾಕ್ತ್ವ, ಅಂದರೆ ಇತರರಿಗೇನೆ. ಪ್ರಕಾಶವಾಗಿರುವದು.

ಅಚಿತ್ತಿನ ಸ್ವಭಾವ—ಪರಿಣಾಮತ್ವ.

1 ತ್ಯಾಜ್ಯ—ಅಲ್ಪಾಸ್ಥಿರವಾದುದರಿಂದ ಬಿಡತಕ್ಕವು, ಉಪಾದೇಯ—ನಿತ್ಯಸ್ಥಿರವಾದುದಾಗಿ ಪರಿಗ್ರಹಿಸತಕ್ಕದ್ದು.

ಇನತ್ತಿನ್ ಗತಿಪ್ರಕಾರಂಗಳುಂ, ಉತ್ಕ್ರಾಂತಿಸುಕೃತಂಗಳಾನ ಮೋಕ್ಷ ವಿರೋಧಿಗಳುಮಾಕಿರ ಇನ್ನರ್ಥಂಗಳ್ ಮುಮುಕ್ಷುವಾನ ಇವ್ವಾತ್ಮಾವುಕ್ಕು ಜ್ಞಾತವ್ಯಙ್ಗಳ್. ಇನ್ನರ್ಥಂಗಳೆಲ್ಲಾ ಮಧ್ಯಾತ್ಮ

ಗುವದರಿಂದ ತ್ಯಜಿಸತಕ್ಕವೆಂಬುದೂ ವೈಕುಂಠಲೋಕಸುಖಭೋಗವೆಂದರೆ ಮೋಕ್ಷೋಪಾಯಕ್ಕೆ ಸಾಧನವಾದ ಉಪಾಯಗಳಾದ ಭಕ್ತಿಪ್ರಪತ್ತಿಮಾರ್ಗಗಳು ಪರಿಗ್ರಹಿಸತಕ್ಕವೆಂಬುವೂ ಅಂತವರುಗಳು ಆಯಾ ಲೋಕಗಳನ್ನು ಹೋಗಿ ಸೇರಲು ಮಾರ್ಗಗಳಾವ ಧೂಮಾದಿ ಮತ್ತು ಅರ್ಚಿರಾದಿ ಮಾರ್ಗಗಳೂ ಮೋಕ್ಷವಿರೋಧಿಗಳೆಂದು ಹೇಳಲ್ಪಟ್ಟಿರುವ ಐಹಿಕಭೋಗಗಳೂ, ಹೇಳಲ್ಪಡದೇ ಇರುವ ಅಹಂಕಾರ ಮಮಕಾರಗಳೂ ಇವೆಲ್ಲವೂ ಮೋಕ್ಷಾರ್ಥಿಯಾದ ಚೇತನನಿಗೆ ತಿಳಿಯಬೇಕಾದ ಅಂಶಗಳಾಗಿರುವದರಿಂದ ಆಚಾರ್ಯರುಗಳು ಅವೆಲ್ಲವನ್ನೂ ತಿಳಿಸುತ್ತಾರೆಂಬ ಭಾವವು.

(ಇಲ್ಲಿ ಮುಖ್ಯವಾಗಿ ಹೇಳಲ್ಪಟ್ಟದುದು ಏನೆಂದರೆ ಪರಮಾತ್ಮನು ಈ ಚೇತನನ ಯಾವುದೋ ಒಂದು ಸುಕೃತವನ್ನು ವ್ಯಾಜಮಾಡಿಕೊಂಡು ಜಾಯಮಾನಕಾಲದಲ್ಲಿ ಈತನನ್ನು ತನ್ನ ಕೃಪಾಕಟಾಕ್ಷದಿಂದ ನೋಡುವನೆಂದೂ, ಅದರ ಬಲದಿಂದ ಸಾತ್ವಿಕಸಂಭಾಷಣೆಯೂ ಆಚಾರ್ಯಪ್ರಾಪ್ತಿಯೂ ಉಂಟಾಗುವದೆಂದೂ ಹೇಳಲ್ಪಟ್ಟಿತು. ಆದರೆ ಶ್ರುತಿ, ಸ್ಮೃತಿ, ಸೂತ್ರಗಳೂ ಭಗವಚ್ಛಾಸ್ತ್ರ, ಇತಿಹಾಸ, ಪುರಾಣಗಳೂ ಆಳ್ವಾರಾಚಾರ್ಯಸೂಕ್ತಿಗಳೂ ಇವೆಲ್ಲಾ ಇರುವಲ್ಲಿ ಆಚಾರ್ಯನು ಹೇಗೆ ಅವಶ್ಯಕವೆಂಬ ಶಂಕಾ ತೋರಬಹುದು.

ಶಾಸ್ತ್ರಜ್ಞಾನಂ ಬಹುಕ್ಲೇಶಂ ಬುದ್ಧೇಶ್ಚಲನ ಕಾರಣಂ ।
ಉಪದೇಶಾದ್ಧರಿಂಬುಧ್ವಾ ವಿರಮೇತ್ಸರ್ವಕರ್ಮಸು ॥

ಎಂದು ಹೇಳಿರುವ ಹಾಗೆ ಈ ಶಾಸ್ತ್ರಗಳ ಜ್ಞಾನವು ಬಹು ಕಷ್ಟತರವಾದದು, ಸರಿಯಾಗಿ ಅವಗಾಹನೆಗೆ ಬರಲಾರದು, ಪರಸ್ಪರ ವಿರೋಧ ಇರುವಹಾಗೆ ತೋರಬಹುದು, ಇವುಗಳಿಗೆ ಸಮಂಜಸಾರ್ಥ ತೋರಲಾರದು, ಅನೇಕ ಸಂಶಯಗಳು ಅವುಗಳ ಅವಲೋಕನ ಕಾಲದಲ್ಲಿ ತೋ

ವಿಷಯ ಶಬ್ದರಾಶಿಯಿಲ್ ಸಾರತಮುಮಾ ರಹಸ್ಯತ್ರಯತ್ತಿಲೆ [1] ಪ್ರತಿತಂತ್ರಸಾರೋದ್ಧಾರೇಣ ಸಂಗ್ರಹಿಕ್ಕಪಡುಕಿರದು.

ರಬಹುದು, ಯಾವುದು ಉಪಾದೇಯವೋ ಯಾವುದು ತ್ಯಾಜ್ಯವೋ ಅವುಗಳ ಗುಣಾವಗುಣಗಳೂ ಉತ್ಕೃಷ್ಟಾಪಕೃಷ್ಟತೆಗಳೂ ವಿಶದವಾಗಿ ಉಪಪಾದಿತವಾಗಿರುವದಿಲ್ಲವು. ಇದೂ ಅಲ್ಲದೆ ಕೆಲವು ಮಂದಬುದ್ಧಿಗಳಿಗೆ ಶಾಸ್ತ್ರಪರಿಚಯವು ಸಾಧ್ಯವಿಲ್ಲವು. ಈ ಕಾರಣಗಳಿಂದ ಆಚಾರ್ಯರು ಅವಶ್ಯಕನೆಂಬುದು ಸ್ಥಾಪಿಸಲ್ಪಟ್ಟಿತು. ಈ ಆಚಾರ್ಯರುಗಳು ಉಪಾದೇಯವಾದುವುಗಳನ್ನು ಉಪಪಾದಿಸಿ ಶಿಷ್ಯನಿಗೆ ತಿಳಿಸುವದೇನೋ ನ್ಯಾಯವು. ಹೇಯವಾದುದನ್ನೂ ಅಲ್ಪಾಸ್ಥಿರವಾದುದನ್ನೂ ಏತಕ್ಕೆ ತಿಳಿಸಬೇಕು? ಮತ್ತು ಈಶ್ವರಪ್ರಾಪ್ತಿ ಹೇಗೆ? ಅದರಿಂದ ಫಲವೇನೆಂಬುವದನ್ನೇನೋ ತಿಳಿಸುವದು ನ್ಯಾಯವು, ಆದರೆ ತತ್ಪ್ರಾಪ್ತಿಗೆ ವಿರೋಧಗಳಾಗಿ ಪರಿಣಮಿಸುವವುಗಳನ್ನು ಕುರಿತು ಆಚಾರ್ಯನು ಏಕೆ ತಿಳಿಸಬೇಕು, ಶಿಷ್ಯನು ಏಕೆ ಗ್ರಹಿಸಬೇಕು ಎಂಬಾಕ್ಷೇಪವು ತೋರಬಹುದು. ತ್ಯಾಜ್ಯವಾದವುಗಳಾವುವು, ಪ್ರಾಪ್ತಿವಿರೋಧಿಗಳಾವುವು, ಅವು ಏತಕ್ಕೆ ವಿರೋಧಿಗಳು, ಏತಕ್ಕೆ ತ್ಯಾಜ್ಯಗಳು ಎಂದು ತಿಳಿದುದಲ್ಲದೆ, ಪ್ರಾಪ್ತಿಗೆ ಅನುಕೂಲವಾದವುಗಳ ಮತ್ತು ಉಪಾದೇಯವಾದುವುಗಳ ಮಾಹಾತ್ಮ್ಯವು ಚನ್ನಾಗಿ ಅವಗಾಹನೆಗೆ ಬರಲಾರದ ಪ್ರಯುಕ್ತ ಅವಶ್ಯವಾಗಿ ಜ್ಞಾತವ್ಯಗಳು ಎಂಬ ಭಾವನೆಯು.

ಆದರೆ ಹೀಗೆ ಆಚಾರ್ಯಪ್ರಾಪ್ತಿಯೇ ಮುಖ್ಯವಾಗಿದ್ದಲ್ಲಿ ಗ್ರಂಥಕರ್ತರಾದ ತಾವು ಈ ಶ್ರೀಮದ್ರಹಸ್ಯತ್ರಯಸಾರವನ್ನು ಬರೆಯುವದಕ್ಕೆ ಪ್ರಯೋಜನ ಹೇಗೆ ಎಂಬ ಶಂಕೆಯು ಉಂಟಾಗಬಹುದು. ಈ

---

1 ಪ್ರತಿತಂತ್ರಸಾರೋದ್ಧಾರೇಣ – ಪ್ರತಿತಂತ್ರವೆಂದರೆ ನಮ್ಮ ಸಿದ್ಧಾಂತಕ್ಕೇನೇ ಅಸಾಧಾರಣವಾದ ಅರ್ಥವು; ಅಂತಹನಮ್ಮ ಸಿದ್ಧಾಂತಾರ್ಥವನ್ನೆಲ್ಲಾ ಸಾರವತ್ತಾಗಿ ಉಪಪಾದನೆ ಮಾಡುವದರ ಮೂಲಕವಾಗಿ ಎಂಬ ತಾತ್ಪರ್ಯವು.

ಶಂಕೆಗೆ ಸಮಾಧಾನವಾಗಿ “ ಇವ್ವರ್ಥಂಗಳೆಲ್ಲಾ ” ಎಂದು ಉಪಕ್ರಮಿಸಿ ಹೇಳುತ್ತಾರೆ. “ ಇವ್ವರ್ಥಂಗಳೆಲ್ಲಾ ” ಅಂದರೆ ಆಚಾರ್ಯನು ಶಿಷ್ಯನಿಗೆ ತಿಳಿಸತಕ್ಕ ವಿಷಯಗಳಾವುವು ಎಂಬದಾಗಿ ಹಿಂದೆ ತಿಳಿಸಿದೆವೋ ಅಂದರೆ ಮುಮುಕ್ಷುವಾದವನು ಏನೇನು ಮುಖ್ಯವಾಗಿ ತಿಳಿಯತಕ್ಕದ್ದೋ ಅವೆಲ್ಲವೂ ಪರಬ್ರಹ್ಮವಿಷಯವಾಗಿ ಹೇಳುವ ಶಾರೀರಕಶಾಸ್ತ್ರದಲ್ಲೆಲ್ಲಾ ತುಂಬಾ ಸಾರತಮವಾದುದೆಂದು ಹೇಳಲ್ಪಟ್ಟಿರುವ ಈ ಶ್ರೀಮದ್ರಹಸ್ಯತ್ರಯದಲ್ಲಿ ನಮ್ಮ ಸಿದ್ಧಾಂತದ ಸಾರಭೂತಾರ್ಥಗಳ ಪುರಸ್ಸರವಾಗಿ ಈ ಗ್ರಂಥದಲ್ಲಿ ವಿಶದವಾಗಿ ಸಂಗ್ರಹಿಸಲ್ಪಟ್ಟಿರುತ್ತದೆ. (ಈ ಗ್ರಂಥದಲ್ಲಿ ಮುಮುಕ್ಷುವು ಯಾವಯಾವ ಅಂಶಗಳನ್ನು ತಿಳಿಯಬೇಕೋ ಅವುಗಳೆಲ್ಲವೂ ಉಪಪಾದಿತವಾಗಿರುತ್ತದೆ. ಇದೂ ಅಲ್ಲದೆ ಇದರಲ್ಲಿರತಕ್ಕದ್ದು ಬ್ರಹ್ಮವಿದ್ಯೆಯಲ್ಲೆಲ್ಲಾ ಸಾರತಮವಾದ ರಹಸ್ಯತ್ರಯಗಳ ನಿಷ್ಕರ್ಷಾರ್ಥಗಳೂ ಮತ್ತು ಇಲ್ಲಿ ಸಂಗ್ರಹಿಸಲ್ಪಟ್ಟಿರುವ ವಿಷಯಗಳೂ ಸರ್ವ ಆಚಾರ್ಯರುಗಳು ತಮ್ಮ ಶಿಷ್ಯರುಗಳಿಗೆ ತಿಳಿಸತಕ್ಕ ಅಂಶಗಳೂ; ಇದೂ ಅಲ್ಲದೆ ಸರ್ವಶಿಷ್ಯರುಗಳೂ ತಮ್ಮ ಆಚಾರ್ಯರುಗಳಿಂದ ಯಾವಯಾವ ವಿಷಯಗಳನ್ನು ತಿಳಿದುಕೊಳ್ಳತಕ್ಕದ್ದೋ ಅವೆಲ್ಲವೂ ಈ ಗ್ರಂಥದಲ್ಲಿ ಉಪಪಾದಿತವಾಗಿವೆ. ಆದುದರಿಂದ ಆಚಾರ್ಯನು ಹೇಗೆ ಅತ್ಯವಶ್ಯಕವೋ ಹಾಗೆಯೇ ಈ ಗ್ರಂಥವೂ ಅತ್ಯಾವಶ್ಯಕವೆಂಬ ಭಾವವು. “ ಸಂಗ್ರಹಿಕ್ಕಪಡುಕಿರದು ” ಎಂದು ಹೇಳಿದುದರ ಅಭಿಪ್ರಾಯವೇನೆಂದರೆ :— ತಾವು ಇಲ್ಲಿಹೇಳದುದನ್ನು ವಿಶದೀಕರಿಸಿ ವಿಸ್ತಾರವಾಗಿ ಅನುವಾದ ಮಾಡಿ ಉಪದೇಶಿಸುವ ಭಾರವು ಆಚಾರ್ಯರುಗಳಿಗೆ ಸೇರಿದುದಾದುದರಿಂದ ಆಚಾರ್ಯರೂ ಅವಶ್ಯಕವೆಂದೂ ಹೇಳಿದಂತಾಯಿತು.)

(ಈ ಚೇತನನ ವಿಷಯದಲ್ಲಿ ರಾಜಕುಮಾರ ದೃಷ್ಟಾಂತವನ್ನು ಶ್ರೀಮದಾಚಾರ್ಯರವರು, ಸಮನ್ವಯಾಧಿಕರಣದ ಶ್ರೀಭಾಷ್ಯದಿಂದ ಸಂಗ್ರಹಿಸಿರುತ್ತಾರೆ. ಶ್ರೀಭಾಷ್ಯದ ದೃಷ್ಟಾಂತವು ಇವರು ಉಪಯೋಗಿಸಿರುವ ಈ ದೃಷ್ಟಾಂತವನ್ನು ಸೂಚಿಸಿರಬಹುದೇ ವಿನಾ ಇದಕ್ಕೂ ಆ ದೃಷ್ಟಾಂತಕ್ಕೂ ತುಂಬಾ ವ್ಯತ್ಯಾಸವುಂಟು. ಅವುಗಳನ್ನು ಉಪ

ಯೋಗಿಸಿರುವ ಪ್ರಮೇಯಗಳೂ ಬೇರೆಬೇರೆಯಾದವು. ಶಾಸ್ತ್ರಪ್ರಮಾಣವಾಕ್ಯಗಳಿಗೂ ಲೋಕಪ್ರಮಾಣವಾಕ್ಯಗಳಿಗೂ ಪ್ರವೃತ್ತಿನಿವೃತ್ತಿಗಳುಂಟು ಎಂದು ಸಾಧಿಸಿ ಅಂತಹ ಪ್ರವೃತ್ತಿನಿವೃತ್ತಿಗಳೇನೂ ಉಂಟಾಗುವದಿಲ್ಲವೆಂಬ ಪೂರ್ವಪಕ್ಷವನ್ನು ಖಂಡಿಸುತ್ತಾರೆ. ಆ ದೃಷ್ಟಾಂತ ಪ್ರಕ್ರಿಯೆ ಹೇಗೆಂದರೆ:--

“ಒಬ್ಬ ರಾಜಕುಮಾರನಿದ್ದಾನೆಂದು ಊಹಿಸೋಣ. ಆತನು ಬಾಲಕ್ರೀಡೆಯಲ್ಲಿ ಆಸಕ್ತನಾಗಿ, ತನ್ನ ತಂದೆಯಾದ ರಾಜನ ಅರಮನೆಯಿಂದ ಹೊರಟವನಾಗಿ,ಸರಿಯಾದ ಮಾರ್ಗವಂ ಬಿಟ್ಟು ಮಾರ್ಗತಪ್ಪುತ್ತಾನೆ. ಆರಾಜಕುಮಾರನಿಗೂ ತನ್ನ ತಂದೆಯಾರೆಂಬುದು ಗೊತ್ತಾಗದೆ, ಒಬ್ಬ ಶ್ರೋತ್ರಿಯ ಬ್ರಾಹ್ಮಣನಿಂದ ಬೆಳದವನಾಗಿ ೧೬ ವರ್ಷಗಳು ಗುರುಕುಲವಾಸಮಾಡಿ ವೇದ ಶಾಸ್ತ್ರಪಾರಂಗತನಾಗಿ, ಅನೇಕ ಕಲ್ಯಾಣಗುಣಗಳಿಂದ ಯುಕ್ತನಾಗಿರುತ್ತಾನೆಂದು ಊಹಿಸೋಣ. ಅನಂತರ ‘ನಿನ್ನ ತಂದೆಯು ಈ ಸಮಸ್ತ ಜಗತ್ತಿಗೂ ಅಧಿಪತಿಯಾಗಿ, ಗಾಂಭೀರ್ಯ, ಔದಾರ್ಯ, ವಾತ್ಸಲ್ಯ, ಸೌಶೀಲ್ಯ, ಶೌರ್ಯ, ವೀರ್ಯ, ಪರಾಕ್ರಮನೇ ಮೊದಲಾದ ಗುಣಗಳಿಂದ ಯುಕ್ತನಾಗಿ ನಷ್ಟನಾದ ತನ್ನ ಪುತ್ರನನ್ನೇ ನೋಡಬೇಕೆಂಬ ಇಚ್ಛೆಯಿಂದ, ಒಂದು ಶ್ರೇಷ್ಠವಾದ ಪಟ್ಟಣವಲ್ಲಿರುತ್ತಾನೆ” ಎಂಬುವನ್ನು ಒಬ್ಬ ಸದ್ಗುರುವಿನ ಮೂಲಕ ಕೇಳಿ ತಿಳಿದುದಾದರೆ, ಆ ರಾಜಕುಮಾರನು ತನ್ನ ತಂದೆಯು ಜೀವಂತನಾಗಿಯೂ ಸರ್ವವಿಧವಾದ ಐಶ್ವರ್ಯ ಸಮೃದ್ಧಿಯುಕ್ತನಾಗಿರುವನೆಂದು ತುಂಬಾ ಸಂತೋಷವನ್ನು ಹೊಂದುತ್ತಾನೆ. ರಾಜನೂ ಕೂಡ ತನ್ನ ಪುತ್ರನಾದವನು ಜೀವಿಸಿಕೊಂಡು ರೋಗಗಳೊಂದೂಇಲ್ಲದೆ ತುಂಬಾ ಮನೋಹರವಾದ ಶರೀರವುಳ್ಳವನಾಗಿಯೂ, ಸರ್ವಶಾಸ್ತ್ರ ಪಾರಂಗತನಾಗಿಯೂ ಇದ್ದಾನೆಂದು ತಿಳಿದು ಸಕಲ ಇಷ್ಟಾರ್ಥಗಳನ್ನೂಹೊಂದಿದವನ ಹಾಗೆ ಆಗುತ್ತಾನೆ. ಅನಂತರ ಅವನನ್ನು ಕರೆಸಿಕೊಳ್ಳುವ ಪ್ರಯತ್ನ ಮಾಡುತ್ತಾನೆ. ತದನಂತರ ಈ ರಾಜಕುಮಾರನೂ ತಂದೆಯ ಹತ್ತಿರ ಹೋಗಲು ಪ್ರಯತ್ನಿಸುವನು. ಇದರಿಂದ ಇಬ್ಬರೂ ಸೇರುತ್ತಾರೆ” ಹಾಗೆಯೇ ಜೀವನೂ ಕೂಡ ಅನಾದಿಕರ್ಮಪ್ರವಾಹದಲ್ಲಿ ಬಿದ್ದು ಮಾರ್ಗ

ತಿರುವುರ್ಡ ವಂದ ಶೆಳುಮಣಿಪೊತ್ತಿರುಮಾಲಿತಯಮುಂ ।
ಮರುವಿಡಮೆನ್ನಮುಲರಡಿ ಶೂಡುಂ ನಕ್ಕೈ ಪೆರುನಾಂ ॥

ತಪ್ಪಿ ತನಗೆ ಪರಮ ಸುಖವನ್ನು ಕೊಡುವ ಲೋಕಪಿತಾ ಒಬ್ಬನಿದ್ದಾನೆಂಬುವದೂ ಕೂಡ ತಿಳಿಯದೇ ಇರುವಲ್ಲಿ, ಕೊನೆಗೆ ವಿಧಿಯು ಪರಿಪಕ್ವವಾಗಿ ಪುಣ್ಯಬಲದಿಂದ ಒಬ್ಬ ಆಚಾರ್ಯನನ್ನು ಹೊಂದಿ ೧೭ ವರ್ಷಗಳು ಗುರುಕುಲವಾಸ ಮಾಡಿ,ಆ ಗುರುಮುಖೇನ ನಿಖಿಲಲೋಕಗಳಿಗೂ ಅಧಿಪತಿಯಾಗಿ, ಗಾಂಭೀರ್ಯೌದಾರ್ಯ ವಾತ್ಸಲ್ಯ ಸೌಶೀಲ್ಯ ಶೌರ್ಯ ವೀರ್ಯ ಪರಾಕ್ರಮ ಮೊದಲಾದ ಶರಣಾಗತರಕ್ಷಣೆಗೆ ಯೋಗ್ಯವಾದ ಅನೋಘ ಕಲ್ಯಾಣಗುಣಗಳುಳ್ಳವನು ಪರಬ್ರಹ್ಮನೊಬ್ಬನಿದ್ದಾನೆಂದು ಆತನು "ದ್ವಾಸುಪರ್ಣಾಸಯುಜಾ" ಎಂಬ ಶ್ರುತ್ಯನುಸಾರವಾಗಿ ನಮ್ಮ ದೇಹವೆಂಬ ಬ್ರಹ್ಮಪುರದಲ್ಲೇ ಇದ್ದಾನೆಂಬುವದನ್ನು ತಿಳಿದು ಆ ಪರಬ್ರಹ್ಮವನ್ನು ಪಡೆದು ನಿರತಿಶಯಾನಂದ ಮೊದಲಾದ ಐಶ್ವರ್ಯವನ್ನು ಪಡೆಯಲು ಉಪಾಸನಾರೂಪವಾದ ಪ್ರಯತ್ನ ಮಾಡುತ್ತಾನೆ." ಹೀಗೆ ಭಾಷ್ಯದಲ್ಲಿ ಬರದಿರುತ್ತದೆ. ಇದರಿಂದ ದೃಷ್ಟಾಂತದ ವಿಷಯವು ಎರಡೂ ಒಂದೇ ಆದರೂ ಇಲ್ಲಿನ ಪ್ರಕರಣಾನುಸಾರವಾಗಿ ಸ್ವಲ್ಪ ವ್ಯತ್ಯಾಸಹೊಂದಿ ಬೇಡರ ಸಂಸರ್ಗಾದಿಗಳು ಹೇಳಲ್ಪಟ್ಟವೆ.

(ಇನ್ನು ಈ ಅಧಿಕಾರದ ಅಭಿಪ್ರಾಯವನ್ನು ಒಂದು ತಮಿಳ್ ಪಾಶುರದಿಂದಲೂ ಒಂದು ಸಂಸ್ಕೃತ ಶ್ಲೋಕದಿಂದಲೂ ಸಂಗ್ರಹಿಸುತ್ತಾರೆ)

ಅರ್ಥ—ತಿರು - ಶ್ರೀಮಹಾಲಕ್ಷ್ಮಿಯ, **ವುರ್ಡ** - ಜೊತೆಯಲ್ಲಿ, **ವನ್ದ** - ಬಂದ, ಅಂದರೆ ಸಮುದ್ರಮಥನಕಾಲದಲ್ಲಿ ಲಕ್ಷ್ಮಿಯೊಡನೆ ಉತ್ಪನ್ನವಾದ, **ಶೆಳು** - ಶ್ರೇಷ್ಠವಾದ, **ಮಣಿಪೋಲ್** - ಕೌಸ್ತುಭರತ್ನದಹಾಗೆ, **ತಿರುಮಾಲ್** - ಲಕ್ಷ್ಮಿಯಲ್ಲಿ ಪ್ರೀತಿಯಿಟ್ಟಿರುವ ಸರ್ವೇಶ್ವರನ, **ಇದಯಮುಂ** - ಹೃದಯವು, **ಮರುವಿಡಂ** - (ನಮಗೂ ಕೂಡ) ವಾಸಮಾಡಲು ಯೋಗ್ಯವಾದ ಸ್ಥಾನವು, **ಎನ್ನ** - ಎಂದು ಹೇಳುವಹಾಗೆ ಅಥವಾ ಹಾಗೆ ಶಾಸ್ತ್ರಗಳಲ್ಲಿ ಹೇಳಲ್ಪಟ್ಟದೆ ಎಂಬ ಭಾವವು. **ಮಲ**

ಕರುವುದರ್ ವನ್ದ ಕಡುವಿನೈಯಾತ್ತಿಲ್ ವಿಳುನ್ದೊಳುಕಾ।
ತರುವುದನೈನ್ದರಿವಾರರುಳ್ ಶೆಯ್ಯವುನ್ನೈ ನ್ದನರೇ (ಮೆ) ॥೮॥

ಅಡಿ - (ಅಂತಹ ಸ್ವಾಮಿಯ) ಕಮಲಪುಷ್ಪದೋಪಾದಿಯಲ್ಲಿರುವ ಚರಣಗಳನ್ನು, **ಶೂಡುಂ** - ಶಿರಸ್ಸಿನಲ್ಲಿ ಧರಿಸುವ, **ವಗೈ** - ಪ್ರಕಾರ ವನ್ನು, **ಪೆರುಂ** - ಹೊಂದಲು ಯೋಗ್ಯತೆಯುಳ್ಳ, **ನಾಂ** - ನಾವುಗಳು, **ಕರುವುದರ್** - ಗರ್ಭದೊಂದಿಗೆ, **ವನ್ದ** - ಅನೇಕ ಜನ್ಮಸಹಸ್ರಗಳಿಂದ ಬಂದ, **ಕಡ್ವಿನೈ** - ಕ್ರೂರದುಷ್ಕರ್ಮಗಳೆಂಬ, **ಆತ್ತಿಲ್** - ನದಿಯ ಪ್ರವಾಹದಲ್ಲಿ, **ವಿಳಂದೊಳಗಾದು** - ಬಿದ್ದು ಕೊಚ್ಚಿಕೊಂಡು ಹೋಗದ ಹಾಗೆ, ಅರುವುರ್ದ - ಸೂಕ್ಷ್ಮಾರ್ಥದೊಂದಿಗೆ (ಸೂಕ್ಷ್ಮಾರ್ಥವ್ಯಾವುದೆಂದರೆ ತನಗೂ ಸರ್ವೇಶ್ವರನಿಗೂ ಇರುವ ಶೇಷಶೇಷಿ ಭಾವ ಅಥವಾ ಶರೀರಶರೀರಿ ಭಾವ), ಐನ್ದುಂ - ಅರ್ಥಪಂಚಕವ ತತ್ವಾರ್ಥವನ್ನೆಲ್ಲಾ, **ಅರಿವಾರ್** - ತಿಳಿದಂಥಾ ಜ್ಞಾನಿಗಳಾದ ಆಚಾರ್ಯರು, **ಅರುಳ್** - ದಯೆಯನ್ನು ಅಂದರೆ ಉಪದೇಶವನ್ನು, **ಶೆಯ್ಯ** - ಮಾಡುವದಕ್ಕಾಗಿ, **ಅನ್ನೈನ್ತನರೆ** - ಪರ್ಯಾಪ್ತರಾಗಿದ್ದಾರೆ ಅಂದರೆ ಶಕ್ತರಾಗಿದ್ದಾರೆ. **ಅನ್ನೈನ್ತನಮೆ** - ಎಂದು ಪಾಠವಿದ್ದರೆ, ನಾವುಗಳು ಯೋಗ್ಯರಾದೆವು ಅಲ್ಲವೇ ಎಂಬ ಭಾವವು.

ತಾತ್ಪರ್ಯ— "ಮಣಿವರಇವಶೌರೇಃ" ಎಂಬ ಶ್ಲೋಕಾಭಿಪ್ರಾಯವೇ ಈ ಪಾಶುರದಲ್ಲೂ ಉಪಪಾದಿತವಾಗಿರುತ್ತದೆ. ಲಕ್ಷ್ಮಿಯು ಹೇಗೆ ಸಮುದ್ರ ಮಥನಕಾಲದಲ್ಲಿ ಉದ್ಭವಿಸಿ ದೇವತೆಗಳಿಂದೆಲ್ಲಾ ಆರಾಧಿತಳಾಗಿ ಸ್ವಾಮಿಯ ವಕ್ಷಸ್ಥಳವನ್ನು ಹೊಂದಿ ಹೇಗೆ ಸ್ವಾಮಿಗೆ ತುಂಬಾ ಪ್ರಿಯಳಾಗಿದ್ದಾಳೋ ಹಾಗೆಯೇ ಈ ಜೀವಾತ್ಮಾಭಿಮಾನಿಯಾದ ಕೌಸ್ತುಭಮಣಿಯೂ ಕೂಡ ಅದೇ ಕಾಲದಲ್ಲೇ ಸಮುದ್ರದಲ್ಲಿ ಹುಟ್ಟಿ ತುಂಬಾ ನಿರ್ಮಲವಾಗಿಯೂ, ಪ್ರಕಾಶಮಾನವಾದುದಾಗಿಯೂ ಆಗಿ ಸ್ವಾಮಿಯ ವಕ್ಷಸ್ಥಲವನ್ನು ಅಲಂಕರಿಸಿರುತ್ತದೆ. ಇದರಿಂದ ಜೀವನೂ ಕೂಡ ಕೌಸ್ತುಭದ ಹಾಗೆ ಸ್ವತಃ ಪರಿಶುದ್ಧನಾಗಿ ಜ್ಞಾನಸ್ವರೂಪನಾಗಿ ತುಂಬಾ ಪ್ರಕಾಶವನ್ನು ಹೊಂದಿದವನಾಗಿ ಲೋಕನಾಯಕನಿಗೆ ತುಂಬಾ

ಪ್ರಿಯತಮನಾಗಿದ್ದಾನೆಂಬ ಭಾವವು ಹೇಳಲ್ಪಟ್ಟಿತು. ಶ್ರೀಮಹಾ ಲಕ್ಷ್ಮಿಯೂ ಜೀವನೂ ಇಬ್ಬರೂ ಸ್ವಾಮಿಗೆ ಶೇಷರು. ಆದುದರಿಂದ ಇಬ್ಬರೂ ತುಂಬಾ ಪ್ರಿಯರು. ಇಬ್ಬರೂ ಯಾವಾಗಲೂ ಸ್ವಾಮಿ ಯೊಂದಿಗೇನೇ ಇರುವವರಾಗಿ ತುಂಬಾ ಪ್ರಿಯರಾಗಿದಾರೆ. ಈ ಅಭಿ ಪ್ರಾಯವನ್ನು ಮಹರ್ಷಿಯು ಲಕ್ಷ್ಮಣವಾಕ್ಯದಿಂದ ವ್ಯಕ್ತಪಡಿಸಿರುತ್ತಾರೆ.

"ನಚಸೀತಾತ್ವಯಾ ಹೀನಾ ನಚಾಹಮಪಿರಾಘವ ।
ಮುಹೂರ್ತಮಪಿ ಜೀವಾವೋಜಲಾನ್ಮತ್ಸ್ಯಾವಿವೋದ್ಧೃತೌ ॥"
(ರಾ. ೬)

ಓ ರಾಘವನೇ, ಸೀತೆಯಾಗಲೀ ನಾನೇ ಆಗಲಿ (ಜೀವನು) ಒಂದು ಮುಹೂರ್ತವಾಗಲಿ ನಿನ್ನನ್ನಗಲಿ, ಮತ್ಸ್ಯಗಳು ನೀರನ್ನು ಬಿಟ್ಟು ಹೇಗೆ ಇರಲಾರವೋ, ಹಾಗೆ ಇರಲಾರೆವು.

"ತಿರುವುರ್ಣವನ್ದ" ಎಂದು ಹೇಳಿರುವುದರಿಂದ, ಈ ಜೀವನ ಪಕ್ಕದಲ್ಲಿಯೇ ಲೋಕಮಾತೆಯಾಗಿಯೂ, ಸರ್ವೇಶ್ವರಿಯಾಗಿಯೂ, ದಯಾಮಯಳಾಗಿಯೂಇರುವ ಶ್ರೀಮಹಾಲಕ್ಷ್ಮಿಯು ಸಾನ್ನಿಧ್ಯ ದೊರೆ ತಿದ್ದು ಈ ಜೀವನಿಗೆ ಒಂದು ದೊಡ್ಡ ಭಾಗ್ಯೋದಯವೆಂದು ಸೂಚಿಸು ತ್ತದೆ.ಲಕ್ಷ್ಮಿಯ ಕೃಪೆಯು ಜೀವನ ವಿಷಯದಲ್ಲಿ ಅಸಾಧಾರಣವಾದುದು. ಹಿಂದೆ "ಮಣಿವರಇವಶೌರೇಃ" ಎಂಬಲ್ಲಿ ಶೌರಿಯೆಂದು ಹೇಳಿದುದು ಬರೀ ಶೌರಿಯೊಬ್ಬನನ್ನೇ ಹೇಳಲಿಲ್ಲವು, ಲಕ್ಷ್ಮೀಸಹಿತನಾದ ನಾರಾಯಣನನ್ನೇ ಹೇಳಿದುದು ಎಂದು ತಿಳಿಸುವುದಕ್ಕಾಗಿಯೂ "ತಿರುವುರ್ಣವನ್ದ" ಎಂದು ಇಲ್ಲಿ ಪ್ರಯೋಗಿಸಿರುತ್ತಾರೆ. ಶ್ರೀಮಹಾಲಕ್ಷ್ಮಿಯು ಹತ್ತಿರವೇ ಇರು ವುದರಿಂದ ಸ್ವಾಮಿಗೆ ಈತನನ್ನು ಅಭಿಮುಖನನ್ನಾಗಿ ಮಾಡುವುದಕ್ಕಾಗಿ ಆಕೆಗೆ ದ್ವಯಮಂತ್ರದ ಪೂರ್ವಖಂಡದ "ಶ್ರೀಮತ್" ಶಬ್ದದಲ್ಲಿ ತೋರುವ ಉಪಾಯತ್ವ ಪುರುಷಕಾರತ್ವಗಳು ಅವಳಿಗೆ ಏರ್ಪಟ್ಟವು. ಅನಂತರ ಪ್ರಾಪ್ಯದೆಶೆಯಲ್ಲಿಯೂ ತಾನು ಸ್ವಾಮಿಯೊಡನೆ ಇದ್ದು ಪ್ರಾಪ್ಯವಾಗುವದರಿಂದ ಉಪೇಯತ್ವವೂ ಉಂಟಾಯಿತು. ಯಾಮು ನೇಯರಿಂದ ಹೇಳಲ್ಪಟ್ಟ "ಆಕಾರತ್ರಯಸಂಪನ್ನ" ಳಾದ ಶ್ರೀಮಹಾ ಲಕ್ಷ್ಮಿಯು ಈತನಿಗೆ ಪಕ್ಕದಲ್ಲೇ ಇರುವಳು ಎಂದು ತೋರಿಸುವದ

ಕ್ಕಾಗಿ "**ತಿರುವುರ್ಡವಂದ**" ಎಂದು ಹೇಳಿರುತ್ತಾರೆ. ನಮ್ಮಾಳ್ವಾರವರೂ ಕೂಡ ಈ ಕಾರಣದಿಂದಲೇ ನಾರಾಯಣಶಬ್ದ ಉಚ್ಚಾರಣೆ ಮಾಡುವಾಗ ಆತನು "**ಮಾಧವ**" ನೆಂಬ ಶ್ರೀಮಚ್ಛಬ್ದಯುಕ್ತವಾಗಿ ಹೇಳಿರಿ ಎಂದು ಉಪದೇಶಿಸುತ್ತಾರೆ.

" ಮಾಧವನೆನ್ರು । ನೊನ್ರತ ವಲ್ಲರೇಲ್
ತೀತೋನ್ರು ಮಡೈಯಾ । ವೇತಾಜ್ಜಾರಾವೇ ॥"

(ತಿರು ೧೦. ೫. ೭)

ದ್ವಯಾನುಸಂಧಾನಮಾಡಲು ಶಕ್ತರಾಗಿದ್ದರೆ, ನಾರಾಯಣಶಬ್ದಕ್ಕೆ ಶ್ರೀಮಚ್ಛಬ್ದ ಸೇರಿಸಿ ಶ್ರೀಯಃಪತಿ ಎಂದು ಅನುಸಂಧಾನಮಾಡಿದರೆ, ಹಿಂದಿನ ಪಾಪಗಳು ನಶಿಸಿಹೋಗುವುವು, ಮುಂದಿನಪಾಪಗಳು ಸೇರಲಾರವು ಇದರಿಂದ ಪರಿಶುದ್ಧರಾಗಿ ನೀವು ಶ್ರೀಮನ್ನಾರಾಣನನ್ನು ಸೇರುವಿರಿ ಎಂಬ ಭಾವವು". ಅದೇನು ಲಕ್ಷ್ಮಿಯಲ್ಲಿ ಅಂತಹ ಮಹಾತ್ಮ್ಯೆ ಎಂದರೆ ಅವಳಲ್ಲಿ ವಾಲ್ಲಭ್ಯಾತಿಶಯ ಹೆಚ್ಚಾದುದರಿಂದ ಸ್ವಾಮಿಯೂ ಏನು ಕೆಲಸಮಾಡಿದರೂ ಈಕೆಯ ಇಂಗಿತವನ್ನೇ ತಿಳಿದು ಮಾಡುವನು. "ಯಸ್ಯಾವೀಕ್ಷ್ಯಮುಖಂ ತದಿಂಗಿತ ಪರಾಧೀನೋ ವಿಧತ್ತೇಖಿಲಂ" ಎಂದು ಪರಾಶರಭಟ್ಟರು ಹೇಳಿರುತ್ತಾರೆ. ಸ್ವಾಮಿಯು ಏನಾದರೂ ಜೀವನನ್ನು ಅವನ ಅಪರಾಧಾನುಗುಣವಾಗಿ ಶಿಕ್ಷಿಸಲೆತ್ನಿಸಿದರೆ, "ಕಿಮೆತನ್ನಿರ್ದೋಷಃ ಕ ಇಹಜಗತೀತಿ" ಇದು ಏನು ಸರಿಯೇ ಈ ಜಗತ್ತಿನಲ್ಲಿ ಯಾರು ತಾನೇ ದೋಷಿಗಳಲ್ಲ ಎಂದು ಹೇಳಿ ಸಮಾಧಾನ ಮಾಡಿ ರಕ್ಷಿಸುವಂಥಾ ಅನುಗ್ರಹಮಯಳು.

ಇಂತಹ ಪರಿಶುದ್ಧನಾದ ಚೇತನನಿಗೆ ಪರಿಶುದ್ಧ ವಾಸಸ್ಥಾನವೇ ಯೋಗ್ಯವಾದುದೆಂದು ತಿಳಿಸುವದಕ್ಕಾಗಿ"**ನುರುವಿಡಂ**" ಎಂದು ಪ್ರಯೋಗಿಸಿರುತ್ತಾರೆ. ಇದು ತಮ್ಮ ಅಭಿಪ್ರಾಯ ಮಾತ್ರವೇ ಅಲ್ಲವು, ಅದಕ್ಕೆ ಶಾಸ್ತ್ರಪ್ರಮಾಣ ಉಂಟೆಂದು ಹೇಳುವದಕ್ಕಾಗಿ "**ನುರುವಿಡನೆನ್ನ**" ಎಂದು ಪ್ರಯೋಗಿಸಿರುತ್ತಾರೆ.

ಆದರೆ ಇಂತಹ ಪರಿಶುದ್ಧಾತ್ಮನಿಗೆ ದುರ್ದೆಶೆ ಹೇಗೆ ಪ್ರಾಪ್ತವಾಯಿತೆಂದರೆ,ಈ ಜೀವನಿಗೆ ಈ ಲೀಲಾವಿಭೂತಿಯಲ್ಲಿರುವಾಗ ಅಚಿತ್ಸಂಸರ್ಗ

ಉಂಟಾಗಿಯೇ ಇರುವುದರಿಂದ, ಶರೀರಪ್ರಾಪ್ತಿಯೂ, ಅದರೊಂದಿಗೆ ಕರಣಗಳ ಯೋಗವೂ ಉಂಟಾಗಿ ಸ್ವಾಮಿಯಿಂದ ಕೊಡಲ್ಪಟ್ಟ ಪರಾಯತ್ತ ಸ್ವಾತಂತ್ರ್ಯದಿಂದ ಕರ್ಮಗಳ ಸಂಬಂಧವು ಅನಾದಿಯಾಗಿ ಬಂದುದಾಗಿ ತನ್ಮೂಲಕ ಅನೇಕ ಜನ್ಮಗಳನ್ನೆತ್ತಿ, ದುಷ್ಕರ್ಮ ಪ್ರವಾಹಕ್ಕೆ ಸಿಕ್ಕಿರುತ್ತಾನೆಂಬುದನ್ನು ಸೂಚಿಸುವದಕ್ಕಾಗಿ **"ಕರುವುಡ ವನ್ದ ಕಡುವಿನೈಯಾತ್ತಿಲ್ ವಿಳಂದು"** ಎಂದು ಹೇಳಿರುತ್ತಾರೆ. ಇನ್ನು ಮುಂದಾದರೂ ಈ ದುಷ್ಕರ್ಮಪ್ರವಾಹಕ್ಕೆ ಸಿಲುಕಿ ಕೊಚ್ಚಿಕೊಂಡು ಹೋಗದೆ ಪುನಃಪುನಃ ಜನ್ಮಸಂತತಿಗೆ ಸಿಕ್ಕದೇ ಇರುವುದಕ್ಕೆ ಏನುಪಾಯವೆಂದರೆ ಹೇಳುತ್ತಾರೆ; ಈತನ ಭಾಗ್ಯೋದಯದಿಂದ ಆಚಾರ್ಯಪ್ರಾಪ್ತಿಯುಂಟಾಗಬೇಕು. ಆ ಆಚಾರ್ಯರು ಎಂತವರೆಂದರೆ ಶಾಸ್ತ್ರ ಸೂಕ್ಷ್ಮಾರ್ಥವನ್ನು ತಿಳಿದ ಜ್ಞಾನಿಯಾಗಿರಬೇಕು. ನಮಗೂ ಸ್ವಾಮಿಗೂ ಶರೀರಾತ್ಮಭಾವವೆಂಬ ಸೂಕ್ಷ್ಮಾರ್ಥವನ್ನು ಗ್ರಹಿಸಿದವರು ನಮ್ಮ ಆಚಾರ್ಯರು. ಇತರ ಸಿದ್ಧಾಂತಿಗಳು ಇಂತಹ ಶಾಸ್ತ್ರಸೂಕ್ಷ್ಮಾರ್ಥಗಳನ್ನು ಗ್ರಹಿಸಿದವರಲ್ಲ. ನಮ್ಮ ಪ್ರತಿತಂತ್ರಕ್ಕೇನೇ ಅಸಾಧಾರಣವಾದ ಸ್ವಾರಸ್ಯವನ್ನು ಗ್ರಹಿಸಿದವರು ನಮ್ಮ ಆಚಾರ್ಯರುಗಳು ಎಂದು ಸೂಚಿಸುವದಕ್ಕಾಗಿಯೂ ಮತ್ತು ಅರ್ಥಪಂಚಕದ ಸಾರಸ್ಯವನ್ನೂ ಅರಿತವರೆಂದು ವ್ಯಕ್ತಪಡಿಸುವದಕ್ಕಾಗಿಯೂ **" ಅರುವುಡನೈಪ್ಪರಿನಾರ್ "** ಎಂದು ಹೇಳಿರುತ್ತಾರೆ. ಇಂತಹ ಆಚಾರ್ಯೋಪದೇಶವೇ ಮುಖ್ಯವೆಂದೂ ಅದಿಲ್ಲದೆ ಬೇರೆ ಗತಿಯಿಲ್ಲವೆಂದೂ ಅದರಿಂದಲೇ ಆ ಮಹಾನುಭಾವನ ಪಾದಕಮಲವನ್ನು ಹೊಂದುವ ಮಾರ್ಗವನ್ನು **" ಮಲರಡಿಶೂಡುಂ ವಗೈ "** ನಾವು ತಿಳಿಯತಕ್ಕದ್ದೆಂದೂ ಹೇಳುವದಲ್ಲದೆ, ಅಂತಹ ಶ್ರೇಷ್ಠ ಪದವಿಯನ್ನು ಹೊಂದಲು ನಾವು ಸ್ವರೂಪತಃ ಯೋಗ್ಯತೆಯನ್ನು ಹೊಂದಿರುತ್ತೇವೆಂದೂ ತಿಳಿಸಿರುತ್ತಾರೆ. **" ಮಲರಡಿ ಶೂಡುಂ "** ಎಂಬುವ ಪ್ರಾಪ್ಯವನ್ನು ಹೊಂದಿದ ದೆಶೆಯು **" ಕಿಂಕರತ್ವಾಧಿರಾಜ್ಯಂ "** ಎಂದು ಹೇಳಿದ ಫಲವನ್ನೂ ಕೊಡುವದು ಎಂಬ ತಾತ್ಪರ್ಯವು. **" ಅನ್ಬೈನ್ಪನರೆ "** ಎಂದು ಹೇಳಿರುವದರಿಂದ ಅಂತಹ ಮಹನೀಯರಾದ ಆಚಾರ್ಯರು ಇಂತಹ ಶಿಷ್ಯನಿಗೆ ಉಪದೇಶಿಕರಾಗಿರಲು ಅರ್ಹರೆಂದೂ,

ಕರ್ಮಾವಿದ್ಯಾದಿಚಕ್ರೆ ಪ್ರತಿಪುರುಷ ಮಿಹಾನಾದಿ ಚಿತ್ರಪ್ರವಾಹೇ ।
ತತ್ತತ್ಕಾಲೇ ವಿಪಕ್ತಿರ್ಭವತಿಹಿ ವಿವಿಧಾ ಸರ್ವಸಿದ್ಧಾಂತ ಸಿದ್ಧಾ ॥

“ **ಅನ್ಯೈನ್ಧನವೆ** ” ಎಂದಿದ್ದರೆ ಅಂತಹ ಆಚಾರ್ಯರಿಂದ ಉಪದೇಶ ಹೊಂದಲು ಈ ಜೀವಾತ್ಮನು ಯೋಗ್ಯನು ಎಂದು ಹೇಳುತ್ತಾರೆ.

ಸೃಷ್ಟಿಯಲ್ಲಿ, ಸ್ವಾಮಿಯು ಮಾವಿನಹಣ್ಣು, ಕಬ್ಬು ಮುಂತಾದವುಗಳನ್ನು ಸಿಹಿಯಾಗಿಯೂ ಹಾಗಲಕಾಯಿ, ಬೇವಿನಕಾಯಿ ಮುಂತಾದವುಗಳನ್ನು ಕಹಿಯಾಗಿಯೂ ಒಬ್ಬ ಚೇತನನನ್ನು ರಾಜನನ್ನಾಗಿಯೂ ಇನ್ನೊಬ್ಬನನ್ನು ದರಿದ್ರನನ್ನಾಗಿಯೂ ಒಬ್ಬನನ್ನು ಆರೋಗ್ಯವಂತನನ್ನಾಗಿಯೂ ಇನ್ನೊಬ್ಬನನ್ನು ರೋಗಿಷ್ಠನನ್ನಾಗಿಯೂ ಸೃಷ್ಟಿಸುವದರಿಂದ ಸ್ವಾಮಿಯಲ್ಲಿ ವೈಷಮ್ಯನೈರ್ಘೃಣ್ಯಾದಿಗಳು ಸಂಬಂಧಿಸುವದಿಲ್ಲವೆ ? ಮತ್ತು ಅನೇಕ ಜನ್ಮ ಸಂತತಿಗಳನ್ನೆತ್ತಿ ಕರ್ಮಪ್ರಾಚುರ್ಯವನ್ನು ಹೊಂದಿ ಇಂತಹ ದುರ್ದೆಶೆಹೊಂದಿದ ಚೇತನನಿಗೆ ಸದ್ಗತಿ ಹೇಗೆ ತಾನೇ ಸಂಭವಿಸೀತು ? ಸ್ವಾಮಿಯ ಕೃಪೆಯಿಂದ ಸಂಭವಿಸುತ್ತದೆಂದರೆ ಎಲ್ಲರಿಗೂ ಏಕೆ ಏಕಕಾಲದಲ್ಲೇ ಪ್ರಾಪ್ತವಾಗಕೂಡದು? ಎಂಬೀ ಶಂಕೆಗಳ ಸಮಾಧಾನಾರ್ಥವಾಗಿ ಮುಂದಿನ ಶ್ಲೋಕವನ್ನು ಅನುಗ್ರಹಿಸಿರುತ್ತಾರೆ.

ಅರ್ಥ — **ಇಹ** - ಈ ಜಗತ್ತಿನಲ್ಲಿ, ಈ ಲೀಲಾವಿಭೂತಿಯಲ್ಲಿ, **ಪ್ರತಿಪುರುಷಂ** - ಪ್ರತಿಯೊಬ್ಬಪುರುಷನಿಗೂ, **ಅನಾದಿಚಿತ್ರಪ್ರವಾಹೇ** - ಅನಾದಿಯಾಗಿ ಬಂದಿರುವ ಆಶ್ಚರ್ಯಕರವಾಗಿ ವಿಚಿತ್ರವಾದ ಪ್ರವಾಹವುಳ್ಳ, “ **ಕರ್ಮಾವಿದ್ಯಾದಿಚಕ್ರೇ** ”, **ಕರ್ಮ** - ಪುಣ್ಯಪಾಪರೂಪದಿಂದ ಎರಡು ವಿಧವಾದ ಕರ್ಮವೂ, **ಅವಿದ್ಯಾ** - ಅಜ್ಞಾನವು, (ಇದು ಜ್ಞಾನ ಸಂಕೋಚದಿಂದ ಪ್ರಾಪ್ತವಾದುದಾಗಿ ಮೂರು ವಿಧವಾಗಿರುವದು, **ಆದಿ** - ಮೊದಲಾದವುಗಳ, (ಆದಿಶಬ್ದದಿಂದ ವಾಸನಾ, ರುಚಿ, ಪ್ರಕೃತಿ ಸಂಬಂಧಗಳು ಹೇಳಲ್ಪಟ್ಟವು.) **ಚಕ್ರೇ** - ಸುತ್ತುವ ಚಕ್ರದಲ್ಲಿ, **ತತ್ತತ್ಕಾಲೇ** - ಆಯಾಯ ಕಾಲಗಳಲ್ಲಿ, **ವಿವಿಧಾ** - ವಿಧವಿಧವಾದ, **ವಿಪಕ್ತಿಃ** - ಪರಿಣಾಮವು ಅಂದರೆ ಕರ್ಮಫಲವು, **ಭವತಿಹಿ** - ಉಂಟಾಗುತ್ತೆಂಬು

ತಲ್ಲಬ್ಧಸ್ವಾವಕಾಶ ಪ್ರಥಮಗುರುಕೃಪಾಗೃಹ್ಯಮಾಣಃ ಕದಾಚಿ ।
ನ್ಮುಕ್ತ್ಯೈಶ್ವರ್ಯಾಂತ ಸಂಪನ್ನಿಧಿರಪಿ ಭವಿತಾ ಕಶ್ಚಿದಿತ್ಥಂ ವಿಪಶ್ಚಿತ್
ಇತಿ ಕವಿತಾರ್ಕಿಕ ಸಿಂಹಸ್ಯ ಸರ್ವತಂತ್ರಸ್ವತಂತ್ರಸ್ಯ
ಶ್ರೀಮದ್ವೇಂಕಟನಾಥಸ್ಯ ವೇದಾನ್ತಾಚಾರ್ಯಸ್ಯ ಕೃತಿಷು.
ಶ್ರೀಮದ್ರಹಸ್ಯತ್ರಯಸಾರೇ ಉಪೋದ್ಘಾತಾಧಿಕಾರಃ ಪ್ರಥಮಃ.
ಶ್ರೀಮತೇ ನಿಗಮಾಂತಮಹಾದೇಶಿಕಾಯನಮಃ

ವದು, **ಸರ್ವಸಿದ್ಧಾಂತಸಿದ್ಧಾ** - ಸಮಸ್ತಸಿದ್ಧಾಂತಗಳಲ್ಲೂ ಅಂಗೀಕರಿಸಲ್ಪಟ್ಟದಾಗಿರುತ್ತದೆ. "ತಲ್ಲಬ್ಧಸ್ವಾವಕಾಶ ಪ್ರಥಮಗುರು ಕೃಪಾಗೃಹ್ಯಮಾಣಃ", **ತತ್** - ಆ ಕರ್ಮಪರಿಪಾಕದ ದಶೆಯಿಂದ, **ಲಬ್ಧ** - ಪಡೆಯಲ್ಪಟ್ಟ, **ಸ್ವ** - ತನಗೆ, **ಅವಕಾಶ** - ಅವಕಾಶವುಳ್ಳ, **ಪ್ರಥಮ ಗುರು** - ಆದಿಗುರುವಾದ ಶ್ರೀಮನ್ನಾರಾಯಣನ, **ಕೃಪಾ** - ದಯೆಯಿಂದ **ಗೃಹ್ಯಮಾಣಃ** - ಸ್ವೀಕರಿಸಲ್ಪಟ್ಟವನಾಗಿ, **ಕಶ್ಚಿತ್** - ಯಾವನಾದರೂ ಒಬ್ಬೊಬ್ಬನು, **ಇತ್ಥಂ** - ಈ ಮೇಲೆ ಹೇಳಿದ ಪ್ರಕಾರ ಅಂದರೆ ಯಾವುದೋ ಒಂದು ಸುಕೃತವ್ಯಾಜದಿಂದ ಉಂಟಾದ, ಸರ್ವೇಶ್ವರನ ಕಟಾಕ್ಷವೀಕ್ಷಣ, ಸತ್ವೋದ್ರೇಕ, ಸಾತ್ವಿಕಸಂಭಾಷಣೆ, ಆಚಾರ್ಯಪ್ರಾಪ್ತಿ, ಇವುಗಳ ದ್ವಾರಾ ಎಂಬ ಭಾವವು, **ವಿಪಶ್ಚಿತ್** - ಎಲ್ಲವನ್ನೂ ಚೆನ್ನಾಗಿ ವಿವೇಚನಮಾಡಿ ತಿಳಿಯುವ ಜ್ಞಾನವನ್ನು ಹೊಂದಿದವನಾಗಿ, **ಕದಾಚಿತ್**- ಒಂದಾನೊಂದು ಕಾಲದಲ್ಲಿ ಅಂದರೆ ಬಹುಕಾಲದಮೇಲೆ, ಅದು ಯಾವಾಗಲೆಂದು ನಿರ್ಧರಿಸಲಾಗುವದಿಲ್ಲವೆಂಬ ಭಾವವು, **ಮುಕ್ತ್ಯೈಶ್ವರ್ಯಾಂತಸಂಪನ್ನಿಧಿರಪಿ** - ಮೋಕ್ಷಸಾಮ್ರಾಜ್ಯಪದವಿವರಿವಿಗೂ ಇರುವ ಸಕಲ ಸಂಪತ್ತಿನ ನಿಧಿಯನ್ನು ಹೊಂದಿದವನು (ಅದಕ್ಕಿಂತಲೂ ಹೆಚ್ಚಾದ ಸಂಪತ್ತೂ ಐಶ್ವರ್ಯವೂ ಇಲ್ಲವೆಂದು ಭಾವವು.) **ಭವಿತಾ** - ಆಗುವನು. "ಅಪಿ" ಎಂದು ಹೇಳಿದುದರಿಂದ ಅಂತಹ ನಿರತಿಶಯ ಸಾಮ್ರಾಜ್ಯಪದವಿಯನ್ನೂ ಕೂಡ ಹೊಂದುವನೆಂಬುವದು ನಿಶ್ಚಯವು ಎಂಬಭಿಪ್ರಾಯವು. ಇಹಲೋಕ ಸಂಪದೈಶ್ವರ್ಯಗಳನ್ನು ಪಡೆಯುವನೆಂಬುವದು ಪ್ರತ್ಯಕ್ಷವಾದುದೇ. ಇವುಗಳನ್ನೂ ಪಡೆಯುವದಲ್ಲದೆ ನಿರತಿಶಯಸಂಪದೈಶ್ವರ್ಯಗಳನ್ನೂ ಹೊಂದುವನೆಂಬಭಿಪ್ರಾಯವು.

ತಾತ್ಪರ್ಯ—ಈ ಶ್ಲೋಕದಿಂದ ಹಿಂದೆ ಉಪಪಾದಿಸಿದರ್ಥಗಳನ್ನೆಲ್ಲಾ ಪುನಃ ಸಂಗ್ರಹಿಸಿ ಹೇಳುತ್ತಾರೆ. ಅನಾದಿಕರ್ಮ, ಅವಿದ್ಯಾ, ವಾಸನಾದಿಗಳಿಂದ ಈ ಜೀವನ ಉತ್ಕೃಷ್ಟವಾದ ಸ್ವರೂಪವು ಮಾಲಿನ್ಯವನ್ನು ಹೊಂದಿ, ಜ್ಞಾನಸಂಕೋಚವುಂಟಾಗಿ ದುರವಸ್ಥೆಯನ್ನು ಹೊಂದಿ ಮೋಕ್ಷಸಾಮ್ರಾಜ್ಯಪದವಿಯನ್ನು ಹೊಂದಲು ಅಶಕ್ಯವಾದ ಅವಸ್ಥೆಯುಳ್ಳವನಾಗಿ ಸ್ವರ್ಗ, ಭೂಲೋಕ, ನರಕಗಳ ವಾಸವನ್ನು ಪುನಃಪುನಃ ಹೊಂದುತಲಿರುವನು. ಹೀಗಿರುವಾಗಲೂ ಈ ಜೀವನು ಯಾವುದೋ ಒಂದು ಕಾಲದಲ್ಲಿ ಮಾಡುವ ಅಲ್ಪಸುಕೃತದಿಂದ ಪ್ರೀತನಾಗಿ ಕೃಪಾಸಾಗರನು ಈತನಿಗೆ ಕಟಾಕ್ಷವೀಕ್ಷಣ, ಸಾತ್ವಿಕಸಂಭಾಷಣೆ, ಗುರೂಪಸದಗಳನ್ನುಂಟುಮಾಡಿ ಮೋಕ್ಷವನ್ನು ಕೂಡ ಕಡೆಗೆ ಕೊಡುವನೆಂದು ಹೇಳುತ್ತಾರೆ. ಈ ಚೇತನನು ಈ ಲೀಲಾವಿಭೂತಿಗೆ ಸೇರಿದವನಾಗಿರುವ ವರಿವಿಗೂ ಐದರ ಸಂಬಂಧವು ಒಂದರಿಂದೊಂದು ಚಕ್ರದ ಹಾಗೆ ಸುತ್ತುತ್ತಾ ಈತನನ್ನು ಹಿಂಬಾಲಿಸುತ್ತವೆ. ಇವು ಯಾವವೆಂದರೆ—೧ ಪ್ರಕೃತಿಸಂಬಂಧವು, ೨ ಕರ್ಮ, ೩ ಅವಿದ್ಯಾ, ೪ ವಾಸನಾ, ೫ ರುಚಿ. ಲೀಲಾವಿಭೂತಿಯಲ್ಲಿರುವ ತನಕ ಇವನಿಗೆ ಪ್ರಕೃತಿಸಂಬಂಧವು ತಪ್ಪದು. ಪ್ರಳಯದೆಶೆಯಲ್ಲೂ ಸೃಷ್ಟಿಕ್ರಮದಲ್ಲೂ ಅಚಿತ್ಸಂಸರ್ಗವು ತಪ್ಪಿದ್ದಲ್ಲ. ಯಾವಾಗ ಅಚಿತ್ಸಂಸರ್ಗವಿರುತ್ತದೋ ಆವಾಗ ಕರ್ಮವೂ ಜೊತೆಯಲ್ಲೇ ಇರುತ್ತದೆ. ಹೀಗೆ ಪ್ರಕೃತಿ ಸಂಬಂಧವೂ ಕರ್ಮವೂ ಅನಾದಿಯಾಗಿ ಈ ಚೇತನನಿಗೆ ಪ್ರಾಪ್ತವಾಗಿವೆ. ಕರ್ಮಗಳು ಪುಣ್ಯಪಾಪರೂಪದಲ್ಲಿ ಎರಡು ವಿಧ. ಎರಡೂ ಮೋಕ್ಷಪ್ರತಿಬಂಧಕಗಳೇ. ಪಾಪಫಲವು ಪುನಃಪುನಃ ಸಂಸಾರದಲ್ಲಿ ಸೇರಿಸುವದು. ಪುಣ್ಯಫಲವು ಸ್ವರ್ಗಾದಿ ಭೋಗಗಳನ್ನು ಕೊಟ್ಟು ಅದು ಕ್ಷೀಣವಾದ ಒಡನೇ "ಕ್ಷೀಣೇಪುಣ್ಯೇ ಮರ್ತ್ಯಲೋಕಂ ವಿಶಂತಿ" ಎಂದು ಹೇಳಿರುವ ಹಾಗೆ ಈ ಭೂಲೋಕಕ್ಕೇ ಚೇತನನು ಬರಬೇಕಾಗುತ್ತದೆ. ಆದುದರಿಂದ "ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ" ಎಂದು ಹೇಳಿರುವ ಹಾಗೆ ಎರಡು ವಿಧ ಕರ್ಮಗಳನ್ನು ಭಕ್ತಿಪ್ರಪತ್ತಿ ಮಾರ್ಗಗಳ ದ್ವಾರಾ ಕಳೆದುಕೊಂ

ಷು ಮುಕ್ತಿಯನ್ನು ಹೊಂದತಕ್ಕದ್ದು. ಮೂರನೇದು ಈ ಚೇತನನನ್ನು ಹಿಂಬಾಲಿಸಿ ಅವಿದ್ಯೆಎಂಬುದು ಬರುತ್ತದೆ. ಅವಿದ್ಯೆ ಎಂದರೆ ಜ್ಞಾನಸಂಕೋಚದಿಂದುಂಟಾದ ಅಜ್ಞಾನವು. ಇದು ಹೇಗೆ ಪ್ರಾಪ್ತವಾಗುತ್ತದೆಂದರೆ ಸ್ವಾಮಿಯು ತನ್ನ ಸಹಜ ಕರುಣೆಯಿಂದ ಪ್ರೇರಿತನಾಗಿ ಸ್ವಸಂಕಲ್ಪದಿಂದ ಈ ಚೇನತರು ಒಳ್ಳೇ ದೆಶೆಯನ್ನು ಹೊಂದಲಿ ಎಂದು

ಅಚಿದವಿಶಿಷ್ಟಾನ್ ಪ್ರಳಯೇ ಜಂತೂನವಲೋಕ್ಯಜಾತನಿರ್ವೇದಾ ।
ಕರಣಕಳೇಬರಯೋಗಂ ವಿತರಿಸಿ ವೃಷಶೈಲನಾಥಕರುಣೇತ್ವಂ ॥

ಎಂದು ಹೇಳಿರುವಹಾಗೆ "ಕರಣಕಳೇಬರಯೋಗ" ಅಂದರೆ ದೇಹೇಂದ್ರಿಯಾದಿಗಳನ್ನು ಕೊಡುತ್ತಾನೆ. ಅದರೊಂದಿಗೆ ಆತನಿಗೆ ತನಗೆ ಆಧೀನವಾದ ಸ್ವಾತಂತ್ರ್ಯವನ್ನೂ ಕೊಟ್ಟಿರುತ್ತಾನೆ. ಈ ಪರಾಯತ್ತ ಸ್ವಾತಂತ್ರ್ಯದಿಂದ ಇಂದ್ರಿಯಗಳನ್ನು ದುರುಪಯೋಗಪಡಿಸಿ ಜ್ಞಾನಸಂಕೋಚವನ್ನು ಹೊಂದಿ ದೇಹಾತ್ಮಭ್ರಾಂತಿ ಸ್ವತಂತ್ರಾತ್ಮ ಭ್ರಾಂತಿಗಳ ಮೂಲಕ ಪುನಃ ಪುನಃ ಸಂಸಾರದಲ್ಲೇ ಪ್ರವರ್ತಿಸಿ ಜನ್ಮಸಂತತಿಗಳನ್ನೆತ್ತುತ್ತಾನೆ. ಇಂತಹ ಜ್ಞಾನಸಂಕೋಚದಿಂದುಂಟಾಗುವ ಭ್ರಾಂತಿಗಳಿಗೆ ಅವಿದ್ಯೆಯೆಂದು ಹೆಸರು. ಇದು ಮೂರು ವಿಧವಾಗಿರುವದು. ೧. ಅಜ್ಞಾನ—ಜ್ಞಾನಶೂನ್ಯತೆ, ಸರಿಯಾದುದೇ ಆಗಲಿ ಅಥವಾ ಭ್ರಮರೂಪವಾದುದೇ ಆಗಲಿ ಯಾವ ವಿಧವಾದ ಜ್ಞಾನವೂ ಇಲ್ಲದಿರುವಿಕೆ. ೨. ಅನ್ಯಥಾಜ್ಞಾನ—ಒಂದು ವಸ್ತುವಿನ ಯಥಾರ್ಥವಾದ ಧರ್ಮವನ್ನು ತಿಳಿಯದೆ ಬೇರೇ ವಿಧವಾದ ಧರ್ಮಯುಕ್ತವಾದುದಾಗಿ ತಿಳಿಯುವದು. ಬೆಳ್ಳಗಿರುವ ಶಂಖವು ಹಳದಿ ಬಣ್ಣದ್ದೆಂದು ತಿಳಿಯುವದು. ಸತ್ಯವಾದ ಜಗತ್ತನ್ನು ಮಿಥ್ಯೆ ಎಂದು ತಿಳಿಯುವದು. ತನಗೆ ಪೂರಾಸ್ವಾತಂತ್ರ್ಯವಿಲ್ಲದಿದ್ದರೂ ಇದೆ ಎಂದು ಭಾವಿಸುವದು ಇತ್ಯಾದಿ. ೩. ವಿಪರೀತಜ್ಞಾನ—ಒಂದು ಧರ್ಮಿಯನ್ನು ಬೇರೊಂದು ಧರ್ಮಿಯಾಗಿ ಭಾವಿಸುವದು. ಹಗ್ಗವನ್ನು ಸರ್ಪವೆಂದು ಭ್ರಮಿಸುವದು. ಹಾಗೆಯೇ ಮರೀಚಿಯನ್ನು ಜಲವೆಂದು ಭಾವಿಸುವದು. ದೇಹವನ್ನು ಆತ್ಮವೆಂದು ಭ್ರಮಿಸುವದು. ಈಶ್ವರನು ತಾನೇ ಎಂದು ಭ್ರಮಿಸುವದು ಇತ್ಯಾದಿ.

ಹೀಗೆ ಕರ್ಮ ಅವಿದ್ಯಾದಿಗಳನ್ನು ಸಂಪಾದಿಸಿದುದರಿಂದ "[1]ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ " ಎಂದು ಹೇಳಿರುವಹಾಗೆ,ಸರಿಯಾದ ಮಾರ್ಗದಲ್ಲಿ ಪ್ರವರ್ತನೆಗೆ"ಬುದ್ಧಿಃ ಕರ್ಮಾನು ಸಾರಿಣೀ " " ವಿಧಿವಿಹಿತಂ ಬುದ್ಧಿರನುಸರತಿ " ಇತ್ಯಾದಿ ವಾಕ್ಯಗಳಿಗನುಸಾರವಾಗಿ ಪ್ರತಿಬಂಧಕವಾಗಿ ಅಹಿತಕರ್ಮಗಳನ್ನೇ ಎಸಗುವ ಹಾಗೆ ಮಾಡುವ " ವಾಸನಾ " ಎಂಬ ಸಂಸ್ಕಾರವು ಉಂಟಾಗುತ್ತದೆ. ಈ ವಾಸನಾ ಎಂಬುವದು ಬಲಿಷ್ಠವಾದುದರಿಂದ ಈ ಚೇತನನನ್ನು ಅಂತಹ ಕುಮಾರ್ಗದಲ್ಲಿ ಈತನಿಗೆ ತಿಳಿಯದ ಹಾಗೆ ಎಳೆದುಕೊಂಡು ಹೋಗುತ್ತದೆ. ಆದರೆ ಈ ಪರಾಯತ್ತ ಸ್ವಾತಂತ್ರ್ಯದಿಂದ ಇಂದ್ರಿಯಗಳೂ ಮನಸ್ಸೂ ತನ್ನ ವಶವಾದುದರಿಂದ ಕೆಟ್ಟಮಾರ್ಗದಲ್ಲೇ ಆಗಲಿ ಸನ್ಮಾರ್ಗದಲ್ಲೇ ಆಗಲಿ ಪ್ರವರ್ತಿಸುವ ಹಾಗೆ ಮಾಡಲು " ರುಚಿ " ಎಂಬುದೊಂದು ಉಂಟಾಗುತ್ತದೆ. "ವಾಸನೆಗೂ" "ರುಚಿಗೂ" ಏನು ವ್ಯತ್ಯಾಸವೆಂದರೆ ಅಬುದ್ಧಿಪೂರ್ವಕವಾಗಿ ಮನುಷ್ಯನು ಅಹಿತವ್ಯಾಪಾರಗಳಲ್ಲಿ ಅನೇಕ ಸಲ ಪ್ರವರ್ತಿಸುವನು. ಇಂತಹ ಸಂಸ್ಕಾರ ವಿಶೇಷಕ್ಕೆ "ವಾಸನಾ" ಎಂದು ಹೆಸರು. ಬುದ್ಧಿಪೂರ್ವಕವಾದ ಪ್ರವರ್ತನೆಗೆ ಕಾರಣವಾದುದು " ರುಚಿಯು ".

ಈ ಪ್ರಕೃತಿ ಸಂಬಂಧ, ಕರ್ಮ, ಅವಿದ್ಯೆ, ವಾಸನಾ, ರುಚಿಗಳು ಪರಸ್ಪರ ಅನುಬಂಧಿಸಿಕೊಂಡು ಚಕ್ರದೋಪಾದಿಯಲ್ಲಿ ಬಂದರಿಂದೊಂದು ಪ್ರಾಪ್ತವಾಗುತ್ತವೆ. ಆದುದರಿಂದಲೇ " **ಕರ್ಮಾವಿದ್ಯಾದಿಚಕ್ರೆ** " ಎಂದು ಪ್ರಯೋಗಿಸಿರುತ್ತಾರೆ.

ಈ ಕರ್ಮಾವಿದ್ಯಾದಿಗಳು ಎಂಥಾವುಗಳು ಎಂದರೆ ಹೇಳುತ್ತಾರೆ " **ಅನಾದಿ ಚಿತ್ರಪ್ರವಾಹೇ** ", ಅನಾದಿಯಾಗಿ ಬಂದ ವಿಚಿತ್ರವಾದ ಪ್ರವಾಹಗಳುಳ್ಳವು. ಇವುಗಳ ಪ್ರವಾಹವು ನೀರಿನ ಪ್ರವಾಹದ ಹಾಗಲ್ಲವು. ನೀರಿನ ಪ್ರವಾಹವಾದರೋ ಉನ್ನತಪ್ರದೇಶದಿಂದ ನಿಮ್ನಪ್ರದೇಶಕ್ಕೆ ಹೋಗುವ ಒಂದೇ ವಿಧವಾದ ಗತಿಯುಳ್ಳದ್ದು. ಇವುಗಳ

---

1 ಗೀತಾ ೫-೧೫

ಪ್ರವಾಹವಾದರೋ ತುಂಬಾ ವಿಚಿತ್ರವಾದುದು. ನಾನಾವಿಧ ವಿಚಿತ್ರ ಗತಿಯುಳ್ಳವು. ಕೆಲವು ಊರ್ಧ್ವಗತಿಗಳುಳ್ಳವಳಾಗಿ ಬ್ರಹ್ಮ, ಸ್ವರ್ಗ, ವೈಕುಂಠಾದಿ ಲೋಕಗಳ ಪ್ರಾಪ್ತಿಯನ್ನುಂಟುಮಾಡಬಹುದು. ಕೆಲವು ಪುನಃ ಪುನಃ ಈ ಲೋಕಪ್ರಾಪ್ತಿಯನ್ನೇ ಉಂಟುಮಾಡ ಬಹುದು. ಕೆಲವು ಅಧೋಗತಿಯನ್ನು ಹೊಂದಿದವುಗಳಾಗಿ ನರಕಾದಿ ಗಳ ಪ್ರಾಪ್ತಿಯನ್ನುಂಟುಮಾಡಬಹುದು. ಹೀಗೆ "ಅನಾದಿಚಿತ್ರ ಪ್ರವಾಹ" ಉಳ್ಳದ್ದು.

ಇವುಗಳ ಸಂಬಂಧವು ಪ್ರತಿಯೊಬ್ಬನಿಗೂ ಬೇರೆ ಬೇರೆಯಾಗಿ ಪರಿಣಮಿಸಿ ಬೇರೆಬೇರೆ ಫಲವನ್ನುಂಟುಮಾಡುವವು ಎಂದು ತಿಳಿಸುವ ಕ್ಕಾಗಿ "**ಪ್ರತಿಪುರುಷಂ**" ಎಂಬ ಪ್ರಯೋಗವು. ಇದರಿಂದ ಜೀವ ನು ಪರಮಾತ್ಮನಲ್ಲಿ ಸ್ವರೂಪ ಐಕ್ಯನೆಂದು ಹೇಳಿ ಎಲ್ಲಾ ಜೀವರೂ ಒಂದೇ ಎಂಬ ಅದ್ವೈತಿಯ ಅಭಿಪ್ರಾಯವು ನಿರಸನಮಾಡಲ್ಪಟ್ಟಿತು. ಕರ್ಮಾನುಗುಣವಾಗಿಯೇ ಸೃಷ್ಟಿಯನ್ನು ಶ್ರೀಮನ್ನಾರಾಯಣನು ಮಾಡಿರುವದರಿಂದ ಪರಮಾತ್ಮನಿಗೆ ವೈಷಮ್ಯ ನೈರ್ಘೃಣ್ಯಾದಿಗಳು ಸಂಬಂಧಿಸುವದಿಲ್ಲವು. ಆ ಕರ್ಮ ವ್ಯತ್ಯಾಸದಿಂದಲೇ ಒಬ್ಬನು ಋಷಿ ಯಾಗಿಯೂ ಇನ್ನೊಬ್ಬನು ರಾಕ್ಷಸನಾಗಿಯೂ ಒಬ್ಬನು ರಾಜನಾಗಿ ಯೂ ಇನ್ನೊಬ್ಬನು ದರಿದ್ರನಾಗಿಯೂ ಒಬ್ಬನು ಸುಖಿಯಾಗಿಯೂ ಇನ್ನೊಬ್ಬನು ದುಃಖಭಾಕ್ಕಾಗಿಯೂ ಒಬ್ಬನು ರೋಗಿಯಾಗಿಯೂ ಇನ್ನೊಬ್ಬನು ಆರೋಗ್ಯಭಾಗಿಯಾಗಿಯೂ ಆಗುವನು. ಇಂತಹ ಕರ್ಮ ವ್ಯತ್ಯಾಸವು ಅನಾದಿಯಾಗಿ ಬಂಧಿಸುವದರಿಂದಲೇ ಅವರುಗಳ ಭೋಗಕ್ಕನುಗುಣವಾಗಿ ಇಂತಹ ವಿಷಮವಾಗಿಯೂ ಪರಿಣಾಮ್ಯಯು ಕ್ತವಾಗಿಯೂ ಇರುವ ಅಚಿತ್ಸೃಷ್ಟಿಯನ್ನು ಕೂಡ ಸ್ವಾಮಿಯು ಉಂಟುಮಾಡಿರುತ್ತಾನೆ.

ಯಾವಾಗ ಚೇತನನು ಕರ್ಮಗಳನ್ನೆಸಗಿದನೋ ಅವುಗಳಿಗೆ ಸರಿ ಯಾದ ಕರ್ಮಫಲವನ್ನು ಅಗತ್ಯ ಅನುಭವಿಸಲೇ ಬೇಕು. ಒಂದು ಕರ್ಮದ ಫಲವನ್ನು ಅನುಭವಿಸಿದ ನಂತರ ಇನ್ನೊಂದು ಪ್ರಾರಂಭವಾಗು

ತ್ತದೆ. ಈಗ ಫಲ ಕೊಡಲು ಪ್ರಾರಂಭಿಸಿದುದಕ್ಕೆ "ಪ್ರಾರಬ್ಧ"ವೆಂದು ಹೆಸರು. ಪ್ರಾರಬ್ಧದ ಫಲವು ಈ ಜನ್ಮದಲ್ಲೇ ಮುಗಿದರೂ ಮುಗಿಯಬಹುದು, ಅಥವಾ ಮುಂದಿನ ಜನ್ಮಗಳಲ್ಲೂ ಕೂಡ ಇರಬಹುದು. ಹಿಂದೆ ಕೂಡಿಹಾಕಲ್ಪಟ್ಟಿರುವ ಕರ್ಮಗಳಿಗೆ "ಸಂಚಿತ"ವೆಂದು ಹೆಸರು. ಮುಂದೆ ಫಲ ಕೊಡುವವುಗಳಿಗೆ "ಆಗಾಮಿ" ಎಂದು ಹೆಸರು. ಕರ್ಮಗಳು ತುಂಬಾ ಅತ್ಯುತ್ಕಟಗಳಾದರೆ ಒಡನೆ ಫಲಗಳನ್ನು ಕೊಡಬಹುದು. ಹೀಗೆ ಕರ್ಮಗಳಿಗೆ ತಕ್ಕ ಫಲಗಳು ಆಯಾಯಾ ಕಾಲಗಳಲ್ಲಿ ಉಂಟಾಗುತ್ತವೆಂಬುವದು ಎಲ್ಲರೂ ಒಪ್ಪಿಕೊಳ್ಳುತ್ತಾರೆಂದು "**ತತ್ತತ್ಕಾಲೇ ವಿಪಕ್ತಿರ್ವಿವಿಧಾ ಸರ್ವಸಿದ್ಧಾಂತ ಸಿದ್ಧಾ**" ಎಂಬುವದರಿಂದ ಹೇಳುತ್ತಾರೆ. ಫಲಗಳು ಕರ್ಮ ಮುಗಿದ ಒಡನೆಯೇ ಪ್ರಾಪ್ತವಾಗಬೇಕೆಂಬ ನಿಯಮವಿಲ್ಲ ಎಂದು "**ತತ್ತತ್ಕಾಲೆ**" ಎಂದು ಹೇಳಿರುತ್ತಾರೆ. ಈ ಫಲಗಳು ಕರ್ಮಾನುಗುಣವಾಗಿ ವಿಚಿತ್ರವಾಗಿ ನಾನಾವಿಧವಾದುವು ಎಂದು ತಿಳಿಸುವದಕ್ಕಾಗಿ "ವಿವಿಧಾ" ಎಂದು ಹೇಳಿರುತ್ತಾರೆ.

ಪಾಪಂಪ್ರಜ್ಞಾಂ ನಾಶಯತಿಕ್ರಿಯಮಾಣಂ ಪುನಃ ಪುನಃ ।
ನಷ್ಟಪ್ರಜ್ಞಃ ಪಾಪಮೇವ ನಿತ್ಯಮಾರಭತೇ ನರಃ ॥
ಪುಣ್ಯಂ ಪ್ರಜ್ಞಾಂ ವರ್ಧಯತಿ ಕ್ರಿಯಮಾಣಂ ಪುನಃಪುನಃ ।
ವೃದ್ಧಪ್ರಜ್ಞಃ ಪುಣ್ಯಮೇವ ನಿತ್ಯಮಾರಭತೇ ನರಃ ॥

ಎಂದು ಹೇಳಿರುವಹಾಗೆ ಕರ್ಮಗಳು ಸುಕೃತದುಷ್ಕೃತರೂಪಗಳಲ್ಲಿ ನಾನಾಬಗೆಯಾದ ಫಲಗಳನ್ನೀಯುವವು.

ಈ ಚೇತನನಿಗೆ ಹೀಗೆ ಇಂತಹ ಮೋಕ್ಷಪ್ರತಿಬಂಧಕಗಳಾದ ಪುಣ್ಯಪಾಪಗಳ ಸಂಬಂಧವೂ ಉಂಟಾಗುತ್ತಾ ಅವುಗಳ ಪ್ರಾಬಲ್ಯವು ಹೆಚ್ಚಿದರೆ ಈತನಿಗೆ ಎಂದಿಗಾದರೂ ಉತ್ತಮಗತಿಯುಂಟೋ ಎಂಬ ಶಂಕೆಯು ಉಂಟಾಗಬಹುದು. ಈ ಶಂಕಾ ಸಮಾಧಾನಾರ್ಥವಾಗಿ ಹೇಳುತ್ತಾರೆ. ಕರ್ಮಾನುಗುಣವಾಗಿ ಫಲವೆಂಬುವದನ್ನು ಸರ್ವಸಿದ್ಧಾಂತಿಗಳು ಒಪ್ಪುತ್ತಾರೆಂದು ಹೇಳುತ್ತಾರೆ. ಆದರೆ ಚಾರ್ವಾಕನೂ ಒಪ್ಪುತ್ತಾನೆಯೇ, ಎಂದರೆ, ಆತನಿಗೆ ಪ್ರತ್ಯಕ್ಷವೇ ಪ್ರಮಾಣವಾದುದರಿಂದ

ಕರ್ಮಕ್ಕನುಗುಣವಾದ ಫಲವನ್ನು ಅಂದರೆ ಚಾಕುವಿನಿಂದ ಬೆರಳು ಕಡಿದರೆಬೆರಳು ಕತ್ತರಿಸಿ ಹೋಗುವದನ್ನು ಆತನೂ ನಂಬತಕ್ಕದ್ದೇ ಎಂಬ ಭಾವವು. ಆದರೆ ಮೋಕ್ಷದೆಸೆ ಎಂಬುವದನ್ನು ಮಾತ್ರ ಆತನು ಒಪ್ಪದಿದ್ದರೂ ಕೆಟ್ಟ ಕರ್ಮಕ್ಕೆ ಕೆಟ್ಟ ಫಲವನ್ನೂ ಸತ್ಕರ್ಮಕ್ಕೆ ಸಾಧು ಫಲವನ್ನೂ ಆತನೂ ಒಪ್ಪಿಯೇ ಒಪ್ಪುವನು. ಹೀಗಿರುವಲ್ಲಿ ಎಂದಿಗಾದರೂ ಜೀವನು ಒಂದು ದಿನ ಸುಕೃತವನ್ನು ಮಾಡಿಯೇ ಮಾಡುವನು. ಅದು ಇವನ ಸದ್ಗತಿಗೆ ಅಂಕುರವಾಗಬಹುದು. ಆದುದರಿಂದ ಪ್ರತಿಯೊಬ್ಬ ಚೇತನನಿಗೂ ಯಾವುದೋ ಒಂದು ಕಾಲದಲ್ಲಿ ಕರ್ಮವಿಪಾಕ ಉಂಟಾಗಿ ಉತ್ತಮಸ್ಥಿತಿಪ್ರಾಪ್ತವಾಗುತ್ತೆಂದು ಹೇಳಲೇಬೇಕೆಂಬ ಭಾವವು. ಹಾಗೆ ಹೇಳದೇ ಹೋದರೆ ಮೋಕ್ಷವೆಂಬ ಭಾವವೇ ಈ ಸಿದ್ಧಾಂತಿಗಳಿಗೆಲ್ಲಾ ಕೂಡುವದೇ ಇಲ್ಲವೆಂಬಭಿಪ್ರಾಯವು.

ಮೋಕ್ಷಾಭಿಪ್ರಾಯವು ಅನೇಕ ಸಿದ್ಧಾಂತಿಗಳಿಗೆ ವಿಚಿತ್ರವಾಗಿ ಭಿನ್ನ ಭಿನ್ನವಾಗಿರುತ್ತದೆ. ಹೇಗೆಂದರೆ ಜೈನರು ಆತ್ಮಜ್ಞಾನದಿಂದ ಪ್ರಕೃತಿಯಿಂದ ಬಿಡಲ್ಪಟ್ಟ ಊರ್ಧ್ವಗತಿಯೇ ಮೋಕ್ಷವೆನ್ನುತ್ತಾರೆ. ಬೌದ್ಧನಿಗೆ ಜಗತ್ತಿನಲ್ಲಿ ಸ್ಥಿರತ್ವ ಬುದ್ಧಿಯೇ ಸಂಸಾರ, ಅಸ್ಥಿರತ್ವ ಬುದ್ಧಿಯೇ ಮೋಕ್ಷವು ; ಅಥವಾ ಜಗತ್ತು ಶೂನ್ಯವೆಂದು ತಿಳಿಯುವದೇ ಮೋಕ್ಷವು. ನೈಯಾಯಿಕನಿಗೆ ಸುಖದುಃಖಗಳ ಭಾವವು ನಶಿಸಿ ಹೋಗುವದೇ ಮೋಕ್ಷವು. ಪಾಶುಪತನಿಗೆ ಆಗಮದಲ್ಲಿ ಹೇಳಿರುವ ಕರ್ಮಾನುಷ್ಠಾನದಿಂದ ಪಶುಪತಿಸಾರೂಪ್ಯವನ್ನು ಹೊಂದುವದು ಮೋಕ್ಷವು. ಸಾಂಖ್ಯರಿಗೆ ಜಗತ್ಕಾರಣವಾದ ಪ್ರಕೃತಿಗಿಂತಲೂ ವಿಲಕ್ಷಣನು ಆತ್ಮನು ಎಂಬ ಜ್ಞಾನವೇ ಮೋಕ್ಷವು. ಭಾಟ್ಟಪ್ರಾಭಾಕರರು ಕರ್ಮದಿಂದ ಒಂದು ಅಪೂರ್ವವೆಂಬುದು ಹುಟ್ಟುವದೆಂದೂ ಅದರಿಂದ ಆತ್ಮಪ್ರಾಪ್ತಿಯುಂಟಾಗುತ್ತದೆಂದೂ ಅದೇ ಮೋಕ್ಷವೆಂದೂ ಹೇಳುವರು. ಮಾಯಾವಾದಿಗೆ ನಿರ್ವಿಶೇಷಚಿದ್ರೂಪವಾದ ಆತ್ಮವು ಮಾಯಾವೃತವಾಗಿ ಸಂಸಾರದಲ್ಲಿ ಸಿಕ್ಕಿ "ತತ್ವಮಸ್ಯಾದಿ" ವಾಕ್ಯಜನ್ಯಜ್ಞಾನದಿಂದ ಆ ಮಾಯೆಯಿಂದ ತಪ್ಪಿಸಿಕೊಳ್ಳುವದೇ ಮೋಕ್ಷವು. ಭಾಸ್ಕರೀಯನು ಮಾಯೆಗೆ ಬದಲಾಗಿ ಉಪಾಧಿಯನ್ನು ಹೇಳಿ ಈ ಉಪಾಧಿಯಿಂದ ಸೇರಿದ ಆತ್ಮನೇ ಸಂಸಾರಿಯಾಗಿ ತತ್ವಮಸ್ಯಾದಿ ವಾಕ್ಯಜನ್ಯಜ್ಞಾನದಿಂದ ಉಪಾಧಿಯು

ನಶಿಸಿ ಹೋಗುತ್ತದೆ, ಅದೇ ಮೋಕ್ಷವೆನ್ನುತ್ತಾನೆ. ಯಾದವಪ್ರಕಾಶನು ಪರಮಾತ್ಮನಿಗಿಂತಲೂ ತಾನೇ ಬೇರೆ ಎಂಬ ಭೇದಜ್ಞಾನವು ನಶಿಸಿ ಹೋಗುವದೇ ಮೋಕ್ಷವೆಂದು ಹೇಳುತ್ತಾನೆ.

ಹೀಗೆ ಮೋಕ್ಷದ ಅಭಿಪ್ರಾಯವು ಭಿನ್ನಭಿನ್ನವಾಗಿರುವದರಿಂದ ಕರ್ಮಪರಿಪಾಕದಿಂದ ಮೋಕ್ಷವೆಂಬುದು ಉಂಟು ಎಂದು ಸರ್ವ ಸಿದ್ಧಾಂತಿಗಳೂ ಹೇಳುತ್ತಾರೆಂಬ ಭಾವವು.

ಅದರೆ "ಸರ್ವಸ್ಯಶರಣಂ ಸುಹೃತ್" ಸರ್ವರಿಗೂ ತಾನು ಪ್ರಿಯನೂ ರಕ್ಷಕನೂ ಎಂದು ಸ್ವಾಮಿಯು ತಾನೇ ಹೇಳಿಕೊಂಡಿರುವದರಿಂದ ಎಲ್ಲರನ್ನೂ ಅಂದರೆ ತನ್ನ ಭಕ್ತನನ್ನೂ ತನ್ನನ್ನು ಸ್ಮರಿಸದೇ ಇರುವವನನ್ನೂ ಸುಕೃತಿಯನ್ನೂ ದುಷ್ಕರ್ಮಿಯನ್ನೂ ಏಕಕಾಲದಲ್ಲೇ ಒಟ್ಟಿಗೆ ಸಂರಕ್ಷಿಸಬೇಕಲ್ಲವೇ ಎಂಬ ಶಂಕೆಯು ಪ್ರಾಪ್ತವಾಗಬಹುದು. ಆತನಿಗೆ ಪಕ್ಷಪಾತಾದಿ ದೋಷಗಳೊಂದೂ ಇಲ್ಲದೆ "[1]ಸಮೋಹಂಸರ್ವ ಭೂತೇಷು" ಎಂದು ಸಮಭಾವವಿರುವದರಿಂದ ಆತನ ಯಾವದಾದರೂ ಒಂದು ಸುಕೃತಕರ್ಮಫಲವನ್ನು ವ್ಯಾಜಮಾಡಿಯೇ ರಕ್ಷಿಸುವನು ಎಂದು ಹೇಳುತ್ತಾರೆ. ಜೀವನು ಯತ್ಕಿಂಚಿತ್ ಸುಕೃತವನ್ನು ಮಾಡಿಯಾನೇ ಎಂಬವಸರ ಪ್ರತೀಕ್ಷೆಯಲ್ಲಿರುವವನಾಗಿ ಸ್ವಾಮಿಯು, ರಕ್ಷಿಸಲು ಬದ್ಧಾಧರನಾಗಿ ಸಾತ್ವಿಕಸಂಭಾಷಣೆ ಆಚಾರ್ಯಪ್ರಾಪ್ತಿದ್ವಾರಾ ಸಾಧ್ಯೋಪಾಯವನ್ನವಲಂಬಿಸುವಹಾಗೆ ಮಾಡಿ ರಕ್ಷಿಸುತ್ತಾನೆಂಬುವದನ್ನು "**ತಲ್ಲಬ್ಧಸ್ವಾವಕಾಶ**" ಎಂಬ ವಾಕ್ಯದಿಂದ ವ್ಯಕ್ತಪಡಿಸಿರುತ್ತಾರೆ. ಹೀಗೆ ಸ್ವಾಮಿಯು ಅವಸರ ಪ್ರತೀಕ್ಷೆಯಲ್ಲಿರುವದರಿಂದಲೇ "**ಪ್ರಥಮಗುರುಕೃಪಾಗೃಹ್ಯಮಾಣಃ**" ಈ ಜೀವನು ಆ ಆದಿಗುರುವಾದ ಶ್ರೀಮನ್ನಾರಾಯಣನ ಕೃಪಾಕಟಾಕ್ಷಕ್ಕೆ ಪಾತ್ರನಾಗುತ್ತಾನೆ. ಈ ಕೃಪೆಯು ತುಂಬಾ ಅಮೋಘವಾದುದು. "[2]ಸ್ವಾಭಾವಿಕಂ ತವ ಸುಹೃತ್ವಮಿದಂ" ಎಂದು ಹೇಳಿರುವಹಾಗೆ ಇದು ಸ್ವಾಮಿಗೆ ಸಹಜ

---

1 ಭ. ಗೀ. ೯, ೨೯. 2 ಶರಣಾಗತಿದೀಪಿಕೆ.

ವಾದ ಧರ್ಮವು. ಇದರಿಂದಲೇ ಜೀವನು "[1]ಪಥಾರ್ಹಮಪಿ ಕಾಕು ತ್ಸ್ಥಃ ಕೃಪಯಾಪರ್ಯಪಾಲಯತ್" ಎಂದು ಹೇಳಿರುವಹಾಗೆ ಅಪರಾಧಸಹಸ್ರಗಳಿಂದ ದಂಡನೆಗೆ ಅರ್ಹನಾಗಿದ್ದರೂ ರಕ್ಷಿಸಲ್ಪಡುವನು. "[2]ನೇತುಂ ಮುಕುಂದಯತಸೇದಯಯಾ ಸಹತ್ವಂ" ಈ ದಯೆಯ ಸಹಾಯವಿರುವದರಿಂದಲೇ ಆತನು ಇಂತಹ ಜೀವನನ್ನು ಹೇಗಾದರೂ ಮಾಡಿ ಉದ್ಧಾರಮಾಡಲು ಯತ್ನಿಸುತ್ತಾನೆ. ಸ್ವಾಮಿಗೆ ದಯೆಯೊಂದು ಮಾತ್ರವಿಲ್ಲದೇ ಇದ್ದರೆ ಸ್ವಾಮಿಯ ಮಿಕ್ಕ ಎಲ್ಲಾ ಕಲ್ಯಾಣಗುಣಗಳೂ "[3]ದೋಷಾಭವೇಯು ರೇತೇ ಯದಿನಾಮ ದಯೇ ತ್ವಯಾ ವಿನಾಭೂತಾಃ" ಎಂದು ಹೇಳಿರುವಹಾಗೆ ನಿರರ್ಥವಾಗುತ್ತಿದ್ದವು.

ಈ ಕೃಪೆಯು ಏನುಮಾಡುತ್ತದೆ ಎಂದರೆ, ಆ ದಯಾನಿಧಿಯ ಕೃಪಾಕಟಾಕ್ಷವು ಈತನನ್ನು ಜನನಕಾಲದಲ್ಲಿ ಪರಿಗ್ರಹಿಸುತ್ತದೆ. ಆದುದರಿಂದಲೇ ಈತನು "ಕೃಪಾಗೃಹ್ಯಮಾಣ" ನಾಗುತ್ತಾನೆ.

ಜಾಯಮಾನಂ ಹಿ ಪುರುಷಂ ಯಂ ಪಶ್ಯೇನ್ಮಧುಸೂಧನಃ ।
ಸಾತ್ವಿಕಸ್ಸತುವಿಜ್ಞೇಯ ಸ್ಸವೈ ಮೋಕ್ಷಾರ್ಥ ಚಿಂತಕಃ ॥

ಎಂಬ ವ್ಯಾಸೋಕ್ತಿಯ ಪ್ರಕಾರ ಈ ಚೇತನನಿಗೆ ಸಾತ್ವಿಕ ಗುಣಾಭಿವೃದ್ಧಿಯೂ ತನ್ಮೂಲಕವಾಗಿ ಸಾತ್ವಿಕ ಸಂಭಾಷಣೆಯೂ ಆಚಾರ್ಯಪ್ರಾಪ್ತಿಯೂ ಎಲ್ಲವೂ ಲಭಿಸುತ್ತವೆ. ಇಂತಹ ಸದಾಚಾರ್ಯಪ್ರಾಪ್ತಿಯಾವಾಗ ಉಂಟಾಯಿತೋ ಆಗ ಆತನು ಶಾಸ್ತ್ರಜನ್ಯ ಜ್ಞಾನವನ್ನು ಉಪದೇಶ ಮುಖೇನ ತಿಳಿದವನಾಗಿ "ವಿಪಶ್ಚಿತ್" ಜ್ಞಾನಿಯು ಆಗುತ್ತಾನೆ. ಆಗ ದೇಹಾತ್ಮಭ್ರಾಂತಿ ಸ್ವತಂತ್ರಾತ್ಮಭ್ರಾಂತಿ ಮೊದಲಾದ ಅಜ್ಞಾನಗಳಿಂದ ಬಿಡಲ್ಪಟ್ಟವನಾಗಿ ಸ್ವಾಮಿಯನ್ನು ಹೊಂದುವ ಉಪಾಯಾನುಷ್ಠಾನವನ್ನು ವಿಮರ್ಶಿಸಿ ತಿಳಿದವನಾಗಿ ಮುಕ್ತೈಶ್ವರ್ಯವಾದ ಕೈಂಕರ್ಯಸಾಂಮ್ರಾಜ್ಯಪದವಿಯನ್ನು ಹೊಂದಿ, ನಿರತಿಶಯಾನಂದ ಭಾಗಿಯಾಗುವನೆಂದು ಹೇಳುವದಕ್ಕಾಗಿ "ಮುಕ್ತೈಶ್ವ

1 ರಾ. ಸುಂ. ೩೮, ೩೪.   2 ಶರಣಾಗತಿದೀಪಿಕೆ ೧೫.

3 ದಯಾಶತಕ ೧೫.

ರ್ಯಾಂತ ಸಂಪನ್ನಿಧಿಃ" ಎಂದು ಹೇಳಿರುತ್ತಾರೆ. "ಮುಕ್ತ್ಯೈಶ್ವರ್ಯಾಂತ" ಎಂದು ಅಂತಶಬ್ದಪ್ರಯೋಗದಿಂದ ಇಹಲೋಕದ ಎಲ್ಲಾ ಐಶ್ವರ್ಯಗಳ ಮೊದಲುಗೊಂಡು ಮುಕ್ತ್ಯೈಶ್ವರ್ಯವನ್ನು ಹೊಂದಬಹುದೆಂಬ ತಾತ್ಪರ್ಯವು. ಅಪಿ ಶಬ್ದದಿಂದ ಮುಕ್ತ್ಯೈಶ್ವರ್ಯವನ್ನು ಹೊಂದುವದು ಕಷ್ಟಸಾಧ್ಯವೆಂದೂ ಅದೂ ಕೂಡ ಆ ಕರುಣಾಸಾಗರನ ಕೃಪೆಯಿಂದಲೇ ಲಭಿಸತಕ್ಕದ್ದೆಂಬುವದೂ ತೋರುತ್ತದೆ. ಈ ವಿಷಯದಲ್ಲಿ ಈಷದಪಿ ಸಂದೇಹವಿಲ್ಲವೆಂದು "ಅಪಿ" ಶಬ್ದದಿಂದ ಸೂಚಿಸಿರುತ್ತಾರೆ. ಇಂತಹ ನಿರತಿಶಯಭಾಗ್ಯವನ್ನು ಹೊಂದುವವರು ಎಂದಿಗೂ ಎಲ್ಲರೂ ಅಲ್ಲವು. ಎಲ್ಲೋ ಒಬ್ಬೊಬ್ಬರು ಹಾಗೆ ಪ್ರವರ್ತಿಸಿ ಆ ಕರುಣಾಸಾಗರನ ದಯೆಗೆ ಪಾತ್ರರಾಗುವರೆಂಬುವದನ್ನು ಹೇಳುವದಕ್ಕಾಗಿ "**ಕಶ್ಚಿತ್**" ಎಂದು ಪ್ರಯೋಗಿಸಿರುತ್ತಾರೆ.

[1]ಮನುಷ್ಯಾಣಾಂ ಸಹಸ್ರೇಷು ಕಶ್ಚಿತ್ ಯತತಿ ಸಿದ್ಧಯೆ ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂವೇತ್ತಿ ತತ್ವತಃ ॥

"ಅನೇಕ ಮನುಷ್ಯರಲ್ಲಿ ಒಬ್ಬನೀಗ ಮುಕ್ತಿಯನ್ನು ಹೊಂದಲು ಯತ್ನಿಸುವನು. ಹಾಗೆ ಯತ್ನಿಸುವ ಅನೇಕರಲ್ಲಿ ಒಬ್ಬನು ಮಾತ್ರವೇ ನನ್ನನ್ನು ಸರಿಯಾಗಿ ತಿಳಿದು ಹೊಂದುವನು" ಎಂದು ಹೇಳಿರುವ ರೀತಿಯಲ್ಲಿ ಮುಕ್ತ್ಯೈಶ್ವರ್ಯವನ್ನು ಹೊಂದುವರು ಅತಿ ವಿರಳರೆಂದು ಹೇಳುವದಕ್ಕಾಗಿ ಈ ಗೀತಾಶ್ಲೋಕದಲ್ಲೂ "ಕಶ್ಚಿತ್" ಎಂಬ ಪ್ರಯೋಗವಿರುತ್ತದೆ. ಆತನನ್ನು ಹೊಂದಲು ಎಲ್ಲಾ ವರ್ಣದವರಿಗೂ ಅಧಿಕಾರವುಂಟೆಂದು ತಿಳಿಸುವದಕ್ಕಾಗಿಯೂ "ಕಶ್ಚಿತ್" ಎಂಬ ಪ್ರಯೋಗವೆಂದು ಭಾವಿಸಬಹುದು. "[2]ಬಹೂನಾಂ ಜನ್ಮನಾಮಂತೆ" ಎಂದು ಹೇಳಿರುವಹಾಗೆ ಬಹುಕಾಲಕ್ಕೆ ಪ್ರಾಪ್ತವಾಗಬಹುದೆಂಬಭಿಪ್ರಾಯವನ್ನು ಸೂಚಿಸುವದಕ್ಕಾಗಿಯೂ ಅದು ಯಾವಾಗ ಎಂದು ಹೇಳಲು ಅಸಾಧ್ಯವೆಂದು ತಿಳಿಸುವದಕ್ಕಾಗಿಯೂ "ಕದಾಚಿತ್" ಎಂಬ ಶಬ್ದವನ್ನುಪ್ರಯೋಗಿಸಿರುತ್ತಾರೆ.

1 ಭ. ಗೀ. ೭, ೩. 2 ಭ. ಗೀ. ೭, ೧೯.

ಈ ಶ್ಲೋಕವು ಅನೇಕಾರ್ಥಗರ್ಭಿತವಾಗಿ ಅಮೋಘವಾಗಿರುವ ದರಿಂದ ಇಷ್ಟು ದೂರ ಬರಿಯಬೇಕಾಗಿ ಬಂತು. ಇದರ ಮುಖ್ಯಾಭಿಪ್ರಾಯವು ಇಷ್ಟೇ. ಜೀವನು ಕರ್ಮ ಅವಿದ್ಯೆ ಮೊದಲಾದವುಗಳ ಚಕ್ರಭ್ರಮಣಕ್ಕೆ ಸಿಕ್ಕಿ ಇತರ ಲೋಕಗಳಲ್ಲಿ ಸುಖದುಃಖಾನುಭವ ಮುಂತಾದ್ದನ್ನು ಹೊಂದಿ, ಪುನಃಪುನಃ ಜನ್ಮಸಂತತಿಗಳನ್ನೆತ್ತುವದನ್ನು ಹೊಂದುತ್ತಿದ್ದರೂ ಆಯಾ ಕರ್ಮಗಳಿಗೆ ತಕ್ಕ ಫಲ ಉಂಟೆಂಬುವದನ್ನು ಎಲ್ಲರೂ ಅಂಗಿಕರಿಸಿರುವದರಿಂದ, ಯಾವುದಾದರೂ ಒಂದು ಕಾಲದಲ್ಲಿ ಆತನು ಕಿಂಚಿತ್ ಸುಕೃತಮಾಡಬಹುದು. ಅದನ್ನೇ ವ್ಯಾಜಮಾಡಿಕೊಂಡು ಸಿದ್ಧೋಪಾಯನಾದ ಈಶ್ವರನು ಆತನನ್ನು ತನ್ನ ದಿವ್ಯ ಕಟಾಕ್ಷದಿಂದ ಜನನಕಾಲದಲ್ಲಿ ನೋಡಿದವನಾಗಿ, ಸಾತ್ವಿಕ ಸಂಭಾಷಣೆ, ಗುರೂಪಸದನ, ಜ್ಞಾನಪ್ರಾಪ್ತಿ, ಸಾಧ್ಯೋಪಾಯಾವಲಂಬನ ಮುಂತಾದವುಗಳನ್ನುಂಟುಮಾಡಿ ಮುಕ್ತೈಶ್ವರ್ಯವನ್ನೂ ಕೊಟ್ಟು ಕಾಪಾಡುವನು ಎಂಬುದು ಮುಖ್ಯತಾತ್ಪರ್ಯವು.

ಶ್ರೀಮತೇನಿಗಮಾಂತಮಹಾದೇಶಿಕಾಯನಮಃ.

ಮೊದಲನೇದಾದ ಉಪೋದ್ಘಾತಾಧಿಕಾರಕ್ಕೆ ತಿರುನಾರಾಯಣಪುರಂ

ವಿಜಯರಾಘವಶರ್ಮಕೃತ "ಹೃದಯಾನ್ವೇಷಿಣೀ"

ಎಂಬ ಕನ್ನಡ ಟೀಕಾತಾತ್ಪರ್ಯಗಳು ಸಮಾಪ್ತವಾದುವು.

ಶ್ರೀಮತೇ ಶ್ರೀನಿವಾಸಮಹಾದೇಶಿಕಾಯನಮಃ.

ಶ್ರಿಯೈನಮಃ

ಶ್ರೀಮತೇ ರಾಮಾನುಜಾಯನಮಃ

ಶ್ರೀಮತೆ ನಿಗಮಾಂತಮಹಾದೇಶಿಕಾಯನಮಃ

ಅಥ ಸಾರನಿಷ್ಕರ್ಷಾಧಿಕಾರಃ

ಶ್ರುತಿ ಪಥ ವಿಪರೀತಂ ಕ್ಷ್ವೇಳಕಲ್ಪಂ ಶ್ರುತೌಚ
ಪ್ರಕೃತಿ ಪುರುಷ ಭೋಗ ಪ್ರಾಪಕಾಂಶೋ ನಪಥ್ಯಃ ।

ಶ್ರೀಮತೆ ಶ್ರೀನಿವಾಸಮಹಾದೇಶಿಕಾಯನಮಃ.

ಶಾಸ್ತ್ರದಲ್ಲಿ ಮುಮುಕ್ಷುವಿಗೆ ಯಾವುದು ಸಾರವತ್ತಾದ ಭಾಗ ವೆಂಬುವದನ್ನು ಈ ಅಧಿಕಾರದಲ್ಲಿ ಚರ್ಚಿಸಿ ಅದರಿಂದ ತಮ್ಮ ಗ್ರಂಥಕ್ಕೆ ಸಾರ್ಥಕ್ಯವನ್ನುಸೂಚಿಸುತ್ತಾರೆ.

ಅರ್ಥ —ಶ್ರುತಿಪಥವಿಪರೀತಂ-ವೇದಮಾರ್ಗಕ್ಕೆ ವಿರೋಧವಾದು ವೆಲ್ಲಾ ಅಂದರೆ ವೇದಬಾಹ್ಯರಾದ ಚಾರ್ವಾಕ, ಜೈನ, ಬೌದ್ಧರೇ ಮೊಲಾದವರುಗಳ ಅಭಿಪ್ರಾಯಗಳೂ ಮತ್ತು ವೇದಗಳಿಗೆ ವಿಪರೀತ ವಾದ ಅಪಾರ್ಥಗಳನ್ನು ಹೇಳುವ ಕುದೃಷ್ಟಿಗಳ ಅಭಿಪ್ರಾಯಗಳೂ ಸಹ, **ಕ್ಷ್ವೇಳಕಲ್ಪಂ** - ವಿಷಕ್ಕೆ ಸಮಾನವಾದುವು. ಅಥವಾ **ಶ್ರುತಿಪಥ ವಿಪರೀತಂ** - ಶ್ರುತಿಯಲ್ಲಿ ಹೇಳಿರುವದಕ್ಕೆ ವಿರುದ್ಧವಾಗಿ ನಿತ್ಯನೈಮಿತ್ತ ಕಾದಿ ವರ್ಣಾಶ್ರಮಧರ್ಮಗಳ ಅನುಷ್ಠಾನವಿಲ್ಲದಿರುವಿಕೆಯು **ಕ್ಷ್ವೇಳು,**

ತದಿಹ ವಿಬುಧ ಗುಪ್ತಂ ಮೃತ್ಯುಭೀತಾ ವಿಚಿನ್ವ
ನ್ತ್ಯುಪನಿಷದಮೃತಾ (ಬ್ಧಾವು) ಬ್ಧೇರುತ್ತಮಂ ಸಾರಮಾರ್ಯಾಃ ॥೮॥

ಕಲ್ಪಂ - ವಿಷಕ್ಕೆ ಸಮಾನವಾಗಿ ಬಾಧಕವಾದುದು. ಇವೆರಡರಲ್ಲಿ ಮೊದಲನೇ ಅರ್ಥವೇ ಉತ್ತಮವಾಗಿ ತೋರುತ್ತದೆ. ಬಾಹ್ಯಕುದೃಷ್ಟಿಗಳ ಗ್ರಂಥಗಳ ಅವಲೋಕನವು ತುಂಬಾ ಬಾಧಕವೆಂದು ಭಾವವು. **ಶ್ರುತೌಚ** - ಶ್ರುತಿಯಲ್ಲಿಯೂ ಕೂಡ ಅಂದರೆ ವೇದವು ಗ್ರಾಹ್ಯವಾದರೂ ಕೂಡ ಅದರಲ್ಲಿ ಹೇಳಿರುವದರಲ್ಲಿ ಎಂಬ ಭಾವವು. **ಪ್ರಕೃತಿ ಪುರುಷ ಭೋಗ ಪ್ರಾಪಕಾಂಶಃ** ಅಂದರೆ ಪ್ರಕೃತಿಭೋಗಪ್ರಾಪಕಾಂಶವೂ ಮತ್ತು ಪುರುಷಭೋಗಪ್ರಾಪಕಾಂಶವೂ ಎರಡೂ, **ನಪಥ್ಯಃ** - ಯೋಗ್ಯವಾದುವಲ್ಲವು. ಪ್ರಕೃತಿಭೋಗಪ್ರಾಪಕಾಂಶವ್ಯಾವುದೆಂದರೆ, ಪ್ರಕೃತಿಯ ಅನುಭವವನ್ನು ಉಂಟುಮಾಡುವ ಭಾಗವು ಅಂದರೆ ಇಹಲೋಕದ ಮತ್ತು ಸ್ವರ್ಗ, ಬ್ರಹ್ಮಲೋಕಗಳ ಭೋಗವನ್ನುಂಟುಮಾಡುವ ಶ್ರುತಿಯ ಭಾಗವೂ ಮತ್ತು ಪುರುಷ ಭೋಗಪ್ರಾಪಕಾಂಶವ್ಯಾವುದೆಂದರೆ ಆತ್ಮಾನುಭವರೂಪವಾದ ಕೈವಲ್ಯವನ್ನು ಕೊಡುವ ಭಾಗವೂ ಈ ಎರಡೂ ಯೋಗ್ಯವಾದುವಲ್ಲವು. ಮುಮುಕ್ಷುವಿಗೆ ಇವುಗಳಿಂದಲೂ ಏನೂ ಪ್ರಯೋಜನವಿಲ್ಲವೆಂದು ಭಾವವು. ಮತ್ತೆ ಯಾವುದು ಗ್ರಾಹ್ಯವೆಂಬುವದನ್ನು ಉತ್ತರಾರ್ಧದಿಂದ ವ್ಯಕ್ತಪಡಿಸುತ್ತಾರೆ. **ತತ್** - ಆ ಕಾರಣದಿಂದ, **ಮೃತ್ಯುಭೀತಾಃ** - ಮೃತ್ಯುವೆಂದರೆ ಸಂಸಾರವು, ಅದರಿಂದ ಭಯಪಟ್ಟಂಥಾ, ಪುನಃ ಪುನಃ ಸಂಸಾರಪ್ರಾಪ್ತಿ ಎಲ್ಲಾಗುತ್ತದೋ ಎಂದು ಭೀತರಾದ ಅಂದರೆ ಮೋಕ್ಷಾರ್ಥಿಗಳಾದ **ಆರ್ಯಾಃ** - ಪಾಪಭೀತರೂ ಆದ ನಮ್ಮ ಆಚಾರ್ಯರುಗಳು, **ಇಹ** - ಪುರುಷಾರ್ಥ ಯಾವುದೆಂಬ ಅಂಶದಲ್ಲಿ ಅಥವಾ ಶ್ರುತಿಯಲ್ಲಿಯೇ, ಇರುವ, **ವಿಬುಧಗುಪ್ತಂ** - ಪಂಡಿತರಾದ ಪೂರ್ವಾಚಾರ್ಯರುಗಳಿಂದ ಸಂರಕ್ಷಿಸಲ್ಪಟ್ಟ, **ಉಪನಿಷದಮೃತಾಬ್ಧೇಃ** - ಉಪನಿಷತ್ತೆಂಬ ಅಮೃತಪ್ರಾಯವಾದ ಸಮುದ್ರದ, **ಉತ್ತಮಂಸಾರಂ** - ಸರ್ವೋತ್ತಮಸಾರಭೂತವಾದದ್ದನ್ನು ಅಂದರೆ ಸಾರತಮವಾದ ಪ್ರಪತ್ತಿಧರ್ಮವನ್ನು ಪ್ರತಿ

ಪಾದಿಸುವ ರಹಸ್ಯತ್ರಯಸಾರಾಂಶವನ್ನು, **ವಿಚಿನ್ವಂತಿ** - ಆರಿಸಿ ಸಂಗ್ರಹಿಸಿರುತ್ತಾರೆ.

ತಾತ್ಪರ್ಯ—ಆ ಕರುಣಾಸಾಗರನ ಕೃಪಾಕಟಾಕ್ಷವು ಈ ಜೀವನಿಗೆ ಯಾವುದೋ ಒಂದು ಸುಕೃತವ್ಯಾಜದಿಂದುಂಟಾಗಿ ಅದರಿಂದ ಸತ್ವೋದ್ರೇಕವುಂಟಾಗಿ ತನ್ಮೂಲಕ ಸಾತ್ವಿಕಸಂಭಾಷಣ, ಸದಾಚಾರ್ಯಪ್ರಾಪ್ತಿ ದೊರೆತು, ಜ್ಞಾನವನ್ನು ಪಡೆದು ಶರಣಾಗತಿಯನ್ನನುಷ್ಠಿಸಿ, ಅದರಿಂದ ಸ್ವಾಮಿಯನ್ನು ಹೊಂದಿ ಆತನ ಕೈಂಕರ್ಯವನ್ನೆಸಗುವ ಮಹಾಸಾಮ್ರಾಜ್ಯಪದವಿಯು ಒಂದಾನೊಂದು ಕಾಲದಲ್ಲಿ ಈತನಿಗೆ ಲಭಿಸುತ್ತದೆಂದು ಉಪೋದ್ಘಾತಾಧಿಕಾರದಲ್ಲಿ ಹೇಳಲ್ಪಟ್ಟಿತು. ಶಾಸ್ತ್ರಗಳು ಅಪಾರವಾಗಿಯೂ ಈ ಜೀವನ ಆಯುಃಪ್ರಮಾಣವು ಅತ್ಯಲ್ಪವಾಗಿಯೂ ವಿಘ್ನಗಳಾದರೊ ಅಸಂಖ್ಯಾಕವಾಗಿಯೂ ಇರುವದರಿಂದ ವಿವೇಕಿಯಾದವನು ಯಾವುದು ಸಾರತಮವಾದುದೆಂಬುವದನ್ನು ತಿಳಿದು ಅದನ್ನಾದರೂ ಗುರುವಿನ ಉಪದೇಶ ಮೂಲಕ ಮುಖ್ಯವಾಗಿ ಗ್ರಹಿಸತಕ್ಕದ್ದು ಕರ್ತವ್ಯವೆಂಬುವದನು, ತಿಳಿಸುವದಕ್ಕಾಗಿ ಈ ಸಾರನಿಷ್ಕರ್ಷಾಧಿಕಾರವನ್ನು ಬರೆದಿರುತ್ತಾರೆ.

ಪ್ರಕೃತದಲ್ಲಿ ಈ ಸಂಗ್ರಹ ಶ್ಲೋಕದಿಂದ, ನಾವು ತಿಳಿಯಬಹುದಾದ ಅಂಶಗಳನ್ನು ಐದು ವಿಧವಾಗಿ ಅಸಾರ, ಅಲ್ಪಸಾರ, ಸಾರ, ಸಾರತರ, ಸಾರತಮವೆಂದು ವಿಭಾಗಿಸಿ, ಸಾರತಮ ಯಾವುದೋ ಅದೇ ಮುಮುಕ್ಷುವಿಗೆ ಪರಮಗ್ರಾಹ್ಯವೆಂದೂ ಅದನ್ನೇ ನಮ್ಮ ಪೂರ್ವಾಚಾರ್ಯರುಗಳು ಚನ್ನಾಗಿ ಸಂಗ್ರಹಿಸಿಟ್ಟಿರುತ್ತಾರೆಂದೂ ಹೇಳುತ್ತಾರೆ.

ಪ್ರಮಾಣಗಳಲ್ಲಿ ಮೂರು ಮುಖ್ಯವಾದವು—ಪ್ರತ್ಯಕ್ಷ, ಅನುಮಾನ, ಶಾಬ್ದ. ಪರಬ್ರಹ್ಮ ಸ್ವರೂಪವೂ ಆತನನ್ನು ಹೊಂದುವ ಮಾರ್ಗಗಳೂ ಮುಖ್ಯವಾಗಿ ಮುಮುಕ್ಷುವಿಗೆ ತಿಳಿಯಬೇಕಾದ ವಿಷಯಗಳಾಗಿ, ಅವು ಪ್ರತ್ಯಕ್ಷಾನುಮಾನ ಪ್ರಮಾಣಗಳಿಂದ ಸ್ಥಾಪಿಸುವದು ಸಾಧ್ಯವಲ್ಲವಾದುದರಿಂದ ಈ ಸಂದರ್ಭದಲ್ಲಿ ಶಾಬ್ದಪ್ರಮಾಣವೇ ಮುಖ್ಯವಾದುದರಿಂದ ಮುಖ್ಯವಾಗಿ ನಾವು ಶ್ರುತಿಗಳನ್ನು ಪ್ರಮಾಣವಾಗಿ ಕಾಣಬೇಕು. ಹಾಗೆ ಕಾಣದೇ ಇರುವವರಾದ ಚಾರ್ವಾಕ, ಜೈನ, ಬೌ

ದ್ಧಾದಿ ಸಿದ್ಧಾಂತಿಗಳೂ ಮತ್ತು ಬಂದುವೇಳೆ ಶ್ರುತಿಯನ್ನು ಪ್ರಮಾಣ ವಾಗಿ ಭಾವಿಸಿದರೂ ಅವುಗಳಿಗೆ ವಿಪರೀತಾರ್ಥಗಳನ್ನು ಕಲ್ಪಿಸಿ ಬುದ್ಧಿ, ಭ್ರಮವುಂಟಾಗುವ ಹಾಗೆ ಮಾಡುವ, ಸಾಂಖ್ಯ, ಭಾಟ್ಟ ಪ್ರಾಭಾಕರ್ದ್ಧ ಮಾಯಾವಾದಿ ಯಾದವಪ್ರಕಾಶಕಾದಿ ಸಿದ್ಧಾಂತಗಳೂ ಕೂಡ ಗ್ರಾಹ್ಯ ವಲ್ಲವೆಂದು ಹೇಳುವದಕ್ಕಾಗಿ "**ಶ್ರುತಿಪಥವಿಪರೀತಂ ಕ್ಷ್ವೇಳಕಲ್ಪಂ**" ಎಂದು ಹೇಳುತ್ತಾರೆ. ಅವರುಗಳ ಸಿದ್ಧಾಂತಗಳು ವಿಷಸಮಾನಗಳು. ಚಿತ್ತಭ್ರಮವುಂಟಾಗುವದರಿಂದ ಅವುಗಳನ್ನು ಎಂದಿಗೂ ಅವಲೋ ಕಿಸಬಾರದು ಎಂದು ತಾತ್ಪರ್ಯವು.

ವೇದಶಾಸ್ತ್ರವನ್ನೇ ಬಂದು ಅಗಾಧಸಮುದ್ರದ ಹಾಗೆ ಭಾವಿಸಿ, "**ವಿಬುಧರಾದ**" ದೇವತೆಗಳು ಸಮುದ್ರಮಥನದಿಂದ, ಅದರಲ್ಲಿದ್ದ ಅಸಾರ ವಾದ ಭಾಗಗಳನ್ನು ಬಿಟ್ಟು ಸಾರವತ್ತಾದ ಅಮೃತವನ್ನೇ ಹೇಗೆ ಸಂಗ್ರ ಹಿಸಿದರೋ ಹಾಗೆ ಇಲ್ಲಿಯೂ ನಮ್ಮ ಪೂರ್ವಾಚಾರ್ಯರಾದ "**ವಿಬುಧರು**" ಶ್ರುತಿಯಲ್ಲಿ ಪರಬ್ರಹ್ಮಪ್ರತಿಪಾದಕವಾದ ಸಾರವತ್ತಾದ ಭಾಗವಾದ ಉಪನಿಷತ್ತೆಂಬ ಅಮೃತವನ್ನು ಪರಿಗ್ರಹಿಸಿದರೆಂದೂ ಆ ಅಮೃತವಾದ ಉಪನಿಷತ್ತನ್ನೂ ಬಂದು ಸಮುದ್ರವಾಗಿ ಭಾವಿಸಿ ಅದರಲ್ಲೂ ಸಾರತ ಮವಾದುದನ್ನು ತಮ್ಮ ಆಚಾರ್ಯರುಗಳು ಸಂಗ್ರಹಿಸಿದರು ಎಂದು ಹೇಳುತ್ತಾರೆ.

ಹೀಗೆ ಸಮುದ್ರಮಥನೋಪಮೆಯನ್ನು ಮನಸ್ಸಿನಲ್ಲಿಟ್ಟರುವದ ರಿಂದ ಮೊದಲು ವಾಸುಕಿಯ ಮುಖದಿಂದ ಹುಟ್ಟಿದುದು ವಿಷಜ್ವಾಲೆ ಎಂದೂ ತತ್ಸದೃಶವಾದುದು ಶ್ರುತಿಗಳಿಗೆ ಅಪಾರ್ಥ ಹೇಳುವ ಕುದೃ ಷ್ಟಿಗಳ ಸಿದ್ಧಾಂತವೆಂದೂ ಹೇಳುವದಕ್ಕಾಗಿ "**ಕ್ಷ್ವೇಳಕಲ್ಪಂ**" ಎಂದು ಪ್ರಯೋಗಿಸಿರುತ್ತಾರೆ. **ಬಿಭೇತ್ಯಲ್ಪಶ್ರುತಾದ್ವೇದೋಮಾಮಯಂ ಪ್ರತ ರಿಷ್ಯತಿ**" ಎಂದು ಹೇಳಿರುವಹಾಗೆ ಅಂತಹ ಅಲ್ಪಜ್ಞನು, ಶ್ರುತ್ಯರ್ಥ ವನ್ನು ಬೋಧಿಸಲು ಹೊರಡುವದು ಲೋಕಕ್ಕೆ ತುಂಬಾ ಅಪಾಯಕರ ವೆಂದು ಸೂಚಿಸಿದಂತೆ ಆಯಿತು. ಯಾವಾಗ ವೇದಪ್ರಮಾಣವನ್ನು ಒಪ್ಪಿ ಕೊಂಡು ಅಪಾರ್ಥ ಹೇಳಿದವರ ಸಿದ್ಧಾಂತವೇ ಕ್ಷ್ವೇಳಕಲ್ಪವಾಯಿ ತೋ ವೇದಬಾಹ್ಯರಮತವೂ ಅಂಥಾವುಗಳೇ ಎಂದು ಕೈಮುತಿಕನ್ಯಾ

ಯದಿಂದ ಸಿದ್ಧವೆಂಬ ಭಾವವು. ಇಂಥಾ ಬಾಹ್ಯಕುದೃಷ್ಟಿಗಳ ಅಭಿಪ್ರಾಯವು ತುಂಬಾ ಅಸಾರವಾದುದರಿಂದ ನಮಗೆ ಸ್ವಲ್ಪವೂ ಗ್ರಾಹ್ಯವಲ್ಲವೆಂಬ ಭಾವವು. ಗೀತೆಯಲ್ಲೂ ಶ್ರೀಕೃಷ್ಣನು ಅರ್ಜುನನಿಗೆ ಹೇಳುತ್ತಾನೆ. "ನಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಂ" (ಗೀ. ೩. 26) "ನೀನು ಕರ್ಮಸಂಬಂಧದಿಂದ ಮೂರು ವಿಧ ಅಜ್ಞಾನದಿಂದಲೂ ಆವೃತವಾಗಿದ್ದೀಯೇ. ಅಂತವನು ಒಳ್ಳೇ ಜ್ಞಾನ ಸಂಸ್ಕಾರವನ್ನು ಸದ್ಗುರು ಮೂಲಕ ಹೊಂದದೆ ಉಪದೇಶಿಕನೆಂದು ಹೊರಟು ಮೂಢಜನಗಳಿಗೆ ಇನ್ನೂ ಬುದ್ಧಿಭೇದವನ್ನುಂಟುಮಾಡುವದು ತುಂಬ ಅನುಚಿತಕೆಲಸವಾದುದರಿಂದ ಮಾಡತಕ್ಕದ್ದಲ್ಲವು. ತನ್ನ ಅಜ್ಞಾನವನ್ನು ತನ್ನಲ್ಲೇ ಇಟ್ಟುಕೊಳ್ಳದೇ ಇತರರನ್ನು ಮೋಹಗೊಳಿಸುವದು ತುಂಬಾ ದೊಡ್ಡತಪ್ಪು.

ಇನ್ನೂ ಶ್ರುತಿಗಳಲ್ಲೂ ಐಹಿಕಭೋಗಗಳನ್ನುಂಟುಮಾಡುವ ಭಾಗಗಳಿವೆ. ಅವುಗಳೂ ಅಲ್ಪಸಾರವಾಗಿ ದುಃಖಮಿಶ್ರವಾಗಿರುವ ಭೋಗಗಳಾದ ಪ್ರಯುಕ್ತ ನಮಗೆ ಯೋಗ್ಯವಾದುವಲ್ಲವು. ಹಾಗೆಯೇ ಶ್ರುತಿಗಳಲ್ಲಿ ಇನ್ನು ಕೆಲವು ಭಾಗಗಳು ಇಂದ್ರ, ಬ್ರಹ್ಮ ಲೋಕಪ್ರಾಪ್ತಿಯನ್ನುಂಟುಮಾಡುವ ಭಾಗಗಳು. ಇವುಗಳ ಭೋಗಗಳು ದುಃಖಮಿಶ್ರಗಳಲ್ಲವಾದರೂ ಅವುಗಳು ಅಸ್ಥಿರವಾದವುಗಳಾಗಿ "**ಕ್ಷೀಣೇಪುಣ್ಯೇಮರ್ತ್ಯಲೋಕಂ ವಿಶಂತಿ**" ಎಂದು ಹೇಳಿರುವಹಾಗೆ ಬಂದಾನೊಂದು ಕಾಲದಲ್ಲಿ ಪುನಃ ಇಹಲೋಕಪ್ರಾಪ್ತಿಯನ್ನೇ ಉಂಟುಮಾಡುವ ಪ್ರಯುಕ್ತ ಇದೂ ಪಥ್ಯವಲ್ಲವು. ಇವು ಐಹಿಕಭೋಗಪ್ರಾಪ್ತಿಗಿಂತ ಸ್ವಲ್ಪ ಮೇಲಾದವಾದುದರಿಂದ ಸಾರವಾದುವೆಂದು ಭಾವಿಸಬಹುದು. ಈ ಎರಡು ಶ್ರುತಿಯ ಭಾಗಗಳನ್ನೂ ಒಟ್ಟು ಸೇರಿಸಿ "ಪ್ರಕೃತಿಭೋಗಪ್ರಾಪಕಾಂಶೋನಪಥ್ಯಃ" ಎಂದು ಹೇಳಿರುತ್ತಾರೆ.

ಅನಂತರ ಶ್ರುತಿಯ ಕೆಲವು ಭಾಗಗಳು ಕೈವಲ್ಯರೂಪವಾದ ಆತ್ಮಾನುಭವವನ್ನು ಪಂಚಾಗ್ನಿವಿದ್ಯಾನಿಷ್ಠರೇ ಮೊದಲಾದವರಿಗೆ ಹೇಳುತ್ತವೆ. ಇದಕ್ಕೆ ಪುನಃ ಈ ಲೋಕಕ್ಕೆ ಬರುವ ಸಂಭವವಿಲ್ಲವೆಂದು ಹೇಳುವದರಿಂದ, ಹಿಂದಿನ ಸ್ವರ್ಗಾನುಭವಕ್ಕಿಂತ ಸ್ವಲ್ಪ ಉತ್ತಮ

ವಾದುದರಿಂದಲೂ ಮುಂದಕ್ಕೆ ಮೋಕ್ಷಪ್ರಾಪ್ತಿಗೆ ಅಭಿರುಚಿಯನ್ನುಂಟುಮಾಡುವದರಿಂದಲೂ ಇದನ್ನು ಸಾರತರಭಾಗವೆಂದು ಹೇಳಬಹುದು. ಆದರೆ ಈ ಆನಂದವು ಮೋಕ್ಷಾನಂದಕ್ಕೆ ಸಮಾನವಲ್ಲವಾದುದರಿಂದ ಇದೂ ಕೂಡ ಮುಮುಕ್ಷುವಿಗೆ ಅಷ್ಟು ಪಥ್ಯವಾದುದಲ್ಲವೆಂದು ಹೇಳುವದಕ್ಕಾಗಿ, " **ಪುರುಷಭೋಗಪ್ರಾಪಕಾಂಶೋನಪಥ್ಯಃ** " ಎಂದು ಹೇಳಿರುತ್ತಾರೆ. ಈ ಅಲ್ಪಸಾರ, ಸಾರ, ಸಾರತರಾಂಶಗಳೆಲ್ಲಾ ಮೋಕ್ಷ ಪ್ರಾಪಕಾಂಶಕ್ಕಿಂತ ತುಚ್ಛವಾದ ಪ್ರಯುಕ್ತ ಈ ಮೂರನ್ನೂ ಒಟ್ಟು ಸೇರಿಸಿ " **ಪ್ರಕೃತಿಪುರುಷಭೋಗಪ್ರಾಪಕಾಂಶೋ ನಪಥ್ಯಃ** " ಎಂದು ಹೇಳಿರುತ್ತಾರೆ. ಈ ಭಾಗಗಳನ್ನೆಲ್ಲಾ ಸಮುದ್ರಮಥನಕಾಲದಲ್ಲಿ ಸಮುದ್ರದಿಂದ ಹುಟ್ಟಿದ ಪಾರಿಜಾತ, ಕಲ್ಪವೃಕ್ಷ, ಕಾಮಧೇನು, ಚಂದ್ರ ಮೊದಲಾದವುಗಳಿಗೆ ಹೋಲಿಸಬಹುದು.

ಇನ್ನು ಯಾವ ಭಾಗ ಪಥ್ಯವೆಂದರೆ—ಶ್ರುತಿಗಳಲ್ಲಿ ಶ್ರುತಿಶಿರಸ್ಸುಗಳೆಂದು ಎನಿಸಿ ಪರಬ್ರಹ್ಮಸ್ವರೂಪವನ್ನೂ, ಆ ಮಹಾನುಭಾವನ ಕಲ್ಯಾಣಗುಣಗಳನ್ನೂ,ತತ್ಪ್ರಾಪ್ತಿಮಾರ್ಗಗಳನ್ನೂ, ಅಮೃತತ್ವರೂಪವಾದ ಪರಮಾನಂದಪ್ರಾಪ್ತಿಯನ್ನೂ ಉಪಪಾದಿಸುವ ಭಾಗವಾದ ಉಪನಿಷತ್ತುಗಳು ಪಥ್ಯವು. ಅಮೃತವು ಹೇಗೆ ವಿಬುಧರಿಗೆ ಗ್ರಾಹ್ಯವಾಯಿತೋ ಹಾಗೆ ಗ್ರಾಹ್ಯವಾದುದೆಂದು ಹೇಳುತ್ತಾರೆ. ಏಕೆ ಇದು ಪರಮ ಗ್ರಾಹ್ಯವೆಂದರೆ " ಮೃತ್ಯುಭೀತಾಃ " ಇಹಲೋಕವ್ಯಾಪ್ತಿ ಇಲ್ಲದೆಯೂ ಪುನರಾವೃತ್ತಿ ಭಯವಿಲ್ಲದೆಯೂ ಇರುವ ಹಾಗೆ ಮಾಡಬೇಕೆಂದು ಉದ್ಯುಕ್ತರಾದವರು ಕಂಡುಹಿಡಿದ ಮಾರ್ಗವು. ಮತ್ತೂ ಆರ್ಯರಾದ ನಮ್ಮ ಆಚಾರ್ಯರು ಸಂಗ್ರಹಿಸಿದ ಭಾಗಗಳು, ಆರ್ಯರೆಂದರೆ ಪಾಪದಿಂದ ಬಹುದೂರವಿರುವರು, ಅಂದರೆ ಪಾಪ ಲೇಶವೂ ಇಲ್ಲದೆ ಹೇಯಪ್ರತ್ಯನೀಕರಾಗಿ ಪರಮಪೂಜ್ಯರಾದವರು. ಹೀಗೆ " **ಪೂರ್ವಾಚಾರ್ಯಸುರಕ್ಷಿತಾಂ** " ಎಂದು ಶ್ರೀ ಭಾಷ್ಯಕಾರರು ಹೇಳಿರುವ ಹಾಗೆ, ಅಂಥಾವರಿಂದ ಸಂರಕ್ಷಿಸಲ್ಪಟ್ಟಿರುವದರಿಂದಲೇ ಈಭಾಗವು ಸರ್ವೋತ್ಕೃಷ್ಟಭಾಗವೆಂದಭಿಪ್ರಾಯವು.

ಆದರೆ ಈ ಉಪನಿಷದ್ಭಾಗವೂ ಕೂಡ ಅಪಾರವಾದುದರಿಂದ ಅದನ್ನೂ ಕೂಡ ಒಂದು ಅಮೃತಾಬ್ಧಿಯ ಹಾಗೆ ಭಾವಿಸಿ "ಕ್ಷೀರಾಬ್ಧೌಶ್ರೀರ್ಯಥಾಜಾತಾ" ಎಂದು ಹೇಳಿರುವ ಹಾಗೆ, ಕೊನೆಗೆ ತುಂಬಾ ಅನುಗ್ರಹಮಯಳಾದವಳಾಗಿಯೂ ಜೀವರುಗಳನ್ನೆಲ್ಲಾ ಉಜ್ಜೀವಿಸುವಹಾಗೆ ಮಾಡುವಂಥಾವಳಾಗಿಯೂ ಇರುವ ಲಕ್ಷ್ಮಿಯು ಹುಟ್ಟಿ ಪರಮಾತ್ಮನನ್ನು ಕುರಿತು ಹೋಗಿ ಸೇರಿದುದರಿಂದ, ಸಮುದ್ರಮಥನಕಾಲದಲ್ಲಿ ಹುಟ್ಟಿದ ಎಲ್ಲಾವಸ್ತುಗಳಿಗಿಂತಲೂ ಲಕ್ಷ್ಮಿಯು ಹೇಗೆ ಸ್ವಾಮಿಪ್ರಿಯಳಾಗಿ ಸಾರತಮಳೋ, ಹಾಗೆಯೇ ಈ ಉಪನಿಷದ್ಭಾಗಗಳಲ್ಲೂ, ಈ ಜೀವನನ್ನು ಸ್ವಾಮಿಗೆ ತುಂಬಾ ಪ್ರಿಯನನ್ನಾಗಿ ಮಾಡುವ ಈ ರಹಸ್ಯತ್ರಯಾರ್ಥಗಳನ್ನು ಉಪಪಾದಿಸುವ ಭಾಗವು **ಸಾರತಮ** ವಾದುದೆಂಬ ಭಾವವು. ಈ ಉತ್ತಮಸಾರವು ಈ ಉಪನಿಷತ್ತುಗಳಲ್ಲಿದ್ದುದನ್ನು ಸಂಗ್ರಹಿಸಿ, ಪೂರ್ವಾಚಾರ್ಯರು ರಕ್ಷಿಸಿಟ್ಟಿದದನ್ನು ನಮಗೆ ಅನುಗ್ರಹಿಸಿ ಕೊಟ್ಟವರು ಯಾರೆಂದರೆ, ನಮ್ಮಾಚಾರ್ಯರಾದ ಆರ್ಯರು. ಇವರುಗಳಿಗೆ ಪಾಪಸಂಬಂಧವೇ ಇಲ್ಲದೆ, ಅದರಿಂದ ದೂರೀಕೃತರಾದುದರಿಂದಲೇ ಆರ್ಯರೆನ್ನಿಸಿಕೊಳ್ಳುವದಕ್ಕೆ ಯೋಗ್ಯರಾದವರು. ಹಿಂದೆ "ಸ್ಪರ್ಧಾವಿಪ್ಲವ ವಿಪ್ರಲಂಭಪದವೀ ವ್ಯದೇಶಿಕಾ ದೇಶಿಕಾಃ" ಎಂದು ಹೇಳಿದ ಹಾಗೆ ಹೇಯಗುಣ ಗಂಧದ ಸಂಬಂಧವೇ ಇಲ್ಲದವರು. ಇದು ಸಾರತಮವಾದುದರಿಂದ ಈ ರಹಸ್ಯತ್ರಯಾರ್ಥಗಳು ಪರಮಗ್ರಾಹ್ಯವಾದುದೆಂಬುವದು ಮುಖ್ಯತಾತ್ಪರ್ಯವು. ಇಂತಹ ರಹಸ್ಯತ್ರಯಾರ್ಥಗಳಿಂದ ಪರಮಗ್ರಾಹ್ಯಗಳಾದ ಭಾಗವನ್ನು ನಮ್ಮ ಪೂರ್ವಾಚಾರ್ಯರುಗಳು ತಮ್ಮ ಜ್ಞಾನದೀಪ್ತಿಯಿಂದ ಹುಡಿಕಿ ಶ್ರೀಮನ್ನಾರಾಯಣನ ಪೀತಾಂಬರದಲ್ಲಿ ಮರೆಯಾಗಿರುವ ಶ್ರೀ ಮಹಾಲಕ್ಷ್ಮಿಯನ್ನು, ಪೀತಾಂಬರವನ್ನು ಓರೆಮಾಡಿ ಶ್ರೀ ಮಹಾಲಕ್ಷ್ಮಿಯನ್ನು ತೋರುವ ತೆರದಿ ಪ್ರಕಾಶಪಡಿಸಿರುತ್ತಾರೆ.

ಈ ಐಹಿಕೈಶ್ವರ್ಯಪ್ರಾಪ್ತಿ, ಸ್ವರ್ಗ ಮುಂತಾದ ಲೋಕಗಳನುಭವ, ಕೈವಲ್ಯಸುಖ, ಮೋಕ್ಷಾನಂದಸುಖಗಳನ್ನು ಬಯಿಸುವ

ಇನ್ದ ರಹಸ್ಯತ್ರಯತ್ತಿಲ್ ತಿರುಮಂತ್ರಂ (೧) "ಸರ್ವಮಷ್ಟಾಕ್ಷರಾಂತಸ್ಥಂ" ಎನ್ಗಿರಪಡಿಯೇ ತನ್ನರ್ಥತ್ತೈಯರಿಯವೆಲ್ಲಾ ವರ್ಥನ್ಗಳೆಯುಮ್ ಮರಿನ್ದು ತರುಂಬಡಿಯಾ ಯಿರುಕ್ಕೈಯಾಲುಂ, ಚರಮ ಶ್ಲೋಕಂ (೨) "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂವ್ರಜ" ಎನ್ರು ತಾನ್ ಶೊಲ್ಲುಗಿರ ಉಪಾಯ ಮೊನ್ರೈಯುಮೇ ಯವಲಂಬಿಕ್ಕ ಸರ್ವೋಪಾಯ ಫಲಸಿದ್ಧಿಯುಂಡಾ ಮೆನ್ರು ಸ್ಥಾಪಿಕ್ಕೈಯಾಲುಂ, ದ್ವಯಮುಂ ಕಠ ಶ್ರುತ್ಯಾದಿಗಳಿಲ್ ಶೊಲ್ಲುಗಿರ ಪಡಿಯೇ ತನ್ನೈ ಯೊರುಕ್ಕಾಲು

ಭಕ್ತರ ಕ್ರಮಗಳೆಲ್ಲಾ ಭಗವದ್ಗೀತೆಯ ೭ನೇ ಅಧ್ಯಾಯದ ೧೫ನೇ ಶ್ಲೋಕದಲ್ಲೂ, ೮ನೇ ಅಧ್ಯಾಯದ ೧೬ನೇ ಶ್ಲೋಕ ಆರಂಭಿಸಿ, ಹೇಳಲ್ಪಟ್ಟು ಶ್ರೀ ಭಾಷ್ಯಕಾರರ ಭಾಷ್ಯದಲ್ಲೂ ಮತ್ತೂ ಶ್ರೀ ಭಾಷ್ಯದಲ್ಲಿ ಭೂಮಾಧಿಕರಣ, ಕಾರ್ಯಾಧಿಕರಣಗಳಲ್ಲೂ ವಿಶದವಾಗಿ ಉಪಪಾದಿಸಲ್ಪಟ್ಟಿರುತ್ತವೆ.

ರಹಸ್ಯತ್ರಯವೇ ಮುಮುಕ್ಷುವಿಗೆ ಮುಖ್ಯವಾಗಿ ತಿಳಿಯತಕ್ಕ ಅಂಶವು.

(ಅದು ಹೇಗೆಂದರೆ, ಹಿಂದೆ ಶ್ಲೋಕದಲ್ಲಿ ಸಂಕ್ಷೇಪವಾಗಿ ಹೇಳಿದುದನ್ನೇ ಉಪಪಾದಿಸಿ, ಇದೇ ಸಾರತಮ ಭಾಗವೆಂದು ನಿಷ್ಕರ್ಷಿಸಿ, ಅವುಗಳ ಅರ್ಥ ಸ್ವಾರಸ್ಯವನ್ನು ಗ್ರಹಿಸತಕ್ಕದ್ದು ಮುಖ್ಯಕರ್ತವ್ಯಾಂಶವೆಂದು ಸ್ಥಾಪಿಸುತ್ತಾರೆ.)

(೧) ನಾರದೀಯಕಲ್ಪ. ೧. ೯. (೨) ಗೀತೆ. ೧೮. ೬೬. ಈ ಅಭಿಪ್ರಾಯವನ್ನೇ ಶ್ರೀಮದಾಚಾರ್ಯರವರು ಚರಮಶ್ಲೋಕಾಧಿಕಾರದಲ್ಲಿ ಒಂದು ಕಾರಿಕೆಯಾಗಿ ಅನುಗ್ರಹಿಸಿರುತ್ತಾರೆ:—"ಸುದುಷ್ಕರೇಣ ಶೋಚೇದ್ಯೋ ಯೇನಯೇನೇಷ್ಟಹೇತುನಾ । ಸಸತಸ್ಯಾಹಮೇವೇತಿ ಚರಮಶ್ಲೋಕಸಂಗ್ರಹಃ" ಅಂದರೆ "ಯಾವನೊಬ್ಬನು ತುಂಬಾ ಕಷ್ಟಸಾಧ್ಯವಾಗಿರುವ ಫಲಸಾಧನಗಳನ್ನು ಕುರಿತು ಶೋಕಿಸುತ್ತಾನೋ, ಅವನಿಗೆ ಅವೆಲ್ಲಾ ಫಲಸಿದ್ಧಿಗೋಸ್ಕರ ಶರಣಾಗತ್ಯನುಷ್ಠಾನದಿಂದ ವಶನಾದ ನಾನೇ ಆ ಎಲ್ಲಾ ಫಲಗಳಿಗೂ ಸಾಧನವಾಗುವನೆಂಬುದು ಚರಮಶ್ಲೋಕದ ಸಂಗ್ರಹಾರ್ಥವು."

ಚ್ಚರಿತ್ತವನ್ನೈ ಸರ್ವಪ್ರಕಾರತ್ತಾಲುಂ ಕೃತಕೃತ್ಯನಾಕ್ಕವಲ್ಲ ಪ್ರಭಾವತ್ತೈ ಯುಡೈತ್ತಾ ಯಿರುಕ್ಕೈಯಾಲುಂ ರಹಸ್ಯತ್ರಯಮೇ ಮುಮುಕ್ಷುಕ್ಕಳು ಕ್ಕಾದರಣೀಯಂ.

ಮೂಲಮಂತ್ರ, ದ್ವಯ, ಚರಮಶ್ಲೋಕವಾದ ಈ ಮೂರು ರಹಸ್ಯಗಳಲ್ಲೂ, ಮೂಲಮಂತ್ರವು "ಸರ್ವಮಷ್ಟಾಕ್ಷರಾಂತಸ್ಥಂ" "ಸರ್ವಾಭಿಪ್ರಾಯಗಳೂ ಮೂಲಮಂತ್ರದ ಎಂಟು ಅಕ್ಷರಗಳಲ್ಲಿವೆ" ಎಂದು ಹೇಳಿರುವ ಮೇರಿಗೆ, ಆ ಮಂತ್ರಾರ್ಥವನ್ನು ಗ್ರಹಿಸಿದರೆ, ಅದಕ್ಕೆ ಎಲ್ಲಾ ಅಭಿಪ್ರಾಯಗಳನ್ನೂ ಈತನಿಗೆ ಬೋಧಿಸುವ ಶಕ್ತಿ ಇರುವದರಿಂದಲೂ, ಚರಮಶ್ಲೋಕವು, "ಎಲ್ಲಾ ಉಪಾಯಗಳನ್ನೂ ಬಿಟ್ಟು ನನ್ನೊಬ್ಬನನ್ನೇ ಶರಣು ಹೊಂದು," ಎಂದು ಹೇಳಿರುವಹಾಗೆ, ಆ ಬಂದು ಪಾಯವನ್ನವಲಂಬಿಸಿದರೆ ಸಮಸ್ತ ಉಪಾಯಗಳ ಫಲಸಿದ್ಧಿಯೂ ಉಂಟಾಗುವದರಿಂದಲೂ, ದ್ವಯಮಂತ್ರವೂ ಕೂಡ, ಕಠಶ್ರುತಿಯೇ ಮೊದಲಾದವುಗಳಲ್ಲಿ ಹೇಳಿರುವಹಾಗೆ ಬಂದುಸಲ ಉಚ್ಚರಿಸಿದವರಿಗೆ ಸರ್ವಪ್ರಕಾರದಲ್ಲೂ ಕೃತಕೃತ್ಯನನ್ನಾಗಿ ಮಾಡುವ ಮಹಿಮೆಯನ್ನು ಹೊಂದಿರುವದರಿಂದಲೂ, ಈ ಮೂರು ರಹಸ್ಯಗಳೇ ಮೋಕ್ಷಾರ್ಥಿಗೆ ತುಂಬಾ ವಿಶ್ವಾಸಯೋಗ್ಯವಾದವು; ಅಂದರೆ ತುಂಬಾಗ್ರಾಹ್ಯವಾದವು ಎಂಬರ್ಥವು. (ಮೂಲಮಂತ್ರದಲ್ಲಿ ಎಂಟೇ ಅಕ್ಷರಗಳಿದ್ದರೂ ಆ ಮಂತ್ರದಲ್ಲಿ ತೋರುವ ಅರ್ಥಗಳು ಇನ್ಯಾವಮಂತ್ರಗಳಲ್ಲೂ ಅಷ್ಟು ವಿಪುಳವಾಗಿಲ್ಲವೆಂದು ಹೇಳುವುದಕ್ಕಾಗಿ "ಸರ್ವಮಷ್ಟಾಕ್ಷರಾಂತಸ್ಥಂ" ಈ ಎಂಟು ಅಕ್ಷರಗಳು ಎಲ್ಲಾಮಂತ್ರಗಳಲ್ಲಿ ತೋರುವ ಅಭಿಪ್ರಾಯಗಳನ್ನೆಲ್ಲಾ ಬಳಗೊಂಡಿವೆ ಎಂದು ಹೇಳಲ್ಪಟ್ಟಿದೆ. ದ್ವಯಮಂತ್ರ ವಿಷಯವನ್ನು ಹೇಳುವದಕ್ಕೆ ಪೂರ್ವದಲ್ಲಿ ಚರಮಶ್ಲೋಕವನ್ನು ಕುರಿತು ಹೇಳಿದುದರ ತಾತ್ಪರ್ಯವೇನೆಂದರೆ:—ಅನುಷ್ಠಾನವಿಷಯವಾಗಿ ಹೇಳುವದಕ್ಕಿಂತ ಮುಂಚೆ ವಿಧಿವಾಕ್ಯವನ್ನು ಹೇಳುವದು ಯುಕ್ತವೆಂದು ತಿಳಿದು ಹೇಳಿದರೆಂದು ಭಾವಿಸತಕ್ಕದ್ದು. ದ್ವಯಮಂತ್ರದ ಪ್ರಭಾವವೇನೆಂದರೆ ಅದನ್ನು ಬಂದುಸಲ ಉಚ್ಚಾರಮಾಡಿದರೆ ಸಾಕು, ಉಚ್ಚರಿಸಿದವನನ್ನು ಕೃತಕೃತ್ಯನನ್ನಾಗಿಮಾಡಿ ಆತನಿಗೆ ನಿರತಿಶಯಾನಂ

**ಅಸಾರ ಮಲ್ಪಸಾರಂಚ ಸಾರಂ ಸಾರತರಂ ತ್ಯಜೇತ್ ।
ಭಜೇತ್ ಸಾರತಮಂ ಶಾಸ್ತ್ರೆ ರತ್ನಾಕರ ಇವಾಮೃತಂ ॥**

ದಪೂರ್ವಕವಾದ ಭಗವತ್ಪ್ರಾಪ್ತಿ ಕೈಂಕರ್ಯಗಳನ್ನು ಕೊಡುತ್ತದೆ. ಹೀಗೆ ಕಠಶ್ರುತಿಯಲ್ಲಿ ಎಲ್ಲಿ ಹೇಳಿರುತ್ತದೆ ಎಂದರೆ "**ಯಸ್ಸಕೃದುಚ್ಚಾರ ಸ್ಸಂಸಾರ ತಾರಕೋಭವತಿ**" "ದ್ವಯದ ಒಂದುಸಲ ಉಚ್ಚಾರವು ಸಂಸಾರವನ್ನು ದಾಟಿಸುವಂಥಾದ್ದು ಆಗುವದು." "**ರಹಸ್ಯತ್ರಯಮೇ**" ಎಂಬಲ್ಲಿ "ಏ" ಎಂಬ ಅವಧಾರಣ ತಾತ್ಪರ್ಯವೇನೆಂದರೆ, ಮುಮುಕ್ಷುವಿಗೆ ಮುಖ್ಯವಾಗಿ ಇವು ಮೂರು ಮಂತ್ರಗಳ ರಹಸ್ಯಾರ್ಥಗಳೆಲ್ಲಾ ವಿಶದವಾಗಿ ತಿಳಿದರೆ ಸಾಕು. ಮತ್ತ್ಯಾವ ಮಂತ್ರಗಳೇ ಆಗಲಿ ಉಪನಿಷದ್ಭಾಗಗಳೇ ಆಗಲಿ ತಿಳಿಯಬೇಕೆಂಬ ಅವಶ್ಯಕವಿಲ್ಲವೆಂಬ ಭಾವವು. "**ಕೃತಕೃತ್ಯ**" ನೆಂದರೆ ಭಗವತ್ಪ್ರಾಪ್ತಿಗೆ ಏನುಮಾಡಬೇಕೋ, ಆ ಕರ್ತವ್ಯವನ್ನು ಮಾಡಿ ಪೂರೈಸಿದನೆಂದೂ, ಇನ್ನು ಅದಕ್ಕಾಗಿ ಇನ್ನ್ಯಾವ ಉಪಾಯ, ಸಾಧನಗಳನ್ನು ಅವಲಂಬಿಸತಕ್ಕದ್ದಿಲ್ಲವೆಂದೂ ಅಭಿಪ್ರಾಯವು.)

ವೇದದ ಎಲ್ಲಾಭಾಗಗಳೂ ಮುಮುಕ್ಷುವಿಗೆ ಅವಶ್ಯಕವಾದುದಲ್ಲವು.

(ಹಾಗಾದರೆ ವೇದ ಮುಖ್ಯಪ್ರಮಾಣವೆಂದೂ, ಉಪನಿಷದ್ಭಾಗವು ಅದರಲ್ಲಿ ಸಾರಭೂತವಾದುದೆಂದೂ ಶಾಸ್ತ್ರಗಳಲ್ಲಿ ಹೇಳಿರುವಲ್ಲಿ ಅವುಗಳೆಲ್ಲಾ ಮುಮುಕ್ಷುವಿಗೆ ಬೇಡವೋ ಎಂಬ ಶಂಕಾಸಮಾಧಾನಾರ್ಥವಾಗಿ ಹೇಳುತ್ತಾರೆ).

ಶಾಸ್ತ್ರದಲ್ಲಿ **ಅಸಾರಂ**-ಸಾರವಿಲ್ಲದ ಭಾಗವನ್ನೂ, **ಅಲ್ಪಸಾರಂಚ**-ಸ್ವಲ್ಪಸಾರ ಉಳ್ಳ ಭಾಗವನ್ನೂ, **ಸಾರಂ** - ಸಾರವಾದ ಭಾಗವನ್ನೂ, **ಸಾರತರಂ** - ಸಾರತರವಾದ ಭಾಗವನ್ನೂ, **ತ್ಯಜೇತ್** - ಬಿಟ್ಟುಬಿಡತಕ್ಕದ್ದು. "**ಭಜೇತ್ಸಾರತಮಂಶಾಸ್ತ್ರೆ**" - ಅದರಲ್ಲಿ ಸಾರತಮಭಾಗವನ್ನು ಮಾತ್ರ ಸಂಗ್ರಹಿಸತಕ್ಕದ್ದು, ಹೇಗೆಂದರೆ **ರತ್ನಾಕರೆ** - ಸಮುದ್ರದಲ್ಲಿ, **ಅಮೃತಮಿವ**- ಅಮೃತಭಾಗದೋಪಾದಿಯಲ್ಲಿ ಸಾರತಮವನ್ನೇ

ಪರಮ ಪುರುಷಾರ್ಥಮುಂ ತದುಪಾಯಮುಂ ಪ್ರತ್ಯಕ್ಷಾದಿ ಪ್ರಮಾಣಂಗಳಾಲರಿಯ ವೊಣ್ಣಾದ ಪಡಿಯಾಲೆ ಇವತ್ತಿರ್ಕ್ಕು (1) "ಶಾಸ್ತ್ರಾದ್ವೇದ್ಮಿ ಜನಾರ್ದನಂ," (2) "ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ಕಾರ್ಯಕಾರ್ಯ ವ್ಯವಸ್ಥಿತೌ" (3) "ಶಬ್ದಬ್ರಹ್ಮಣಿನಿಷ್ಣಾತಃ ಪರಂಬ್ರಹ್ಮಾಧಿಗಚ್ಛತಿ" ಎನ್ರುಂ ಶೊಲ್ಲುಗಿರಪಡಿಯೇ ಶಬ್ದಮೇ ಪ್ರಮಾಣಂ.

ಸ್ವೀಕರಿಸತಕ್ಕದ್ದು. ಸಮುದ್ರದಲ್ಲಿ, ಮರಳು, ಜಲಚರ, ಜಲ, ರತ್ನಗಳು ಇವೆಲ್ಲಾ ಇರಬಹುದು. ವಿವೇಕಿಯಾದವನು ಅವುಗಳನ್ನೆಲ್ಲಾ ಬಿಟ್ಟು ಅಮೃತವನ್ನೇ ಸ್ವೀಕರಿಸುವಹಾಗೆ, ಶಾಸ್ತ್ರದಲ್ಲೂ ಸಾರತಮವಾದುದೇ ಉಪಾದೇಯವು. (ಈ ಶ್ಲೋಕವು ಉತ್ತರ

(1) ಭಾರ. ಉದ್ಯೋ. 68. ೫. ಮಾಯಾಂನಸೇವೆ ಭದ್ರಂತೇ ನವೃಥಾ ಧರ್ಮಮಾಚರೇ । ಶುದ್ಧಭಾವಂ ಗತೋಭಕ್ತ್ಯಾ ಶಾಸ್ತ್ರಾದ್ವೇದ್ಮಿ ಜನಾರ್ದನಂ ॥ ಎಂಬುದು ಪೂರಾ ಶ್ಲೋಕವು. ಇದು ಗೀತೆಯಲ್ಲಿ ಉಪಪಾದಿತವಾಗಿರುವದರ ಸಂಕ್ಷೇಪೋಕ್ತಿಯು. ಇಲ್ಲಿ "ಶಾಸ್ತ್ರಾತ್" ಎಂಬುವದು ಕಾಕಾಕ್ಷಿನ್ಯಾಯದಿಂದ ಶುದ್ಧಭಾವವನ್ನು ಹೊಂದುವುದಕ್ಕೂ ಪರಮಾತ್ಮನ ವೇದನ ರೂಪವಾದ ಸಾಕ್ಷಾತ್ಕಾರಕ್ಕೂ ಅನ್ವಯವು. ಆದುದರಿಂದ ಶಾಸ್ತ್ರಾತ್-ಶಾಸ್ತ್ರಪ್ರಮಾಣ ಬಲದಿಂದ, "ಶುದ್ಧಭಾವಂಗತಃ" - ಕರ್ಮಯೋಗ ಜ್ಞಾನಯೋಗಗಳ ಮೂಲಕ ಪರಿಶುದ್ಧಾಂತಃಕರಣನಾಗಿ, ಭಕ್ತ್ಯಾ- ಭಕ್ತಿಯೋಗವನ್ನವಲಂಬಿಸುವುದರ ಮೂಲಕ, ಜನಾರ್ದನಂ ವೇದ್ಮಿ - ಉಪಾಸನದ್ವಾರಾ ಜನಾರ್ದನನನ್ನು ಸಾಕ್ಷಾತ್ಕರಿಸುವೆನು. ಇನ್ನು ಮಿಕ್ಕ ಕರ್ಮಗಳೆಲ್ಲಾ ವ್ಯರ್ಥವೆಂಬ ಭಾವವು. (2) ಗೀತೆ. 16. 24. (3) ಭಾರ. ಶಾಂತಿ. 276-2. ಇದು ಭೀಷ್ಮರು ಯುಧಿಷ್ಠರನಿಗೆ ಉಪದೇಶಮಾಡುವ ಸಂದರ್ಭವು. ಗೋಕಪಿಲ ಸಂವಾದದಲ್ಲಿ ಕಪಿಲ ವಾಕ್ಯವು :— "ವೇದಾಃ ಪ್ರಮಾಣಂ ಲೋಕಾನಾಂ ನವೇದಾಃ ಪೃಷ್ಟತಃಕೃತಾಃ । ದ್ವೇಬ್ರಹ್ಮಣೀ ವೇದಿತವ್ಯೇ ಶಬ್ದಬ್ರಹ್ಮ ಪರಂಚಯುತ್ । ಶಬ್ದಬ್ರಹ್ಮಣಿ ನಿಷ್ಣಾತಃ ಪರಬ್ರಹ್ಮಾಧಿಗಚ್ಛತಿ" ಲೋಕದ ಜನರಿಗೆಲ್ಲಾ ವೇದಗಳೇ ಪ್ರಮಾಣವು, ವೇದಗಳು ತಿರಸ್ಕರಿಸತಕ್ಕದ್ದಲ್ಲವು. ಎರಡು ಬ್ರಹ್ಮಗಳನ್ನು ತಿಳಿಯತಕ್ಕದ್ದು. ಶಬ್ದ ಬ್ರಹ್ಮರೂಪವಾದ ವೇದಗಳನ್ನು ಯಥಾವತ್ತಾಗಿ ಆಸಕ್ತಿಯಿಟ್ಟು ತಿಳಿದರೆ ಪರಬ್ರಹ್ಮವನ್ನು ಹೊಂದುವನು ಎಂಬರ್ಥವು.

ಗೀತಾವಾಕ್ಯವು. ಹೀಗೆ ಶಾಸ್ತ್ರವೆಂದು ಹೇಳಿಸಿಕೊಳ್ಳುವುಗಳನ್ನು ಐದು ಭಾಗವಾಗಿ ವಿಭಾಗಿಸಿ ಮೊದಲು ಹೇಳಿದ ನಾಲ್ಕುಭಾಗಗಳೂ ಹೇಗೆ ಉಪಾದೇಯುಗಳಲ್ಲವೆಂದೂ, ಐದನೇದಾದ ಸಾರತಮವೆನ್ನಿಸುವದು ಹೇಗೆ ಉಪಾದೇಯುವೆಂಬುದನ್ನೂ, ಉಪಪಾದಿಸುತ್ತಾರೆ).

ಪರಬ್ರಹ್ಮಸ್ವರೂಪ, ಮತ್ತು ಮೋಕ್ಷೋಪಾಯಾದಿಗಳಿಗೆ ಶಾಬ್ದವೇ ಪ್ರಮಾಣವು.

ಧರ್ಮಾರ್ಥಕಾಮಮೋಕ್ಷವೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಸರ್ವೋತ್ಕೃಷ್ಟವಾದ ಪುರುಷಾರ್ಥವೆನಿಸುವ ಮೋಕ್ಷವನ್ನೂ, ಅದನ್ನು ಹೊಂದುವ ಮಾರ್ಗವನ್ನೂ ಪ್ರತ್ಯಕ್ಷವೇ ಮೊದಲಾದ (ಆದಿಪದದಿಂದ ಅನುಮಾನಪ್ರಮಾಣವು ಹೇಳಲ್ಪಟ್ಟಿತು) ಪ್ರಮಾಣಗಳಿಂದ ತಿಳಿಯುವದು ಅಶಕ್ಯವಾದುದರಿಂದ, "ಶಾಸ್ತ್ರಾದ್ವೇದ್ಮಿ ಜನಾರ್ದನಂ" "ಶಾಸ್ತ್ರಪ್ರಮಾಣದಿಂದಲೇ ಜನಾರ್ದನನನ್ನು ತಿಳಿಯತಕ್ಕದ್ದು ಎಂದರೆ ಸಾಕ್ಷಾತ್ಕರಿಸತಕ್ಕದ್ದು." ಎಂದೂ, "ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ" ಆದುದರಿಂದ ಇದು ಮಾಡತಕ್ಕದ್ದು, ಇದು ಮಾಡತಕ್ಕದ್ದಲ್ಲವೆಂಬ ವಿವೇಚನೆಯಲ್ಲಿ, ನಿನಗೆ ಶಾಸ್ತ್ರವೇ ಪ್ರಮಾಣವು" ಎಂದೂ, "ಶಬ್ದಬ್ರಹ್ಮಣಿನಿಷ್ಣಾತಃ ಪರಂಬ್ರಹ್ಮಾಧಿಗಚ್ಛತಿ" ಶಬ್ದಬ್ರಹ್ಮಣಿ - ವೇದವೆಂಬ ಬ್ರಹ್ಮನಲ್ಲಿ ಅಂದರೆ ವೇದಶಾಸ್ತ್ರದಲ್ಲಿ, ನಿಷ್ಣಾತಃ - ಶ್ರದ್ಧೆ ಇರುವವನು ಅಂದರೆ ಪರಿಶ್ರಮವಿರುವವನು ಅಂದರೆ ಅರ್ಥವತ್ತಾಗಿ ಸರಿಯಾಗಿ ತಿಳಿದವನು, "ಪರಂಬ್ರಹ್ಮಾಧಿಗಚ್ಛತಿ"—ಪರಬ್ರಹ್ಮನನ್ನು ಹೊಂದುವನು ಎಂದೂ ಹೇಳಿರುವ ಹಾಗೆ, ಇವುಗಳಿಗೆ ಶಬ್ದವೇ ಪ್ರಮಾಣವು. (ಶಾಸನಾತ್ ಶಾಸ್ತ್ರಂ ಅಂದರೆ ವಿಧಿಸುವದರಿಂದ, ಇದನ್ನು ಮಾಡತಕ್ಕದ್ದು ಇವನ್ನು ಮಾಡಕೂಡದು ಎಂದು ವಿಧಿನಿಷೇಧವಾಕ್ಯಗಳುಳ್ಳದ್ದರಿಂದ, ಶಾಸ್ತ್ರವು. ಶಾಸ್ತ್ರಗಳಲ್ಲಿ ಪರಮುಗ್ರಾಹ್ಯವು ವೇದಗಳೂ ಮತ್ತು ಉಪನಿಷತ್ತುಗಳು. ಶ್ರುತಿ ಎಂಬ ಶಬ್ದದಲ್ಲಿ ಇವು ಸೇರಿದವು. ಪರಬ್ರಹ್ಮಸ್ವರೂಪ, ಪರಬ್ರಹ್ಮ ಪ್ರಾಪ್ತಿ ಮುಂತಾದುವುಗಳನ್ನು ತಿಳಿಯಬೇಕಾದರೆ ಪ್ರತ್ಯಕ್ಷವೂ ಪ್ರಯೋಜನವಿಲ್ಲವು. ಮತ್ತು ತಾರ್ಕಿಕನ ಅನುಮಾನ ಪ್ರಮಾಣಗಳೂ ವಾದವೂ

ಅನ್ವಿಡತ್ತಿಲ್ (1) "ಅನಂತಪಾರಂ ಬಹುವೇದಿತವ್ಯ ಮಲ್ಪಶ್ಚ ಕಾಲೋಬಹವಶ್ಚವಿಘ್ನಾಃ । ಯತ್ಸಾರಭೂತಂ ತದುಪಾದದೀತ ಹಂಸೋಯಥಾಕ್ಷೀರ ಮಿವಾಂಬು ಮಿಶ್ರಂ"॥ ಎನ್ನಿರ ಶ್ಲೋಕತ್ತಿಲ್ "ಸಾರಭೂತ" ಮೆನ್ನಿರಪದತ್ತಾಲೆ ಪ್ರತಿಪನ್ನ ಮಾನ ನಿರುಪಾಧಿಕ ಸಾರತ್ತೈ ವಿಷಯೀಕರಿಕ್ಕಿರ ಸಾರತಮ ಶಬ್ದಮುಪಾದೇಯಂ.

ಕೂಡ ಪ್ರಯೋಜನಕಾರಿಯಲ್ಲವು, "ತರ್ಕಾಪ್ರತಿಷ್ಠಾನಾದಪಿ" ಎಂಬ ಸೂತ್ರ ಪ್ರಕಾರ, ಭಾಷ್ಯದಲ್ಲಿ "ತರ್ಕಸ್ಯ ಅಪ್ರತಿಷ್ಠಿತತ್ವಾದಪಿ ಶ್ರುತಿ ಮೂಲೋ ಸಮಾಶ್ರಯಣೀಯಃ" ಎಂದು ಯತಿರಾಜರು ಅಪ್ಪಣೆ ಕೊಡಿಸಿರುತ್ತಾರೆ. ಹಾಗೆಯೇ "ಶಬ್ದಬ್ರಹ್ಮಾಗಮ ಮಯಂ ಪರಂ ಬ್ರಹ್ಮ ವಿವೇಕಜಂ" ಎಂದು ಹೇಳಿರುವದರಿಂದ ಶಬ್ದಬ್ರಹ್ಮವು ವೇದ ಮಯವಾದುದೆಂದು ಸ್ಥಾಪಿತವಾಗಿರುತ್ತದೆ. ಮುಖ್ಯವಾಗಿ **ಪ್ರಮಾಣ** ವ್ಯಾವುದು ಎಂದರೆ ಆಪ್ತನಲ್ಲದೆ ಇರುವನಿಂದ ಹೇಳಲ್ಪಡದೇ ಇರುವ ಯಥಾರ್ಥವಾದ ತಿಳುವಳಿಕೆಯೇ. ಈ ಸಂದರ್ಭದಲ್ಲಿ ನಿಷ್ಕರ್ಷೆಯಾದ ವೇದಾರ್ಥವೇ ಮುಖ್ಯ ಪ್ರಮಾಣವೆಂದು ತಿಳಿಯತಕ್ಕದ್ದು.

ಹೀಗೆ ವೇದವೆಲ್ಲಾ ಪ್ರಮಾಣವಾದರೆ ಕೊಂಚ ಭಾಗಗಳನ್ನು ನಿರಾಕರಿಸಿ "ಸಾರಂಸಾರತರಂ ತ್ಯಜೇತ್ । ಭಜೇತ್ ಸಾರತಮಂ" ಎಂದು ಒಂದು ಭಾಗಕ್ಕೆಮಾತ್ರ ತುಂಬಾ ಪ್ರಾಶಸ್ತ್ಯ ಹೇಗೆ ಎಂಬು ವದನ್ನು ಉಪಪಾದನೆ ಮಾಡುತ್ತಾರೆ).

ಶ್ರುತಿಯಲ್ಲೂ ಸಾರತಮವಾದುದೇ ಗ್ರಾಹ್ಯವು.

ಶಾಸ್ತ್ರವಾದರೋ **ಅನಂತಪಾರಂ** - ಅಪಾರವಾದುದಾಗಿಯೂ, **ಬಹು** - ಬಹುವಿಷಯ, **ವೇದಿತವ್ಯಂ** - ತಿಳಿಯತಕ್ಕದ್ದಾಗಿಯೂ ಇದೆ.

(1) ಅಂತಃ ಅಂದರೆ ನಿಶ್ಚಯವು; ಅನಂತಪಾರಂ ಎಂದರೆ - ಅದರ ಪಾರವೆಲ್ಲಿದೆ ಎಂದು ನಿಶ್ಚಯಿಸಲು ಅಸಾಧ್ಯವಾದುದು ಎಂಬ ಭಾವವು.

ಉತ್ತರಗೀತೆ 3. 1.

ಬಾಹ್ಯಕುದೃಷ್ಟಿ ಶಾಸ್ತ್ರಙ್ಗಳ್ ಅತ್ಯನ್ತಸಾರಙ್ಗಳಾಕ್ಕೈಯಾ ಲೇಯನುಪಾದೇಯಙ್ಗಳ್ ॥

ಅಲ್ಪಶ್ಚಕಾಲಃ" - ಕಾಲವಾದರೋ ತುಂಬಾ ಅಲ್ಪವು. (ಅದು ಮರಣಾವಧಿಯಾಗಿಯೂ, ಆಮರಣಾವಧಿ ಕಾಲದಲ್ಲೂ ಹೆಚ್ಚು ಕಾಲವು ಬಾಲ್ಯಾವಸ್ಥೆ ನಿದ್ರೆ, ಆಹಾರ, ವಿಹಾರ, ಧನಾರ್ಜನೆಗಳಲ್ಲೂ ಕಳೆದು ಎಲ್ಲೋ ಅಲ್ಪಸ್ವಲ್ಪಕಾಲ ಉಳಿದೀತು ಎಂಬ ಭಾವವು). **ಬಹವಶ್ಚ ವಿಘ್ನಾಃ** - ಶ್ರೇಯಾಂಸಿ ಬಹುವಿಘ್ನಾನಿ ಎನ್ನುವ ಹಾಗೆ ಪ್ರತಿಬಂಧಕಗಳಾದರೋ ಅನೇಕವಾಗಿವೆ. (ಆದುದರಿಂದ ಎಲ್ಲಾ ಶಾಸ್ತ್ರಗಳನ್ನು ಗ್ರಹಿಸಲು ಸಮಯಾನುಕೂಲಗಳಿಲ್ಲದಿದ್ದರೂ) ಶಾಸ್ತ್ರದಲ್ಲಿ ಯಾವುದು ಮಹತ್ತಾದ ಸಾರವುಳ್ಳದ್ದೋ ಅದನ್ನು ನಾವು ಪರಿಗ್ರಹಿಸತಕ್ಕದ್ದು. (ಇದಕ್ಕೆ ಒಂದು ಒಳ್ಳೇದೃಷ್ಟಾನ್ತವನ್ನು ಕೊಡುತ್ತಾರೆ.) ನೀರುಬೆರೆತ ಹಾಲಿನಿಂದ ಹಾಲನ್ನು ಹಂಸಪಕ್ಷಿಯು ಹೇಗೆ ಗ್ರಹಿಸುತ್ತದೆಯೋ ಹಾಗೆಯೇ ನಾವೂ ಶಾಸ್ತ್ರದಲ್ಲಿ ತುಂಬಾ ಸಾರವತ್ತಾದ ಭಾಗವನ್ನೇ ಗ್ರಹಿಸತಕ್ಕದ್ದು" ಎಂಬುವ ಶ್ಲೋಕದಲ್ಲಿ "ಸಾರಭೂತ"ವೆನ್ನುವ ಪದದಲ್ಲಿ ತೋರಿಬರುವ, ಏನೊಂದೂ ಚ್ಯುತಿಯಿಲ್ಲದೆ ವಿಶೇಷ ಸಾರವಾಗಿರುವುದನ್ನು ಬೋಧಿಸುವ, ಸಾರತಮ"ವೆಂಬ ಶಬ್ದವೇ ಆ ಸಂದರ್ಭದಲ್ಲಿ ಗ್ರಾಹ್ಯವಾದುದು. (ಇನ್ನು ಮುಂದೆ ಅಸಾರ, ಅಲ್ಪಸಾರ, ಸಾರತಮಾಂಶಗಳಾವುವೆಂಬುವದನ್ನು ನಿರೂಪಿಸುತ್ತಾರೆ).

ವೇದಪ್ರಮಾಣವೆಂದು ಒಪ್ಪದಿರುವ ವೇದಬಾಹ್ಯರ ಶಾಸ್ತ್ರಗಳೂ, ವೇದಗಳಿಗೆ ಅಪಾರ್ಥಗಳನ್ನು ಹೇಳುವ ಕುದೃಷ್ಟಿಗಳ ಶಾಸ್ತ್ರಗಳೂ ತುಂಬಾ ಅಸಾರವಾದವುಗಳಾಗಿರುವದರಿಂದ ನಮಗೆ ಗ್ರಾಹ್ಯವಲ್ಲವು.

(ಬಾಹ್ಯಶಾಸ್ತ್ರಗಳಲ್ಲಿ ೧೧ ಪ್ರಭೇದಗಳೂ, ಕುದೃಷ್ಟಿಶಾಸ್ತ್ರಗಳಲ್ಲಿ ೭ ಪ್ರಭೇದಗಳೂ ಒಟ್ಟು ಎಲ್ಲಾ ೧೭ ಮತಗಳು).

ಬಾಹ್ಯಶಾಸ್ತ್ರಗಳು:—

(೧) **ಲೋಕಾಯತ - (ಚಾರ್ವಾಕ)** ಇದು ಅಸುರಮೋಹನಾರ್ಥವಾಗಿ ಬೃಹಸ್ಪತ್ಯಾಚಾರ್ಯರವರು ಉಪಪಾದಿಸಿದ ಮತವು. ಪೃಥಿ

ವೀ ಅಪ್ಪು, ತೇಜಸ್ಸು, ವಾಯು, ಎಂಬ ನಾಲ್ಕು ಭೂತಗಳು ಸೇರುವದರಿಂದುಂಟಾಗುವ ಶರೀರದಲ್ಲಿ ಚೈತನ್ಯವೆಂಬುದು ಉತ್ಪನ್ನವಾಗುತ್ತದೆ. ಹೆಂಡದಿಂದ ಮದಶಕ್ತಿ ಹೇಗೆ ಉಂಟಾಗುತ್ತದೋ ಹಾಗೆ ಉತ್ಪನ್ನವಾಗುತ್ತದೆ. ಆದುದರಿಂದ ಇವರಿಗೆ ದೇಹವೇ ಆತ್ಮಾ ಎಂಬ ಭಾವವು. ಆತನಿಗುಂಟಾಗುವ ಸುಖದುಃಖಗಳೇ ಸ್ವರ್ಗ ನರಕಗಳು. ಸುಖದುಃಖಗಳಿಗೆ ಕಾರಣವೇನೂ ಇಲ್ಲವು. ಸ್ವಭಾವವಾಗಿ ಉಂಟಾಗುತ್ತವೆ. ಆದುದರಿಂದ

ಯಾವಜ್ಜೀವಂ ಸುಖಂಜೀವೇ ನ್ನಾಸ್ತಿಮೃತ್ಯೋರಗೋಚರಃ ।
ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ ॥

ಎಂಬುವದು ಇವರ ಸಿದ್ಧಾಂತವು. ಜೀವಮಾನವಿರುವತನಕವೂ ಸುಖವಾಗೋಣ ಹೇಗೋ ಹಾಗೆ ಜೀವಿಸತಕ್ಕದ್ದು. ಏತಕ್ಕೆಂದರೆ ಯಾವತ್ತಾದರೂ ಬಂದುದಿನ ಸಾಯಲೇ ಬೇಕು. ಮೃತ್ಯುವಿಗೆ ಗೋಚರವಾಗದೇ ಇರುವ ಚೇತನವಿಲ್ಲವು. ದೇಹವು ಸುಟ್ಟು ಬೂದಿಯಾದನಂತರ ಪುನರ್ಜನ್ಮವೆಲ್ಲಿಯದು? ಈ ನಾಲ್ಕು ಭೂತಗಳ ಅಂಶವು ಕಮ್ಮಿಯಾಗುತ್ತಾ ವಾರ್ಧಕ ದೆಶೆಯಲ್ಲಿ ಯಾವುದಾದರೂ ನಷ್ಟವಾದರೆ ಚೈತನ್ಯವು ನಾಶವಾಗುತ್ತದೆ. ಅದೇ ಮರಣವು. ಇವರಿಗೆ ಪ್ರತ್ಯಕ್ಷವೇ ಪ್ರಮಾಣವಾದುದರಿಂದ, ಪರಮಾತ್ಮ ಜೀವಾತ್ಮ, ವೈಕುಂಠಲೋಕ, ಸ್ವರ್ಗ ನರಕ ಮೊದಲಾದ ಪ್ರತ್ಯಕ್ಷಗೋಚರವಲ್ಲದೇ ಇರುವವುಗಳನ್ನು ಇವರು ನಂಬುವುದಿಲ್ಲವು. ಲೋಕಾಯಿತರೆಂದರೆ ಲೋಕಗಳಲ್ಲಿ ವಿಸ್ತೃತವಾದದ್ದನ್ನು ಮಾತ್ರ ಅಂಗೀಕರಿಸುವರೆಂಬರ್ಥವು. ಮೋಕ್ಷವೆಂದರೆ ಮರಣವೇ. ಅಂತಹ ಮೋಕ್ಷಕ್ಕಾಗಿ ಶಾಸ್ತ್ರಜ್ಞಾನವೂ ಬೇಕಾಗಿಲ್ಲವು. ಯಾರೂ ಏನೂ ಪ್ರಯತ್ನಮಾಡುವ ಅವಶ್ಯಕತೆಯೂ ಇರುವುದಿಲ್ಲವು. ಇದೀಗ ಚಾರ್ವಾಕರ ಅಭಿಪ್ರಾಯವು.

೨. **ಜೈನರಮತವು.**—ಸಮಸ್ತ ವಸ್ತುಗಳೂ ಸಪ್ತಭಂಗಿಯಾಗಿ ಏಳು ವಿಧವಾಗಿ ತೋರುತ್ತವೆಂದು ಇವರು ಹೇಳುತ್ತಾರೆ.

(1) ಸ್ಯಾದಸ್ತಿ (2) ಸ್ಯಾನ್ನಾಸ್ತಿ (3) ಸ್ಯಾದಸ್ತಿನಾಸ್ತಿ (4) ಸ್ಯಾದವಕ್ತವ್ಯಂ (5) ಸ್ಯಾದಸ್ತಿಚಾವಕ್ತವ್ಯಂ (6) ಸ್ಯಾನ್ನಾಸ್ತಿ ಚಾವಕ್ತವ್ಯಂ (7) ಸ್ಯಾದಸ್ತಿಚ ನಾಸ್ತಿ ಚಾವಕ್ತವ್ಯಂ ಎಂಬದಾಗಿ ಏಳು. ಇರುವಿಕೆಯನ್ನು ಹೇಳುವಾಗ "ಸ್ಯಾದಸ್ತಿ" ಹೇಳತಕ್ಕದ್ದು. ಇಲ್ಲವೆಂಬುವದನ್ನು ಹೇಳುವಾಗ "ಸ್ಯಾನ್ನಾಸ್ತಿ" ಎಂದು ಹೇಳತಕ್ಕದ್ದು. ಪೂರ್ವಕ್ಷಣದಲ್ಲಿದ್ದು ಉತ್ತರಕ್ಷಣದಲ್ಲಿಲ್ಲದ್ದು ಎಂದು ವಿವೇಚನೆ ಮಾಡುವ ಸಂದರ್ಭದಲ್ಲಿ "ಸ್ಯಾದಸ್ತಿ ಸ್ಯಾನ್ನಾಸ್ತಿ" ಎಂದು ಹೇಳತಕ್ಕದ್ದು. ಉಂಟೆಂಬುವದು ಇಲ್ಲವೆಂಬುವದನ್ನೂ, ಇಲ್ಲವೆಂಬುದು ಉಂಟೆಂಬುವದನ್ನೂ ಸೂಚಿಸುತ್ತವೆ ಎಂದು ಹೇಳುತ್ತಾರೆ. ಒಂದೇ ಕ್ಷಣದಲ್ಲೇ ಇದ್ದೂ ಇಲ್ಲದೆ ಇರುವ ಹಾಗೆ ತೋರಬಹುದು. ಆ ಸಂದರ್ಭದಲ್ಲಿ "ಅವಕ್ತವ್ಯ"ವೆಂದು ಹೇಳತಕ್ಕದ್ದು. ಪೂರ್ವಕ್ಷಣದಲ್ಲಿ ಅಸ್ತಿತ್ವವಿದ್ದು ಉತ್ತರಕ್ಷಣದಲ್ಲಿ ಅವಕ್ತವ್ಯಸ್ಥಿತಿಯಾದರೆ "ಸ್ಯಾದಸ್ತಿಚಾವಕ್ತವ್ಯಂ" ಎಂದು ಹೇಳತಕ್ಕದ್ದು. ಹೀಗೆ ಏಳುಪ್ರಕಾರದಿಂದ ಜಗತ್ತು ನಿತ್ಯಾನಿತ್ಯವಾಗಿಯೂ ಭಿನ್ನಾಭಿನ್ನವಾಗಿಯೂ, ಸತ್ಯಾಸತ್ಯವಾಗಿಯೂ ಇರುತ್ತದೆಯೆಂದು ಹೇಳುವರು. ಜೀವರುಗಳಿಗೆ ಕರ್ಮಾನುಗುಣವಾಗಿ ಶರೀರಪ್ರಾಪ್ತಿ ಎಂದೂ, ಆ ಜೀವನ ಪರಮಾಣವು ಶರೀರದಷ್ಟು ದೊಡ್ಡದೆಂದೂ, ಜೀವನಿಗೆ ಸಂಕೋಚ ವಿಕಾಸಗಳುಂಟೆಂದೂ, ಇರುವೆಯ ಶರೀರದಲ್ಲಿ ಅಲ್ಪವಾಗಿ ಸಂಕುಚಿತವಾದುದಾಗಿಯೂ, ಆನೆಯ ಶರೀರದಲ್ಲಿ ದೊಡ್ಡದಾಗಿ ವಿಕಾಸವಾಗಿಯೂ ಜೀವಿಸಿರುತ್ತಾನೆಂದೂ ಹೇಳುತ್ತಾರೆ. ಇವರ ಮತಪ್ರಕಾರ ಪ್ರಾಣಹಿಂಸೆ ಕೂಡದು. ಇದಕ್ಕಾಗಿ ರಾತ್ರಿಯ ಕತ್ತಲಲ್ಲಿ ಎಲ್ಲಿ ಪ್ರಾಣಹಿಂಸೆಯಾದೀತೋ ಎಂಬ ಭಯದಿಂದ ಸಾಯಂಕಾಲದಲ್ಲೇ ರಾತ್ರಿ ಊಟವನ್ನು ತೀರಿಸಿಕೊಳ್ಳುತ್ತಾರೆ. ವಿರಕ್ತಿಮಾರ್ಗದಲ್ಲಿರುವವರು ಬಟ್ಟೆ ಕೂಡ ಧರಿಸದೆ ನಗ್ನರಾಗಿರತಕ್ಕದ್ದು; ಇಂದ್ರಿಯುಗಳನ್ನು ನಿಗ್ರಹಿಸಬೇಕು; ಊಟವನ್ನು ಕೈಯಲ್ಲೇ ಇಟ್ಟುಕೊಂಡು ಊಟಮಾಡತಕ್ಕದ್ದು; ಮೌನವ್ರತದಲ್ಲಿರಬೇಕು; ಕೂದಲುಗಳನ್ನು ಚಿವುಟದಿಂದ ಕೀಳಿಸಬೇಕು. ಹೀಗೆ ವಿರಕ್ತಿಮಾರ್ಗದಲ್ಲಿರುವದರಿಂದಲೂ, ಆತ್ಮಜ್ಞಾನದಿಂದಲೂ ಮೋಕ್ಷ ಉಂಟಾ

ಗುತ್ತದೆ. ಮೋಕ್ಷವೆಂದರೆ ಪ್ರಕೃತಿಸಂಬಂಧವು ತೊಲಗಿ ಊರ್ಧ್ವ ಗತಿಯನ್ನು ಹೊಂದುವದು.

ಬೌದ್ಧರಮತವು. ಇವರಲ್ಲಿ ನಾಲ್ಕು ಪ್ರಭೇದಗಳುಂಟು. (1) ವೈಭಾಷಿಕ (2) ಸೌತ್ರಾಂತಿಕ (3) ಯೋಗಾಚಾರ (4) ಮಾಧ್ಯಮಿಕ.

೩. **ವೈಭಾಷಿಕರಮತವು.**—ಪೃಥಿವ್ಯಪ್ತೇಜೋ ವಾಯುರೂಪಗಳಾದ ಪರಮಾಣುಗಳ ಸಮೂಹವು ಸೇರಿ ಜಗತ್ತಿನ ಎಲ್ಲಾ ಬಾಹ್ಯವಸ್ತುಗಳುಂಟಾಗಿರುತ್ತವೆ. ಅವುಗಳು ಪ್ರತ್ಯಕ್ಷ ಪ್ರಮಾಣದಿಂದಲೂ ಅನುಮಾನ ಪ್ರಮಾಣದಿಂದಲೂ ಸಿದ್ಧವಾದವುಗಳು. ಬಾಹ್ಯವಸ್ತುಗಳುಂಟೆಂದು ಇವರು ಹೇಳುತ್ತಾರೆ. ಈ ಪೃಥಿವೀ ಮೊದಲಾದ ಪರಮಾಣುಗಳಿಂದಲೇ ಶರೀರಗಳೂ, ಇಂದ್ರಿಯಗಳೂ, ವಿಷಯಗಳೂ ಎಲ್ಲವೂ ಉಂಟಾಗುವವು. ಈ ಶರೀರದಲ್ಲಿರುವ ಗ್ರಹಿಸುವ ಶಕ್ತಿ ರೂಪವಾದ ಜ್ಞಾನ ಸನ್ತಾನವೇ ಆತ್ಮಾ ಎಂಬುವದು. ಬೇರೆ ಆತ್ಮಾ ಎಂಬುವದು ಯಾವುದೂ ಇಲ್ಲವು. ಆ ಜ್ಞಾನದಿಂದಲೇ ಸಮಸ್ತ ಲೌಕಿಕ ವ್ಯವಹಾರ ಮೊದಲಾದುವುಗಳು ಉಂಟಾಗುತ್ತವೆ. ಈ ವಸ್ತುಗಳೂ, ಅವುಗಳ ಜ್ಞಾನವೂ ಸಹ ಕ್ಷಣಿಕವು. ಹಾಗೆ ಕ್ಷಣಿಕವೆಂಬ ಜ್ಞಾನವಿಲ್ಲದೆ ಜಗತ್ತಿನಲ್ಲಿ ಸ್ಥಿರತ್ವ ಬುದ್ಧಿಯೇ ಸಂಸಾರವು. ಕ್ಷಣಿಕ ಬುದ್ಧಿಯೇ ಮೋಕ್ಷವು. ಹಾಗೆ ಕ್ಷಣಿಕವೆಂಬ ಜ್ಞಾನವುಂಟಾಗುವದರಿಂದ ಈತನಿಗೆ ಪಾಪಭೀರತ್ವವು ಪ್ರಾಪ್ತವಾಗುತ್ತದೆಂದು ಹೇಳುತ್ತಾರೆ.

೪. **ಸೌತ್ರಾನ್ತಿಕರ ಮತವು.**— ವೈಭಾಷಿಕರ ಮತಕ್ಕೂ ಇದಕ್ಕೂ ತುಂಬಾ ಭೇದವಿಲ್ಲವು. ವೈಭಾಷಿಕನ ಹಾಗೆಯೇ ಎಲ್ಲವು. ಆದರೆ ಜಗತ್ತಿನ ವಸ್ತುಗಳು ಪ್ರತ್ಯಕ್ಷಸಿದ್ಧವಲ್ಲವೆಂದೂ, ಅನುಮಾನ ಪ್ರಮಾಣ ಸಿದ್ಧವಾದುದೆಂದೂ ಹೇಳುತ್ತಾನೆ. ಹೇಗೆಂದರೆ ಜ್ಞಾನ ಉಂಟಾಗಲು ಕಾರಣವ್ಯಾವದೋ ಅದು ತಾನೇ ಜ್ಞಾನಕ್ಕೆ ವಿಷಯವಾಗತಕ್ಕದ್ದು. ಆದುದರಿಂದ ಘಟ ಜ್ಞಾನ ಉಂಟಾಗುವುದಕ್ಕೆ ಅದು

ಅದರ ಆಕಾರವನ್ನು ಜ್ಞಾನದಲ್ಲಿ ಸಮರ್ಪಿಸಿ, ತತ್‌ಕ್ಷಣವೇ ನಾಶವಾಗುವುದರಿಂದ ಅದು ಬದಲಾಯಿಸಿರುವಾಗಲೂ ಘಟ ಜ್ಞಾನವಿರುವದರಿಂದ ಪ್ರತ್ಯಕ್ಷವು ಜ್ಞಾನಕ್ಕೆ ಕಾರಣವಲ್ಲವು. ಅನುಮಾನವೇ ಕಾರಣವು. ಪದಾರ್ಥಗಳೂ, ಅವುಗಳ ಜ್ಞಾನವೂ ಸಹ ಈತನಿಗೆ ಕ್ಷಣಿಕವು. ಆದರೆ ಜ್ಞಾನವು ಸ್ವಲ್ಪಕಾಲವಿರುತ್ತದಲ್ಲಾ ಎಂದರೆ ಅದು ಜ್ಞಾನಪರಂಪರೆಯು. ವಿಷಯಗಳಲ್ಲಿ ವಿಚಿತ್ರತೆ ಇರುವದರಿಂದ ಅದೇ ಪ್ರಕಾರ ಜ್ಞಾನದಲ್ಲೂ ವಿಚಿತ್ರತೆ ಎಂದು ಅಭಿಪ್ರಾಯವು.

೫. **ಯೋಗಾಚಾರರಮತವು.**—ಈ ಮತದ ಪ್ರಕಾರ ಜ್ಞಾನ ಒಂದೇ ಸತ್ಯವಾದುದು. ಮಿಕ್ಕವುಗಳೆಲ್ಲಾ ಭ್ರಮದಿಂದುಂಟಾದವು. ಜ್ಞಾತಾವಾದ ಆತ್ಮನೆಂಬುವದೂ, ಜ್ಞೇಯಗಳಾದ ಸಮಸ್ತ ವಸ್ತುಗಳೂ ಜಗತ್ತೂ ಎಲ್ಲವೂ ಭ್ರಮಸಿದ್ಧವಾದವು. ವಸ್ತುವಿಗನುಸಾರವಾಗಿ ಜ್ಞಾನವೆಂದು, ವಸ್ತುವೈಚಿತ್ರ್ಯದಿಂದ ಜ್ಞಾನವೈಚಿತ್ರ್ಯವೆಂಬುವ ಸೌತ್ರಾನ್ತಿಕನ ಸಿದ್ಧಾಂತವನ್ನು ಈತನು ಅಂಗೀಕರಿಸುವುದಿಲ್ಲವು. ಜ್ಞಾನಕ್ಕೆ ವಿಚಿತ್ರತೆ ಎಂಬುವದು ಸ್ವತಃ ಉಂಟಾದುದು ಎಂದು ಹೇಳುತ್ತಾನೆ. ಏತರಿಂದೆಂದರೆ, ವಾಸನಾ ಮೂಲಕವಾಗಿ ಉಂಟಾಗುತ್ತದೆಂದು ಅಭಿಪ್ರಾಯವು. ವಾಸನಾ ಎಂದರೆ ವಿಲಕ್ಷಣವಾದ ಜ್ಞಾನವನ್ನುಂಟು ಮಾಡುವ ಪ್ರವಾಹವು. ಹೇಗೆಂದರೆ:-ಪದಾರ್ಥಗಳೆಲ್ಲಾ ಕ್ಷಣಿಕವು. ಪ್ರತಿಕ್ಷಣದಲ್ಲೂ ಭಿನ್ನಭಿನ್ನವಾಗಿ ಆಗುವವು. ಹೀಗಿರುವಲ್ಲಿ, ಒಂದು ಘಟವನ್ನು ನೋಡುವಾಗ ಘಟಜ್ಞಾನವೂ, ಅದರಿಂದ ಕಪಾಲಗಳ (ಘಟದ ಎರಡು ಭಾಗಗಳು) ಜ್ಞಾನವೂ, ಅದರಿಂದ ಪೂರ್ವಘಟ ಜ್ಞಾನವೂ ಹೀಗೆ ಸನ್ತತಿರೂಪವಾದ ಜ್ಞಾನಕ್ಕೆ ವಾಸನಾವೆಂದು ಹೆಸರು. ಆದುದರಿಂದ ಜ್ಞಾನವೇ ಆಕಾರ ಉಳ್ಳದ್ದು. ಹಾಗೆಯೇ ತಿಳಿಯತಕ್ಕದ್ದು. ಏಕೆಂದರೆ ಅಂತಹ ಆಕಾರ ಉಳ್ಳ ಜ್ಞಾನಕ್ಕೇ ವಿಷಯ ಪ್ರಕಾಶತ್ವ ಉಂಟು. ಆಕಾರವಿಲ್ಲದೆ ನಿರಾಕಾರವಾದರೆ ಪ್ರಕಾಶ ಶಕ್ತಿಯೇ ಇಲ್ಲವು. ಆದುದರಿಂದ ಹೊರಗಿನ ವಸ್ತುಗಳ ವಿಚಿತ್ರತೆ ಈ ಜ್ಞಾನಕ್ಕೇನೂ ಸಾಧಕವಲ್ಲವು. ಹಾಗಾದರೆ ಸಾಸಿವೆಕಾಳು ಚಿಕ್ಕ

ದೆಂದೂ ಪರ್ವತ ದೊಡ್ಡದೆಂದೂ ಜ್ಞಾನ ಉಂಟಾಗಲು ಕಾರಣ ಹೇಗೆ ಎಂಬಾಕ್ಷೇಪಕ್ಕೆ ಸಮಾಧಾನ ಹೇಳುವರೇನೆಂದರೆ :-ವಸ್ತುಗಳಿಗೆ ವ್ಯವಹಾರಯೋಗ್ಯತೆ ಎಂಬುವದು ಜ್ಞಾನಪ್ರಕಾಶಾಧೀನವೆಂದು ಒಪ್ಪಿಕೊಳ್ಳತಕ್ಕದ್ದು. ಆ ಜ್ಞಾನ ಪ್ರಕಾಶವಾಗಬೇಕಾದರೆ ಅದು ಸಾಕಾರವಾಗಿಯೇ ಇರತಕ್ಕದ್ದೆಂದು ಭಾವಿಸತಕ್ಕದ್ದು. ಆದುದರಿಂದ ಜ್ಞಾನವು ವಸ್ತುವಿಗಿಂತ ಬೇರೆ ಎಂದು ಹೇಳಲಾಗುವದಿಲ್ಲವು. ಆದರೆ ಒಂದು ಗಡಿಗೆ ಎಂದೂ, ಇನ್ನೊಂದು ಬಟ್ಟೆ ಎಂದೂ ಜ್ಞಾನ ಉಂಟಾಗಲು ಆಯಾ ವಸ್ತು ಸಂಬಂಧ ಜ್ಞಾನ ಬೇಡವೋ ಎಂದು ಆಕ್ಷೇಪಿಸಿದರೆ, ಆಯಾ ವಸ್ತುಗಳ ಆಕಾರವು ಜ್ಞಾನದಲ್ಲೇ ಉಂಟೆಂದೂ, ಅದಕ್ಕಾಗಿ ಆಯಾ ಬಾಹ್ಯವಸ್ತುಗಳು ಯಥಾರ್ಥವಾಗಿವೆ ಎಂದು ಕಲ್ಪಿಸುವುದು ನಿಷ್ಪ್ರಯೋಜನವಾದುದೆಂದೂ ಹೇಳುವರು. ಆದುದರಿಂದ ಜ್ಞಾನ ಒಂದೇ ನಿತ್ಯವೆಂದೂ ಮಿಕ್ಕವುಗಳೆಲ್ಲಾ ಭ್ರಮದಿಂದ ಹಾಗೆ ತೋರುವವೆಂದೂ ಹೇಳುವರು.

೬. **ಮಾಧ್ಯಮಿಕರಮತವು.**— ಇದೇ ಬೌದ್ಧರ ಮುಖ್ಯಮತವು. ಯೋಗಾಚಾರನು ಜ್ಞಾನ ಒಂದೊಂಟು, ಮಿಕ್ಕಿದ್ದೆಲ್ಲಾ ಶೂನ್ಯವೆಂದು ಭಾವಿಸಿದನು. ಮಾಧ್ಯಮಿಕನು ಸರ್ವವೂ ಶೂನ್ಯವು. ಜ್ಞಾನವೂಕೂಡ ಶೂನ್ಯವೆಂದು ಭಾವಿಸಿದನು. ಈತನ ಅಭಿಪ್ರಾಯ ಪ್ರಕಾರ ಜ್ಞಾತಾ, ಜ್ಞಾನ, ಜ್ಞೇಯಗಳಾದ ಎಲ್ಲವೂ ಭ್ರಮವು. ಆದುದರಿಂದ ಎಲ್ಲವೂ ಆತನಿಗೆ ಶೂನ್ಯವು. ಮೇಲಿನ ಮೂರು ಪ್ರಭೇದಗಳು ಸತ್ಯವಲ್ಲದೇ ಇದ್ದರೂ ಶಿಷ್ಯರುಗಳು ಸುಲಭವಾಗಿ ಕ್ರಮೇಣ ಗ್ರಹಿಸುವದಕ್ಕನುಗುಣವಾಗಿ ಕ್ಷಣಿಕತ್ವಾದಿಗಳು ಹೇಳಲ್ಪಟ್ಟವೆಂದೂ, ನಾಲ್ಕುಕೋಟಿಗಳಾದ ಸತ್ತೂ, ಅಸತ್ತೂ, ಸದಸತ್ತೂ, ಅನುಭಯಾತ್ಮಿಕಗಳು ಯಾವುವೂ ತತ್ವವಲ್ಲವೆಂದು ಹೇಳುವರು. ಹೀಗೆ ಶೂನ್ಯಭಾವವೆಂದು ತಿಳಿಯುವುದೇ ಮೋಕ್ಷವು. ಸದ್ವಾದದಲ್ಲಿ ಮೊದಲು ಇದ್ದುದೇ ಉತ್ಪನ್ನವಾಯಿತೆಂದರೆ, ಮೊದಲು ಇದ್ದುದಕ್ಕೆ ಪುನಃ ಉತ್ಪತ್ತಿಯು ನಿಷ್ಪ್ರಯೋಜನವಾದುದಲ್ಲವೇ ? ಅಸತ್ತಾದುದಾದರೆ

ಉತ್ಪತ್ತಿಗೇನೇ ಮಾರ್ಗವಿಲ್ಲವು. "ಸದಸತ್" ಎಂದು ಹೇಳದುದಾದರೆ ಅದೂ ಕೂಡವುದಿಲ್ಲವು. ಸತ್ತಾಗಿರುವದು ಅಸತ್ತು ಹೇಗಾದೀತು? ಆದುದರಿಂದ ಸತ್ತೂ ಅಸತ್ತೂ ಎರಡೂ ಸಹ ಹೇಗೆ ಸಂಭವಿಸೀತು? ಅಸತ್ತನ್ನು ಬಿಟ್ಟು ಸತ್ತಾಗುತ್ತೇಂದರೆ, ಯಾವಾಗ ಅಸತ್ತಾಯಿತೊ, ಆಗ ಸ್ವರೂಪವೇ ನಾಶವಾಯಿತು. ಆದುದರಿಂದ ಪುನಃ ಹೇಗೆ ಸತ್ತಾದೀತು? ಹೀಗೆ ಇನ್ನೂ ಇತರ ವಿಕಲ್ಪಗಳಿಗೂ ದೂಷಣ ಹೇಳಿ, ಜನ್ಮನಾಶಾದಿಗಳೆಲ್ಲಾ ತೋರುವುದು ಭ್ರಾಂತಿಮೂಲವೆಂದು ಹೇಳುತ್ತಾರೆ. ಯಾವಾಗ ಜನ್ಮನಾಶಾದಿಗಳೆಲ್ಲಾ ಭ್ರಾಂತಿಮೂಲವಾದವೋ ಆಗ ಆ ವಸ್ತುಗಳೆಲ್ಲಾ ಮೊಲದ ಕೊಂಬಿನೋಪಾದಿಯಲ್ಲಿ ಶೂನ್ಯವಾದವೆಂದು ಸಾಧಿಸುತ್ತಾರೆ. ಹೀಗೆ ಶೂನ್ಯವೆಂದು ತಿಳಿಯುವದು ಬಹು ಸುಲಭವಾಗಿ, ಇತರ ಪ್ರಮಾಣಗಳ ಸಹಾಯ ಯಾವುದೂ ಬೇಕಾಗಿರುವುದಿಲ್ಲವಾದುದರಿಂದ ಸರ್ವವೂ ಶೂನ್ಯವೆಂದು ತಿಳಿಯುವುದೇ ಮೋಕ್ಷವೆಂಬುವದು ಈ ಬೌದ್ಧರ ಮತವು.

೭ ಮತ್ತು ೮. **ತಾರ್ಕಿಕರು.**—(ನ್ಯಾಯಶಾಸ್ತ್ರರೀತ್ಯಾ ವಾದ ಮಾಡುವವರು.) ಎರಡುವಿಧ ;—(1) **ನೈಯಾಯಿಕರು** (2) **ವೈಶೇಷಿಕರು.**

ನೈಯಾಯಿಕರ ಮತ್ತು ವೈಶೇಷಿಕರ ಮತವು.—ನೈಯಾಯಿಕಮತವು ಗೌತಮರಿಂದ ಸ್ಥಾಪಿಸಲ್ಪಟ್ಟಿತು. ಇವರಿಗೆ ಪಾದದಲ್ಲಿ ಕಣ್ಣು ಇದ್ದುದರಿಂದ ಅಕ್ಷಪಾದರೆಂದು ಹೆಸರುಂಟು. ವೈಶೇಷಿಕ ಮತಸ್ಥಾಪಕರು ಕಣಾದರು. ಇವರು ಸಾಯುವಾಗಲೂ ಕೂಡ "ಪೀಲವಃ ಪೀಲವಃ ಪೀಲವಃ" ಎಂದರೆ ಪರಮಾಣುಗಳೇ ಜಗತ್ತಿಗೆ ಕಾರಣವೆಂಬಭಿಪ್ರಾಯದಿಂದ, **ಪೀಲವಃ** - ಪರಮಾಣುಗಳು ಎಂದು ಮೂರುಸಲ ಹೇಳಿ ದೇಹತ್ಯಾಗ ಮಾಡಿದರೇ ವಿನಾ ಪರಮಾತ್ಮನ ಹೆಸರನ್ನುಚ್ಚರಿಸಲಿಲ್ಲವು. ಈ ಇಬ್ಬರೂ ಪೃಥವ್ಯಪ್ತೇಜೋವಾಯುರೂಪಗಳಾದ ನಾಲ್ಕುವಿಧ ಪರಮಾಣುಗಳೇ ಜಗತ್ತಿಗೆ ಉಪಾದಾನ

ಕಾರಣವೆಂದು ಹೇಳುವರು. ಅನುಮಾನ ಪ್ರಮಾಣದಿಂದ ಊಹಿಸ ಲ್ಪಡುವ ಪರಮೇಶ್ವರನೇ ನಿಮಿತ್ತ ಕಾರಣವು. ಇವೆಲ್ಲಾ ತಪ್ಪು ಅಭಿಪ್ರಾಯಗಳು. ಆದರೆ ಇವರು ನಾವು ಹೇಳುವಹಾಗೆ ಜೀವ ಪರ ಮಾತ್ಮ ಭೇದವನ್ನು ಹೇಳುತ್ತಾರೆ. ಜೀವನಿಗೆ ಅಣುತ್ವ ಹೇಳದೆ ಪರಮಾತ್ಮನಹಾಗೆ ವಿಭುತ್ವವನ್ನು ಹೇಳುತ್ತಾರೆ. ಜಗತ್ತಿಗೂ ಪರ ಮಾತ್ಮನಿಗೂ ಅಂದರೆ ಕಾರ್ಯಕ್ಕೂ ಕಾರಣಕ್ಕೂ ಅನನ್ಯತ್ವವನ್ನು ಹೇಳುವುದಿಲ್ಲ. ಜಗತ್ತಾದ ಕಾರ್ಯವು ಪರಮಾತ್ಮನಾದ ಕಾರಣಕ್ಕಿಂತ ಭಿನ್ನವಾದುದೆಂದು ವಾದಿಸುತ್ತಾರೆ. ಜೀವನು ಕರ್ಮವಶ್ಯನಾಗಿರುವ ದರಿಂದ ಈತನಿಗೆ ಸಂಸಾರವು ಅನಾದಿಯು. ಈಶ್ವರ ಪ್ರೀತ್ಯರ್ಥ ವಾಗಿ ಆಗಮೋಕ್ತ ಕರ್ಮಗಳನ್ನನುಷ್ಠಿಸಿ, ಈಶ್ವರನನ್ನು ಉಪಾಸನೆ ಮಾಡುವದರಿಂದ ಸುಖ ದುಃಖಗಳ ಜ್ಞಾನವು ನಾಶವಾಗುತ್ತದೆ. **"ಏಕ ವಿಂಶತಿ ಪ್ರಭೇದ ಭಿನ್ನ ದುಃಖ ಧ್ವಂಸೋ ಮೋಕ್ಷಃ"** ಎಂದು ಹೇ ಳಿರುವ ಹಾಗೆ ೨೧ ವಿಧವಾದ ದುಃಖಗಳ ನಾಶವೇ ಮೋಕ್ಷವೆಂದು ಹೇಳುತ್ತಾರೆ. ಈ ೨೧ ದುಃಖಗಳು ಯಾವುವೆಂದರೆ:—ಶರೀರ, ಮನಸ್ಸಿನೊಂದಿಗೆ ಸೇರಿ ಆರು ಇಂದ್ರಿಯಗಳು, ಆರು ವಿಷಯ ಗಳು, ಆರು ಬುದ್ಧಿಗಳು, ಸುಖ ಮತ್ತು ದುಃಖ, ಸುಖವೂ ಕೂಡ ದುಃಖ ಸಂಸರ್ಗವಿರುವದರಿಂದ ದುಃಖದಲ್ಲೇ ಸೇರಿದುದೇ ಎಂಬ ಭಾವವು. ಇವುಗಳು ನಿವೃತ್ತಿಯಾಗುವದರಿಂದ ಪಾಷಾಣ (ಕಲ್ಲು) ದಹಾಗಿರುವ ಸ್ಥಿತಿಯು ಪ್ರಾಪ್ತವಾಗುತ್ತದೆ. ಅದೇ ಮೋಕ್ಷವೆಂದು ಹೇಳುತ್ತಾರೆ. ಈ ನೈಯಾಯಿಕ ವೈಶೇಷಿಕರಿಬ್ಬರಿಗೂ, ಪರಮಾ ಣವೇ ಜಗತ್ತಿಗೆ ಉಪಾದಾನ ಕಾರಣವೆನ್ನುವದರಲ್ಲಿಯೂ, ಅನು ಮಾನ ಪ್ರಮಾಣದಿಂದ ಸ್ಥಾಪಿತನಾದ ಈಶ್ವರನೇ ನಿಮಿತ್ತ ಕಾರಣ ವೆನ್ನುವದರಲ್ಲಿಯೂ, ಸಂಸಾರವನಾದಿ ಎಂಬುವದರಲ್ಲಿಯೂ, ಈಶ್ವ ರೋಪಾಸನೆಯಿಂದಲೇ ಮೋಕ್ಷಪ್ರಾಪ್ತಿ ಎನ್ನುವದರಲ್ಲೂ, ಆ ಮೋ ಕ್ಷವು ಪಾಷಾಣ ಸದೃಶವಾದುದೂ ಎನ್ನುವದರಲ್ಲಿಯೂ ಕೂಡ, ಏನೊಂದೂ ವ್ಯತ್ಯಾಸವಿರುವುದಿಲ್ಲ. ಆದರೆ ಇವರಿಬ್ಬರಿಗೂ ಸ್ವಲ್ಪ ವ್ಯತ್ಯಾಸಗಳುಂಟು. ಅವು ಯಾವುವೆಂದರೆ:—

(೧) ನೈಯಾಯಿಕರು ಪ್ರತ್ಯಕ್ಷಾನುಮಾನ ಶಾಬ್ದ ಪ್ರಮಾಣಗಳಲ್ಲದೆ ನಾಲ್ಕನೇದಾದ ಉಪಮಾಪ್ರಮಾಣವನ್ನೂ ಅಂಗೀಕರಿಸುತ್ತಾರೆ. ವೈಶೇಷಿಕರು ಮೂರು ಪ್ರಮಾಣಗಳನ್ನು ಮಾತ್ರವೇ ಅಂಗೀಕರಿಸುತ್ತಾರೆ.

(೨) ನೈಯಾಯಿಕರು ವಸ್ತುಗಳಲ್ಲಿ ಪಾಕಾದಿ ಭೇದಗಳುಂಟಾಗುತ್ತವೆಂದು ಹೇಳುವರು. ವೈಶೇಷಿಕರು ಅವು ಮೊದಲು ಅಣುಗಳಲ್ಲುಂಟಾಗಿ ಅನಂತರ ದ್ವ್ಯಣುಕ ಮುಂತಾದವುಗಳಲ್ಲಿ ವ್ಯಾಪಿಸುತ್ತವೆಂದು ಹೇಳುವರು.

೬. **ಪಾಶುಮತಮತವು.**—ನೈಯಾಯಿಕನಹಾಗೆ ಪಾಶುಮತರೂ ಪರಮಾಣುಗಳೇ ಜಗತ್ತಿಗೆ ಕಾರಣವೆಂದು ಹೇಳುತ್ತಾರೆ. ಶಾಬ್ದ ಪ್ರಮಾಣ ಸಹಾಯದಿಂದ ಅನುಮಾನ ಪ್ರಮಾಣಾನುಸಾರ ಊಹಿಸಲ್ಪಟ್ಟ ಈಶ್ವರನು ಜಗತ್ತಿಗೆ ನಿಮಿತ್ತ ಕಾರಣನೆಂದು ನೈಯಾಯಿಕರ ಹಾಗೆ ಹೇಳುತ್ತಾರೆ. ಆದರೆ ಇವರುಗಳಿಗೆ ಶಾಬ್ದಪ್ರಮಾಣವು ಯಾವುದೆಂದರೆ ರುದ್ರನಿಂದಹೇಳಲ್ಪಟ್ಟ ಪಾಶುಮತ ಶಾಸ್ತ್ರವು. ಆ ಶಾಸ್ತ್ರದಲ್ಲಿ ಹೇಳಲ್ಪಟ್ಟ ಕರ್ಮಾನುಷ್ಠಾನವು ಮೋಕ್ಷಕ್ಕೆ ಅವಶ್ಯಕವು. ಉಪಾಸನದ್ವಾರಾ ರುದ್ರಪ್ರಸಾದ ಮೂಲಕವಾಗಿಯೇ ಮೋಕ್ಷವು. ಮೋಕ್ಷವೆಂದರೆ ಇವರಿಗೆ ಶಿವಸಾರೂಪ್ಯವು. ಮೋಕ್ಷದೆಸೆಯಲ್ಲಿ ಎಲ್ಲರೂ ಶಿವರೇ ಆಗುತ್ತಾರೆ. ಆ ಆಗಮಗಳಲ್ಲಿ ಹೇಳಿರುವ ಕರ್ಮಗಳು ಯಾವುವೆಂದರೆ :-ಮುದ್ರಿಕಾ ಷಟ್ಕಧಾರಣವು ; ಮುದ್ರಿಕಾ ಷಟ್ಕವೆಂದರೆ :—

ಕಣ್ಠಿಕಾ ರುಚಿಕಞ್ಚೈವ ಕುಂಡಲಂಚ ಶಿಖಾಮಣಿಃ ।
ಭಸ್ಮ ಯಜ್ಞೋಪವೀತಂಚ ಮುದ್ರಾಷಟ್ಕಂ ಪ್ರಚಕ್ಷತೇ ॥

ಎಂದು ಹೇಳಿರುವ ಹಾಗೆ, ಹಾರವು, ಉಂಗರವು, ಕರ್ಣಕುಂಡಲಗಳು, ಶಿಖೆಯಲ್ಲಿ ಮಣಿಯು, ಭಸ್ಮವು, ಯಜ್ಞೋಪವೀತವು, ಎಂಬೀ ಆರುಗಳನ್ನು ಧರಿಸೋಣವು. ಭಗಾಸನದಲ್ಲಿ ಕೂತು ಧ್ಯಾನವೂ ಮತ್ತು ದೇವತಾರ್ಚನೆಯೂ. ಸ್ಮಶಾನದ ಭಸ್ಮವನ್ನು ಧರಿಸುವುದು. ಪ್ರಣವಪೂರ್ವಕ ಧ್ಯಾನವು, ಕೈಯಲ್ಲಿ ರುದ್ರಾಕ್ಷಿಯ ಕಂಕಣವು,

ಇವೇ ಮೊದಲಾದ ಕಾಪಾಲವ್ರತದಿಂದ ಮನುಷ್ಯನು ಯತಿಯಾಗುವ ನೆಂದು ಹೇಳುವರು.

೧೦ ಮತ್ತು ೧೧. **ಸಾಙ್ಖ್ಯರು (ಕಾಪಿಲರು) ಮತ್ತು ಯೋಗಿಗಳು (ಪಾತಞ್ಜಲರು).**— ಇವರುಗಳು ಮೂಲಪ್ರಕೃತಿಯೇ ಜಗತ್ತಿಗೆ ಕಾರಣವೆಂದೂ, ಕಾರಣ ಮಾತ್ರವೇ ವಿನಾ ಕಾರ್ಯವಲ್ಲ ವೆಂದು ಹೇಳುತ್ತಾರೆ. ಆದರೆ ತತ್ವಗಳನ್ನು ವಿಭಾಗಿಸಿ ನಿರ್ಣಯಿಸುತ್ತಾರೆ. ಅವರುಗಳ ಅಭಿಪ್ರಾಯಾನುಸಾರವಾಗಿ, ಕಾರಣವೂ ಕಾರ್ಯವೂ ಆಗಿ ಏಳು ತತ್ವಗಳು. ಇವು ಯಾವುವೆಂದರೆ:— ಮಹತ್, ಅಹಙ್ಕಾರ, ತನ್ಮಾತ್ರೆಗಳು ಐದು. ಇವುಗಳಿಂದ ಕಾರ್ಯಮಾತ್ರವಾಗಿ ಹದಿನಾರು ತತ್ವಗಳು:—ಪಂಚ ಮಹಾ ಭೂತಗಳಾದ ಪೃಥಿವೀ, ಅಪ್ಪು, ತೇಜಸ್ಸು, ವಾಯು, ಆಕಾಶಗಳು, ಪಂಚ ಕರ್ಮೇಂದ್ರಿಯಗಳು, (ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥ) ಪಂಚ ಜ್ಞಾನೇಂದ್ರಿಯಗಳು (ಕಣ್ಣು, ನಾಲಿಗೆ, ಮೂಗು, ಚರ್ಮ, ಶ್ರೋತ್ರ); ಮನಸ್ಸು, ಕಾರಣವೂ ಕಾರ್ಯವೂ ಅಲ್ಲದ ೨೫ನೇ ತತ್ವವಾದಪುರುಷನು. ಇವರು ಅನೇಕರು. ಮೂಲಪ್ರಕೃತಿಯಲ್ಲಿ ಸತ್ವ ರಜಸ್ತಮೋ ಗುಣಗಳು ಸಮಭಾವವನ್ನು ಹೊಂದಿರುತ್ತವೆ. ಅದು ಚೇತನರ ಸುಖದುಃಖಾದಿಗಳಿಗೆ ಕಾರಣಭೂತವಾದುದು. ಚೇತನನು ಯಾವ ಧರ್ಮವನ್ನೂ ಹೊಂದಿದವನಲ್ಲೆಂದೂ, ಜ್ಞಾತೃತ್ವವನ್ನೂ ಕೂಡ ಹೊಂದಿದವನಲ್ಲವೆಂದೂ ಹೇಳುತ್ತಾರೆ. ಆದರೆ ಆತನಿಗೆ ಚೈತನ್ಯ ಮಾತ್ರ ಉಂಟೆಂದು ಭಾವಿಸುವರು. ತಾರ್ಕಿಕನ ಹಾಗೆ ಆತನು ಸರ್ವವನ್ನೂ ವ್ಯಾಪಿಸಿರುವನೆಂದು ಹೇಳುವರು. ಆತನು ವಿಕಾರ ಮತ್ತು ಪ್ರವೃತ್ತಿಶೂನ್ಯನು. ಕರ್ತೃತ್ವ ಭೋಕ್ತೃತ್ವಾದಿಗಳೂ ಇಲ್ಲವೆಂದು ಭಾವಿಸುವರು. ತೋರುವ ಕರ್ತೃತ್ವ ಭೋಕ್ತೃತ್ವವೆಲ್ಲಾ ಪ್ರಕೃತಿಗೆ ಸೇರಿದುದು ಎಂಬಭಿಪ್ರಾಯವು. ಪ್ರಕೃತಿಪುರುಷರಿಬ್ಬರೂ ಸೇರಿರುವದರಿಂದ ಪ್ರಕೃತಿಯ ಗುಣಗಳಾದ ಕರ್ತೃತ್ವ ಭೋಕ್ತೃತ್ವಾದಿ

ಗಳನ್ನು ಚೇತನನು ಭ್ರಮೆಯಿಂದ ಆರೋಪಿಸಿಕೊಳ್ಳುವನೆಂದೂ, ಹಾಗೆಯೇ ಪುರುಷನ ಚೈತನ್ಯವು ಪ್ರಕೃತಿಯಲ್ಲಿ ಆರೋಪಿತವಾಗಿರುತ್ತದೆಂದೂ ಹೇಳುವರು. ಸಾಙ್ಖ್ಯರು ತಮ್ಮ ಸಿದ್ಧಾನ್ತವನ್ನು ಪ್ರತ್ಯಕ್ಷ ಅನುಮಾನ ಪ್ರಮಾಣಗಳಿಂದ ಸಾಧಿಸುವರು. ಇವರಿಗೆ ಶಾಸ್ತ್ರವು ವೇದವಲ್ಲವು, ಕಾಪಿಲ ಸಿದ್ಧಾಂತವು. ಸಂಸಾರವೆಂದರೆ ನಾವುಗಳು ಹೇಳುವ ಹಾಗೆ ಪ್ರಕೃತಿಯಿಂದ ಸೇರಿರುವ ಭಾವವು. ಆದರೆ ಮೋಕ್ಷವಾದರೋ ಪ್ರಕೃತಿಯಿಂದ ಬಿಡಲ್ಪಟ್ಟಿರುವ ಹಾಗೆ ತಿಳಿಯುವಿಕೆ, ಮತ್ತು ೨೧ ವಿಧ ದುಃಖಗಳಿಂದಲೂ ನಿವೃತ್ತಿಯನ್ನು ಹೊಂದಿರುವಿಕೆಯು. ಕಾಪಿಲರಿಗೂ, ಪಾತಞ್ಜಲರಿಗೂ ತುಂಬಾ ವ್ಯತ್ಯಾಸವಿಲ್ಲವು. ಆದರೆ ಸಾಙ್ಖ್ಯರಿಗೆ ಕಾಪಿಲ ಋಷಿಯ ಸಿದ್ಧಾಂತವು ಶಾಸ್ತ್ರವು. ಪಾತಞ್ಜಲರಿಗೆ ಪತಞ್ಜಲಿಯ ಸಿದ್ಧಾಂತವಾಗಲಿ, ಹಿರಣ್ಯಗರ್ಭ ಸಿದ್ಧಾಂತವಾಗಲಿ ಶಾಸ್ತ್ರವು. ಕಾಪಿಲರಿಗೆ ನಿರೀಶ್ವರ ಸಾಙ್ಖ್ಯರೆಂದೂ, ಯೋಗರಿಗೆ ಸೇಶ್ವರ ಸಾಙ್ಖ್ಯರೆಂದೂ ಹೆಸರು. ಈ ಯೋಗರಿಗೆ ಪ್ರಕೃತಿಯೊಂದೂ, ಈಶ್ವರನೊಬ್ಬನೂ ಎರಡೇ ತತ್ತ್ವವು. ಇವರಿಗೆ ಚೇತನರು ಅನೇಕರಲ್ಲವು. ಅದ್ವೈತಿಯ ಹಾಗೆ ಚೇತನವೆಲ್ಲಾ ಒಂದೇ. ಈ ಸಾಂಖ್ಯರಿಂದ ನಮಗುಂಟಾದ ಪ್ರಯೋಜನವು ೨೫ ತತ್ತ್ವಗಳ ನಿರೂಪಣವು.

೧೨ ಮತ್ತು ೧೩. **ಭಾಟ್ಟರು, ಪ್ರಾಭಾಕರರು.**—ಭಟ್ಟರ ಮತ್ತು ಪ್ರಭಾಕರರ ಮತಾವಲಂಬಿಗಳು. ಇವರಿಬ್ಬರಿಗೂ ಸ್ವಲ್ಪ ವ್ಯತ್ಯಾಸಗಳಿದ್ದರೂ, ಆತ್ಮಸ್ವರೂಪದಲ್ಲೂ, ಜಗತ್ಕಾರಣದಲ್ಲೂ, ಸಂಸಾರ ಮೋಕ್ಷಗಳಿಗೆ ಕಾರಣಭಾವ ಹೇಳುವದರಲ್ಲೂ, ಈಶ್ವರ ಸದ್ಭಾವವನ್ನಂಗೀಕರಿಸದೇ ಇರುವದರಲ್ಲೂ ಇಬ್ಬರೂ ಸಮರು. ಇವರುಗಳಿಗೆ ಆತ್ಮರೆಲ್ಲಾ ನಿತ್ಯವು, ವಿಭುವು, ಪ್ರತಿಶರೀರದಲ್ಲೂ ಬೇರೆ ಬೇರೆಯಾಗಿ ಅನೇಕರು. ಇವರಿಗೆ ವೇದವು ಪ್ರಮಾಣವು. ಆತ್ಮರಿಗೆ ಅನಾದಿಕಾಲದಿಂದ ಸಂಪಾದಿಸಲ್ಪಟ್ಟ ಅನನ್ತ ಪುಣ್ಯ ಪಾಪರೂಪ ಕಾಮ್ಯ ನಿಷಿದ್ಧ ಕರ್ಮಗಳಿಂದಲೇ ಸಂಸಾರ ಬಂಧನವು. ವೇದದಲ್ಲಿ

ಹೇಳಿರುವ ಕರ್ಮಾನುಷ್ಠಾನದಿಂದ ಒಂದು **ಅಪೂರ್ವ**ವೆಂಬುವದುಂಟಾಗುತ್ತದೆ. ಈ ಅಪೂರ್ವವು ಎರಡು ವಿಧವು :—ಫಲಾಭಿಸಂಧಿರಹಿತವಾದ ಕರ್ಮಾನುಷ್ಠಾನದಿಂದುಂಟಾದ ಅಪೂರ್ವದಿಂದ ಪುನಸ್ಸಂಸಾರಪ್ರಾಪ್ತಿಯು. ಫಲಾಭಿಸಂಧಿರಹಿತವಾದ ಕರ್ಮಾನುಷ್ಠಾನದಿಂದುಂಟಾದ ಅಪೂರ್ವದಿಂದ ಮೋಕ್ಷವು. ಇವರಿಗೆ ಕರ್ಮವೇ ಬ್ರಹ್ಮವು. ಕರ್ಮವ್ಯತಿರಿಕ್ತವಾದ ಈಶ್ವರ ಸದ್ಭಾವವನ್ನಂಗೀಕರಿಸುವುದಿಲ್ಲವು. ಇವರಿಗೆ ಜಗತ್ತು ಪ್ರವಾಹತಃ ನಿತ್ಯವು.

೧೪. **ಮಾಯಾವಾದಿಗಳ (ಶಾಂಕರ) ಮತವು.**—ಭಾಟ್ಟಪ್ರಾಭಾಕಾರರು ಕರ್ಮವೇ ಪರಬ್ರಹ್ಮವೆಂದು ಹೇಳಿದರು. ಈ ಅಭಿಪ್ರಾಯವನ್ನು ಖಂಡಿಸಿ, ಇವರು ಪರಬ್ರಹ್ಮ ಒಂದುಂಟೆಂದು ಹೇಳಿ ಅದು ನಿರ್ವಿಶೇಷ ಚಿನ್ಮಾತ್ರವೆಂದರೆ ವಿಶೇಷಗಳೊಂದೂ ಇಲ್ಲದೆ ನಿರ್ಗುಣವಾದ ಜ್ಞಾನಸ್ವರೂಪನಾದ ಪರಬ್ರಹ್ಮವು. ಶಾಸ್ತ್ರರೀತ್ಯಾ, ನಿರ್ವಿಶೇಷನು ಎಂದರೆ ಸಜಾತೀಯ, ವಿಜಾತೀಯ, ಸ್ವಗತರೂಪವಾದ ಭೇದಗಳೊಂದೂ ಇಲ್ಲದೆ ಇರುವವನೆಂಬರ್ಥವು. ಹಾಗಾದರೆ ಮೊಲದ ಕೊಂಬಿನ ಹಾಗೆ ತುಚ್ಛವಾದವನೇ ಎಂದರೆ, ಹಾಗಲ್ಲವು, ಜ್ಞಾನಸ್ವರೂಪಮಾತ್ರನೆಂದು ಹೇಳುತ್ತಾರೆ. ಇವರುಗಳು ಜ್ಞೇಯವಸ್ತುಗಳನ್ನೂ ಜ್ಞಾತಾವನ್ನೂ ಅಂಗೀಕರಿಸುವುದಿಲ್ಲವು. ಜಗತ್ತಿನ ಅವಭಾಸವು ಇವರಿಗೆ ಮಿಥ್ಯಾರೂಪವಾದುದು. ಮಿಥ್ಯೆ ಎಂದರೆ ಸತ್ತೂ (ಇರುವದೂ) ಅಲ್ಲವು, ಅಸತ್ತೂ (ಇಲ್ಲದಿರುವದೂ) ಅಲ್ಲವು, ಸದಸದನಿರ್ವಚನೀಯವೆಂದು ಹೇಳುತ್ತಾರೆ. ಹೀಗೆ ಹೇಳುವದು ವಾದಭಾವದಲ್ಲಿ ಕುಂದಕವು. ಪರಬ್ರಹ್ಮವೇ ಅನಾದ್ಯವಿದ್ಯೆಯಿಂದ ಕೂಡಿದುದಾಗಿ ಭ್ರಮೆಯಿಂದ ಭೇದವನ್ನು ಗ್ರಹಿಸುವದರಿಂದ ಜನ್ಮಜರಾಮರಣಾದಿ ದುಃಖಗಳನ್ನು ಹೊಂದುವನು. ಇದೇ ಸಂಸಾರವು. **"ತತ್ತ್ವಮಸಿ,"** "ಅಯಮಾತ್ಮಾಬ್ರಹ್ಮ" ಇತ್ಯಾದಿ ವಾಕ್ಯಗಳಿಂದುಂಟಾದ ಜ್ಞಾನದಿಂದ ಜೀವನ್ಮುಕ್ತಿಯುಂಟಾಗುವದು. ಅದೇ ಮೋಕ್ಷವು. ಜ್ಞಾನಿಗೆ ನಿತ್ಯಕರ್ಮಾನುಷ್ಠಾನಾದಿಗಳು ಅವಶ್ಯಕವಿಲ್ಲವೆಂದು ಹೇಳು

ವರು. ಧ್ಯಾನವೂ ಕೂಡ ಬೇಕಿಲ್ಲವು. ಮಿಥ್ಯಾಸರ್ಪವು ಗರುಡ ಧ್ಯಾನದಿಂದ ನಿವರ್ತಿಸಲಾರದೆಂದೂ, ಅದು ಸರ್ಪವಲ್ಲವೆಂಬ ಜ್ಞಾನಮಾತ್ರದಿಂದಲೇ ನಿವರ್ತಿಸುವದೆಂದೂ ಹೇಳುವದರಿಂದ, ಜ್ಞಾನದಿಂದಲೇ ಮೋಕ್ಷವೆಂಬುವದು ಇವರ ಅಭಿಪ್ರಾಯವು. ಆದುದರಿಂದ ಅವಿದ್ಯಾಸಂಬಂಧವೂ, ಅವಿದ್ಯಾ ನಿವೃತ್ತಿಯೂ ಎಲ್ಲವೂ ಪರಬ್ರಹ್ಮನಿಗೇ ವಿನಾ ಬೇರೆ ಇಲ್ಲವು. ಆದುದರಿಂದ ಪರಬ್ರಹ್ಮ ಒಂದೇ ಸತ್ಯವು, ಮಿಕ್ಕಿದ್ದೆಲ್ಲಾ ಅಸತ್ಯವೆಂಬುವದು ಇವರ ಅಭಿಪ್ರಾಯವು.

೧೫. **ಭಾಸ್ಕರೀಯರ ಮತವು.**—ಈ ಸಿದ್ಧಾಂತ ಪ್ರಕಾರ ಪರಬ್ರಹ್ಮನ ಒಂದು ಅಂಶಕ್ಕೆ ಸತ್ಯವಾದ ಉಪಾಧಿ ಸಂಸರ್ಗದಿಂದ ದೇಹಾದಿಗಳ ಸಂಬಂಧ ಉಂಟಾಗಿ ಸಂಸಾರವು ಏರ್ಪಡುತ್ತದೆ. ಮಾಯಾವಾದಿಗಳು ಪರಬ್ರಹ್ಮನಿಗೆ ಅವಿದ್ಯೆಯ ಸಂಸರ್ಗದಿಂದ ಸಂಸಾರ ಉಂಟಾಗುತ್ತದೆಂದು ಹೇಳುತ್ತಾರೆ. ಆದರೆ ಅವಿದ್ಯೆಯು ಮಿಥ್ಯಾರೂಪವಾದುದೆಂದು ಹೇಳುವರು. ಭಾಸ್ಕರೀಯರು ಉಪಾಧಿಯು ಸತ್ಯವಾದುದೆಂದು ಹೇಳುವರು. ಜೀವನಿಗೆ ಪೂರ್ವ ಜನ್ಮದಲ್ಲಿ ಮಾಡಿದ ಕರ್ಮದಿಂದ ಉಪಾಧಿಯು ಉತ್ಪನ್ನವಾಗುತ್ತದೆ. ಉಪಾಧಿಯಿಂದ ಕರ್ಮವು ಉಂಟಾಗುತ್ತದೆ. ಹೀಗೆ ಉಪಾಧಿ ಕರ್ಮಗಳಿಗೆ ಬೀಜಾಂಕುರ ನ್ಯಾಯಪ್ರಕಾರ ಸಂಬಂಧವಿರುತ್ತದೆ. ಪರಬ್ರಹ್ಮನು ಯದ್ಯಪಿ ನಿರವಯಕನಾಗಿ ಸರ್ವವನ್ನೂ ಹೊಂದಿರುವನಾದರೂ ಉಪಾಧಿಯಿಂದ ಭೇದವನ್ನು ಹೊಂದಿ ಪ್ರತ್ಯೇಕವಾಗಿ ತೋರುವನು. ಈ ಉಪಾಧಿಯಿಂದಲೇ ಭ್ರಮಯುಕ್ತವಾದ ಸಂಸಾರ ಪ್ರಾಪ್ತಿಯು. ತನ್ನ ತನ್ನ ವರ್ಣಾಶ್ರಮ ಧರ್ಮಗಳನ್ನನುಸರಿಸುವುದರಿಂದಲೂ, ತತ್ವಮಸಿ ಮುಂತಾದ ವಾಕ್ಯ ಜನ್ಯ ಜ್ಞಾನಪೂರ್ವಕವಾದ ಉಪಾಸನದಿಂದಲೂ, ಉಪಾಧಿಯು ನಾಶವಾಗುತ್ತದೆ. ಅಂತಹ ಅವಸ್ಥೆಯೇ ಮೋಕ್ಷವೆಂದು ಹೇಳುತ್ತಾರೆ; ಆದುದರಿಂದ ಭಾಸ್ಕರೀಯರು ಭೇದಾಭೇದವಾದಿಗಳು. ಜೀವನು ಪರಬ್ರಹ್ಮನ ಒಂದು ಅಂಶವಾದುದರಿಂದ ಭಿನ್ನವಾದುದೂ ಹೌದು, ಅಭಿನ್ನವಾದುದೂ ಹೌದು. ಅಭೇದವು ಸ್ವಾಭಾವಿಕವಾದುದು, ಭೇದವು ಉಪಾಧಿಯುಂಟಾದುದು.

೧೬. **ಯಾದವಪ್ರಕಾಶನಮತವು.**—ಹಿಂದೆ ಮಾಯಾವಾದಿಗಳು ಪರಮಾತ್ಮನೇ ಅವಿದ್ಯಾ ಅಥವಾ ಮಾಯೆಯಿಂದಾವೃತನಾಗಿ, ಭೇದ ಜ್ಞಾನಹುಟ್ಟಿ, ಸಂಸಾರವನ್ನನುಭವಿಸುತ್ತಾನೆಂದು ಹೇಳಿದರು. ಅನಂತರ ಭಾಸ್ಕರೀಯರು, ಪರಮಾತ್ಮನೇ ಉಪಾಧಿಯಿಂದ ಬಂಧಿಸಲ್ಪಟ್ಟು ಭೇದಜ್ಞಾನವನ್ನೂ ಸಂಸಾರವನ್ನೂ ಅನುಭವಿಸುವನೆಂದು ಹೇಳಿದರು. ಈ ಯಾದವಪ್ರಕಾಶರು ಪರಮಾತ್ಮನೇ ವಿಕಾರವನ್ನು ಹೊಂದಿ, ಸತ್ಯವಾದ ಚಿದಚಿದಾತ್ಮನಾಗಿ ಭ್ರಮಿಸುವನೆಂದೂ ಇದರಿಂದ ಭೇದಜ್ಞಾನ ಉಂಟಾಗುವದೆಂದೂ, ಇದರಿಂದಲೇ ಸಂಸಾರವೆಂದೂ, ಆದುದರಿಂದ ಜಗತ್ತೆಲ್ಲಾ ಪರಮಾತ್ಮನ ವಿಕಾರವೆಂದೂ ಹೇಳುವರು. ಕರ್ಮಜ್ಞಾನಗಳಿಂದ ಈ ಭೇದಜ್ಞಾನವು ಹೋಗುವದೇ ಮೋಕ್ಷವೆಂದವರಭಿಪ್ರಾಯವು. ಕರ್ಮದಿಂದ ಬನ್ಧನಿವೃತ್ತಿಯೂ, ಜ್ಞಾನದಿಂದ ಪರಬ್ರಹ್ಮೈಕ್ಯಸ್ವರೂಪ ಮೋಕ್ಷವೂ ಉಂಟಾಗುತ್ತದೆಂದು ಹೇಳುವರು. ಇದಕ್ಕೆ ಪ್ರಮಾಣವು (1) "ವಿದ್ಯಾಂಚಾವಿದ್ಯಾಂಚ ಯಸ್ತದ್ವೇದೋಭಯಂಸಹ । ಅವಿದ್ಯಯಾಮೃತ್ಯುಂತೀರ್ತ್ವಾ ವಿದ್ಯಯಾಮೃತಮಶ್ನುತೇ" ಇದರಿಂದ ಪೂರ್ವಖಂಡದಲ್ಲಿ ಜ್ಞಾನಕರ್ಮಗಳೆರಡೂ ಸಾಧನವೆಂದೂ, ಹಾಗೆಯೇ ಉತ್ತರ ಖಂಡದಲ್ಲಿ ಸಾಧ್ಯವೂ ಎರಡೆಂದೂ, ಯಾದವಪ್ರಕಾಶರ ಅಭಿಪ್ರಾಯವು. ಆದರೆ ಕರ್ಮಜ್ಞಾನಗಳು ಅಂಗಾಂಗಿ ಭಾವವುಳ್ಳವು ಎಂದು ಭಾಸ್ಕರನ ಮತ್ತು ಶ್ರೀ ಭಾಷ್ಯಕಾರರ ಅಭಿಪ್ರಾಯವು. ಆದರೆ ಜ್ಞಾನರೂಪವಾದುದೇ ಫಲವು, ಅದನ್ನುಂಟುಮಾಡಲು ಕರ್ಮಸಾಧಕವೆಂದು ಭಾಸ್ಕರರಭಿಪ್ರಾಯವು. ಶ್ರೀ ಭಾಷ್ಯಕಾರರಭಿಪ್ರಾಯವಾದರೋ ಬಳ್ಳಿ ಜ್ಞಾನಕ್ಕೆ ಕರ್ಮವು ಅಂಗವೆಂದೂ, ಆ ಜ್ಞಾನದಿಂದ ಭಕ್ತಿ ಪ್ರಪತ್ತಿಗಳಾದ ಸಾಧ್ಯೋಪಾಯಗಳ ಪ್ರಾಪ್ತಿ ಎಂದೂ ಹೇಳುತ್ತಾರೆ.

೧೭. **ಏಕಾಯನನ ಮತವು.**—ಲಕ್ಷ್ಮೀಶಿಷ್ಟನಾದ ನಾರಾಯಣನೇ ಪ್ರಾಪ್ಯನೆಂದು ನಾವು ಹೇಳುವ ಹಾಗೆ ಇವರು ಹೇಳುವುದಿ

(1) ಈ. ಉ. 11.

ಲ್ಲವು. ಸ್ವಾಮಿಯೊಬ್ಬನೇ ಪ್ರಾಪ್ಯನೆಂದೂ, ಲಕ್ಷ್ಮಿಯು ಸರ್ವ ಶಕ್ತಿಗಳಿಗೂ ಶ್ರೇಷ್ಠವಾದ ಶಕ್ತಿ ಎಂದೂ ಇವರಭಿಪ್ರಾಯವಾದುದರಿಂದ **ಏಕಾಯನ** ಎಂದು ಹೆಸರು. ಏಕ - ಒಬ್ಬನಾದ ಈಶ್ವರನನ್ನೇ ಅಯನಂ-ಪ್ರಾಪ್ಯವನ್ನಾಗಿ ಹೇಳುವರು. ಅದರಿಂದ ಇವರು ಏಕಾಯನರೆಂದು ಹೇಳಲ್ಪಡುವರು. ಹೀಗೆ ಹೇಳುವದೂ ತಪ್ಪಾದುದರಿಂದ ಇವರೂ ಕುದೃಷ್ಟಿಗಳಲ್ಲಿ ಸೇರಿರುತ್ತಾರೆ.

ಈ ಮೇಲೆ ಹೇಳಿದ ಮತಗಳಲ್ಲಿ ಲೋಕಾಯತನ ಮತ ಮೊದಲುಗೊಂಡು ಯೋಗಾಚಾರ್ಯನ ಮತದವರಿವಿಗೆ ಬಾಹ್ಯಮತಗಳು. ಭಾಟ್ಟಮತ ಮೊದಲುಗೊಂಡು, ಏಕಾಯನನ ಮತದವರಿವಿಗೂ ಕುದೃಷ್ಟಿ ಮತಗಳು. ಈ ಮತಗಳೆಲ್ಲವೂ ವ್ಯರ್ಥವಾದವುಗಳು ಎಂದು ಮನುವು ಹೇಳುತ್ತಾರೆ.

"ಯಾವೇದಬಾಹ್ಯಾಸ್ಸ್ಮೃತಯೋ ಯಾಶ್ಚಕಾಶ್ಚ ಕುದೃಷ್ಟಯಃ।
ಸರ್ವಾಸ್ತಾ ನಿಷ್ಫಲಾಃ ಪ್ರೇತ್ಯ ತಮೋನಿಷ್ಠಾಹಿತಾಸ್ಸ್ಮೃತಾಃ॥"

ಇವುಗಳು ವ್ಯರ್ಥಗಳು ಅಂದರೆ ಪರಪ್ರಯೋಜನ ಉಂಟುಮಾಡುವುಗಳಲ್ಲವು ಎಂಬರ್ಥವು.

ನಮ್ಮ ಸಿದ್ಧಾಂತವ್ಯಾವುದೆಂಬುವದು ಪ್ರಧಾನಪ್ರತಿತಂತ್ರ, ಅರ್ಥಪಂಚಕ, ತತ್ವತ್ರಯ, ಪರದೇವತಾ ಪಾರಮಾರ್ಥ್ಯಾಧಿಕಾರಗಳಲ್ಲಿ ಮುಂದಕ್ಕೆ ಉಪಪಾದಿಸಲ್ಪಡುತ್ತದೆ.

ಸಂಗ್ರಹವಾಗಿ ನಮ್ಮ ಸಿದ್ಧಾಂತವೇನೆಂದರೆ;—ಅದ್ವೈತಿಗಳು ಹೇಳುವಹಾಗೆ ತತ್ವ ಒಂದೇ ಅಲ್ಲವು. ತತ್ವಗಳು ಮೂರು, ಚಿತ್ತು, ಅಚಿತ್ತು, ಈಶ್ವರನು. ಈಶ್ವರನಲ್ಲೇ ಲಕ್ಷ್ಮಿಯೂ ಅಂತರ್ಗಳು, ಆದುದರಿಂದಲೇ ತತ್ವತ್ರಯವೆಂದು ವ್ಯವಹಾರವು. ಈ ಈಶ್ವರೀಶ್ವರರಾದ ಲಕ್ಷ್ಮೀನಾರಾಯಣರು ಚಿದಚಿತ್ತುಗಳನ್ನು ಶರೀರವಾಗಿ ಮಾಡಿಕೊಂಡು ಅವುಗಳಿಗೆ ಆತ್ಮವಾಗಿ ಅವುಗಳೊಂದಿಗೆ ಸದಾ **ವಿಶಿಷ್ಟ**ರಾಗಿಯೇ ಇದ್ದಾರೆ, ಇದರಿಂದಲೇ ನಮ್ಮ ಸಿದ್ಧಾಂತಕ್ಕೆ

ವಿಶಿಷ್ಟಾದ್ವೈತವೆಂದು ಹೆಸರು. ಈ ಶ್ರೀಮನ್ನಾರಾಯಣನೇ ಜಗತ್ಸೃಷ್ಟಿಸ್ಥಿತಿಲಯಗಳಿಗೆ ಕಾರಣನು. ಜಗತ್ತಿಗೆ ಉಪಾದಾನ ನಿಮಿತ್ತ ಸಹಕಾರಿ ಕಾರಣವೆಲ್ಲಾ ಈ ಲೋಕ ದಂಪತಿಗಳೇ ಎಂದು ಶ್ರುತಿಯು ಹೇಳುತ್ತದೆ. ಜೀವಾತ್ಮರುಗಳು ಅನೇಕರು. ಇವರುಗಳನ್ನು ಮೂರು ವಿಧವಾಗಿ ವಿಂಗಡಿಸುತ್ತಾರೆ. ನಿತ್ಯರು ಅನಾದಿಯಾಗಿ ನಿತ್ಯವಿಭೂತಿಯಲ್ಲಿ ಲೋಕದಂಪತಿಗಳಿಗೆ ಕೈಂಕರ್ಯವನ್ನೆಸಗುವುದಕ್ಕಾಗಿಯೇ ಇದ್ದುಕೊಂಡಿರುತ್ತಾರೆ. ಮುಕ್ತರು ಬಂದಾನೊಂದು ಕಾಲದಲ್ಲಿ ಬದ್ಧದಶೆಯಲ್ಲಿದ್ದು ಅದನ್ನು ಕಳೆದುಕೊಂಡು ನಿತ್ಯವಿಭೂತಿಯನ್ನು ಸೇರಿ ಆದಿ ದಂಪತಿಗಳಿಗೆ ಕೈಂಕರ್ಯವನ್ನು ಎಸಗುತ್ತಿರುವರು. ಬದ್ಧರು ಲೀಲಾವಿಭೂತಿಯಲ್ಲಿ ಜನ್ಮ ಸಂತತಿಯನ್ನೆತ್ತುತ್ತಿರುವರು. ಜೀವಾತ್ಮರೆಲ್ಲರೂ "ದಾಸಭೂತಾ ಸ್ಸ್ವತಸ್ಸರ್ವೇ" ಎಂದು ಹೇಳಿರುವ ಹಾಗೆ ಆದಿ ದಂಪತಿಗಳಿಗೆ ದಾಸರು, ಶೇಷಭೂತರು. ಇವರುಗಳೂ ಇವರುಗಳ ಕರ್ಮವೂ ಅನಾದಿಯಾದವು. ಸುಕೃತ ಪರಿಪಾಕದಿಂದ ಜೀವನಿಗೆ ಮಾನುಷ ದೇಹವು ಪ್ರಾಪ್ತವಾಗುತ್ತದೆ. ಆ ಸುಸಮಯದಲ್ಲಿ ಆತನು ವರ್ಣಾಶ್ರಮ ಧರ್ಮರೀತ್ಯಾ ಕರ್ಮವನ್ನೆಸಗಿ, ಜ್ಞಾನ ಸಂಪಾದಿಸಿ, ಭಕ್ತಿಪ್ರಪತ್ತಿಗಳಲ್ಲಿ ಯಾವುದಕ್ಕೆ ತನಗೆ ಅರ್ಹತೆಯುಂಟೋ, ಆ ಮಾರ್ಗದಿಂದ ಲೋಕ ದಂಪತಿಗಳ ಪಾದಗಳನ್ನು ಅವಲಂಬಿಸಿ, ಸರ್ವ ಪಾಪಗಳನ್ನೂ ಕಳೆದುಕೊಂಡು ಮುಕ್ತಿಯನ್ನು ಹೊಂದತಕ್ಕದ್ದು. ಜೀವನು ಅಣುವು: ಆತನ ಜ್ಞಾನವಮಾತ್ರ ವಿಭುವು; ಆತನು ಸ್ವಾಮಿಯ ಹಾಗೆಯೇ ಜ್ಞಾನತ್ವ, ಆನಂದತ್ವ, ಅಮಲತ್ವಾದಿಗಳಿಂದ ಮಹಾ ಪರಿಶುದ್ಧನೆಂದೂ, ಪ್ರಕೃತಿ ಸಂಸರ್ಗ ಮತ್ತು ದುಷ್ಕರ್ಮಗಳಿಂದ ಜ್ಞಾನಸಂಕೋಚವನ್ನು ಹೊಂದಿ ಹೀನದಶೆಯಲ್ಲಿದ್ದಾನೆಂದೂ, ಈ ಶರಣಾಗತಿಯ ಮಾಹಾತ್ಮ್ಯೆಯಿಂದ ಕರ್ಮವೆಲ್ಲಾ ನಶಿಸಿಹೋದ ಒಡನೆಯೇ ಜ್ಞಾನವು ವಿಕಾಸವನ್ನೈದುವದೆಂದೂ, ದೇಹಾವಸಾನಾನಂತರ ಈತನಿಗೆ ಪ್ರಕೃತಿ ಸಂಬಂಧವು ತೊಲಗಿ ದಿವ್ಯಮಂಗಳ ವಿಗ್ರಹ ಉಂಟಾಗಿ ದಿವ್ಯ ವೈಕುಂಠ ಲೋಕವನ್ನು ಸೇರುವನೆಂದೂ ನಮ್ಮಗಳ ಸಿದ್ಧಾಂತವು.

ವೇದಿತ್ತಿಲ್ ಪೂರ್ವಭಾಗತ್ತಿಲ್ ಐಹಿಕ ಫಲ ಸಾಧನ ಕರ್ಮ ಪ್ರತಿಪಾದಕ ಮಾನ ಪ್ರದೇಶಂ ಅತ್ಯಲ್ಪಸಾರಮಾ ಕೈಯಾಲೆಯನುಪಾದೇಯಂ. ಆಮುಷ್ಮಿಕ ಫಲಪ್ರತಿಪಾದಕಾಂಶಂಐಹಿಕ ಫಲತ್ತಿರ್ಕ್ಕಾಟ್ಟಿಲತಿಶಯಿತ ಫಲತ್ತೈಯುಡೈತ್ತಾಕೈಯಾಲೆ ಶಿಲರ್ಕ್ಕು ಸಾರಮೆನ್ನಲಾ ಯಿರುನ್ತದೇ ಯಾಕಿಲುಂದುಃಖಮೂಲತ್ವಾದಿ ದೋಷದುಷ್ಟ ಮಾಕೈಯಾಲೆ ಯನುಪಾದೇಯಂ.

ನಿತ್ಯವಿಭೂತಿ, ಲೀಲಾವಿಭೂತಿಗಳೆರಡರಲ್ಲಿ, ನಿತ್ಯವಿಭೂತಿಯು ಪರಿಣಾಮ ರಹಿತವಾದುದು. ಆದುದರಿಂದಲೇ ಅದಕ್ಕೆ ನಿತ್ಯವಿಭೂತಿ ಯೆಂದು ಹೆಸರು. ಇದು ಸೃಷ್ಟಿ ಲಯಗಳಿಗೆ ಸೇರಿದುದಲ್ಲವು. ಲೀಲಾವಿಭೂತಿ ಮಾತ್ರವೇ ಅಂತಹ ಸೃಷ್ಟಿ ಲಯಗಳಿಗೆ ಒಳಗಾದುದು. ನಿತ್ಯವಿಭೂತಿಯಾದ ಪರಮಪದವು ಶುದ್ಧಸತ್ವಮಯವಾದುದು. ಲೀಲಾವಿಭೂತಿಯು ತ್ರಿಗುಣಾತ್ಮಕವಾದುದು ಅಂದರೆ ಸತ್ವರಜಸ್ತಮೋ ಗುಣಗಳಿಂದ ಯುಕ್ತವಾದುದು.

ಪರಬ್ರಹ್ಮವು ನಮಗೆ ಸಗುಣವು. ಲಕ್ಷ್ಮೀನಾರಾಯಣರಿಬ್ಬರೂ ಹೇಯಪ್ರತ್ಯನೀಕರು, ಕಲ್ಯಾಣಗುಣಾಕರರು. ನಮಗೆ ಅನುಗ್ರಹಮಾಡಲು ಯೋಗ್ಯವಾದ ಸರ್ವಶಕ್ತಿತ್ವ, ದಯೆ, ಸೌಲಭ್ಯ, ವಾತ್ಸಲ್ಯ, ಸೌಶೀಲ್ಯ, ಸ್ವಾತಂತ್ರ್ಯ ಮೊದಲಾದ ಗುಣಗಳನ್ನೆಲ್ಲಾ ಹೊಂದಿರುವವರು. ಅದ್ವೈತಿಗಳು ಹೇಳುವ ಹಾಗೆ ನಿರ್ಗುಣನಲ್ಲವು. ಆದರೆ ಶಾಸ್ತ್ರದ ಅನೇಕ ಕಡೆಯಲ್ಲಿ ನಿರ್ಗುಣನೆಂದು ಹೇಳಿದೆಯಲ್ಲಾ ವೆಂದರೆ ನಿರ್ಗುಣ ಶಬ್ದಕ್ಕೆ ಹೇಯಗುಣರಹಿತನೆಂಬರ್ಥವು. ನಮಗೆ ಜಗತ್ತು ಮಿಥ್ಯೆಯಲ್ಲವು. ಸತ್ಯವಾದುದು. ಪರಿಣಾಮಯುಕ್ತವಾದುದರಿಂದ ಅನಿತ್ಯವು. ಪ್ರವಾಹತಃ ನಿತ್ಯವು.)

ವೇದಗಳಲ್ಲಿ ಕರ್ಮಗಳನ್ನು ಪ್ರತಿಪಾದಿಸುವ ಭಾಗದಲ್ಲಿ ಇಹಲೋಕದ ಈ ಜನ್ಮದಲ್ಲೇ ಅನುಭವಿಸಬಹುದಾದ ಫಲವನ್ನು ಸಾಧಿಸಿಕೊಡುವ ಕರ್ಮಗಳನ್ನು ಕುರಿತು ಹೇಳುವ ಪ್ರಕರಣಗಳು,

ತುಂಬಾ ಕಮ್ಮಿಯಾದ ಸಾರವುಳ್ಳವುಗಳಾಗಿ ದುಃಖಮಿಶ್ರವಾದ, ನಶ್ವರವಾದ ಸುಖವನ್ನು ಕೊಡುವುವಾದುದರಿಂದ, ಗ್ರಾಹ್ಯವಲ್ಲವು. (**ಯದ್ಯತ್ಪ್ರೀತಿಕರಂ ಪುಂಸಾಂ ವಸ್ತು ಮೈತ್ರೇಯ ಜಾಯತೇ। ತದೇವ ದುಃಖವೃಕ್ಷಸ್ಯ ಬೀಜತ್ವಮುಪಗಚ್ಛತಿ ॥** ವಿ. ಪು. 6. 5. 54 ಎಂದು ಹೇಳಿರುವ ಹಾಗೆ ಈ ಕರ್ಮಭಾಗದಲ್ಲಿ ಪ್ರೋಕ್ತವಾದ, ಯಜ್ಞಯಾಗಾದಿ ಕರ್ಮಗಳನ್ನನುಷ್ಠಿಸಿ ಇಲ್ಲಿ ಯಾವುದಾದರೂ ತನಗೆ ಪ್ರೀತಿಕರವಾದ, ಧನ, ಗೇಹಪುತ್ರಗಳನ್ನು ಪಡೆದರೆ, ಅದು ತತ್ಕಾಲದಲ್ಲಿ ಸುಖದಹಾಗೆ ತೋರಿದರೂ, ದುಃಖವೆಂಬ ವೃಕ್ಷಕ್ಕೆ ಬೀಜದೋಪಾದಿಯಲ್ಲಿ ಪರಿಣಮಿಸುತ್ತದೆಂಬ ಭಾವವು). ಅದೇ ವೇದದಲ್ಲೇ ಆಮುಷ್ಮಿಕವಾದ ಬ್ರಹ್ಮೇಂದ್ರಲೋಕ ಪ್ರಾಪ್ತಿಯನ್ನು ಪ್ರತಿಪಾದಿಸುವಭಾಗವು, ದುಃಖಮಿಶ್ರವಾದ ನಶ್ವರವಾದ ಐಹಿಕ ಸುಖರೂಪವಾದ ಫಲಕ್ಕಿಂತಲೂ ಸ್ವಲ್ಪ ವಿಲಕ್ಷಣವಾಗಿ ತುಂಬಾ ದುಃಖಮಿಶ್ರವಲ್ಲದ ಸುಖಪ್ರಾಪ್ತಿಯನ್ನುಂಟುಮಾಡುವುದರಿಂದ, ಕೆಲವರಿಗೆ ಇದು **ಸಾರವಾದ** ಭಾಗವೆಂದು ಹೇಳಬಹುದಾದರೂ ದುಃಖಮೂಲತ್ವವೇ ಮೊದಲಾದ ದೋಷಗಳಿಂದ ಕೂಡಿ ನಿಂದ್ಯವಾದುದಾದುದರಿಂದ, ಅದೂ ಗ್ರಾಹ್ಯವಲ್ಲವು. (ಸ್ವರ್ಗಾದಿ ಇತರ ಲೋಕಾನುಭವಗಳಿಗೆ **ದುಃಖಮೂಲತ್ವಾದಿ** ದೋಷಸಂಬಂಧ ಹೇಗೆಂದರೆ:—ಆ ಲೋಕಗಳ ಪ್ರಾಪ್ತಿಯು ತುಂಬಾ ಕ್ಲೇಶಪಟ್ಟು ನಡಿಸಿದ ಮಹಾಯಜ್ಞಯಾಗಾದಿಗಳ ಅನುಷ್ಠಾನದಿಂದ ಪ್ರಾಪ್ತವಾಗತಕ್ಕದ್ದು. ಒಂದು ವೇಳೆ ಪ್ರಾಪ್ತವಾದರೂ ಅದೂ ಅಸ್ಥಿರವಾದುದು. **"ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ"** (ಗೀತೆ 9. 21.) ಎಂದು ಹೇಳಿರುವದರಿಂದ ಆ ಸುಕೃತವು ಮುಗಿದನಂತರ ಭೂಲೋಕಕ್ಕೇ ಪುನಃ ಬರಬೇಕಾಗುತ್ತದೆ; ಮತ್ತು ಗೀತೆಯಲ್ಲೇ (1) **"ಆಬ್ರಹ್ಮ ಭುವನಾ ಲ್ಲೋಕಾಃ ಪುನರಾವರ್ತಿನೋ ಜರ್ಜುನ"** ಬ್ರಹ್ಮಲೋಕ ಮೊದಲಾದ ವೈಕುಂಠೇತರ ಲೋಕಗಳನ್ನು ಹೊಂದಿದರೂ ಪುನರಾವೃತ್ತಿಯುಂಟು" ಎಂದು ಹೇಳಲ್ಪಟ್ಟಿರುತ್ತದೆ.

(1) ಗೀತೆ. 8. 16.

ಆತ್ಮ, ತತ್ಪ್ರಾಪ್ತಿ, ತತ್ಸಾಧನ ಮಾತ್ರತ್ತೈ ಪ್ರತಿಪಾದಿಕ್ಕುಂ ಅಂಶಮುಂ ಸಾರತರಮಾ ಇರುನ್ದದೇ ಯಾಕಿಲುಂ ಅದಿಲು ಮತ್ಯಂತಾಶಯಿತ ಮಾನ ಪರಮಾತ್ಮಾನುಭವ ಸಾಪೇಕ್ಷರ್ಕು ಅನುಪಾದೇಯಂ.

ಹಾಗೆ ಈ ಲೋಕಗಳ ಸುಖವು ಅಸ್ಥಿರವಾದುದರಿಂದ ಪುನಃ ಮರ್ತ್ಯಲೋಕ ಪ್ರವೇಶಮಾಡುವ ಭಯವಿರುವದರಿಂದ ಇದಕ್ಕೆ ದುಃಖ ಮೂಲತ್ವ, ಅಸ್ಥಿರತ್ವ ಮೊದಲಾದ ದೋಷಗಳುಂಟು ಎಂಬ ಭಾವವು. **ದುಃಖಮೂಲತ್ವಾದಿ** ಎಂದು **ಆದಿ** ಶಬ್ದವನ್ನು ಪಯೋಗಿಸಿರುವದು ಅಸ್ಥಿರತ್ವ ಮೊದಲಾದವುಗಳನ್ನು ಸೂಚಿಸುವದಕ್ಕಾಗೆಂದು ಭಾವಿಸತಕ್ಕದ್ದು. (1) **"ಸ್ವರ್ಗೇಪಿ ಪಾತಭೀತಸ್ಯ ಕ್ಷಯಿಷ್ಣೋರ್ನಾಸ್ತಿ ನಿವೃತಿಃ"** ಸ್ವರ್ಗಾನುಭವದಲ್ಲಿರುವವನಿಗೂ ಕೂಡ ಸ್ವರ್ಗವಾಸವು ಮುಗಿದು ಹೋಗಿ ಎಲ್ಲಿ ಮರ್ತ್ಯಲೋಕಕ್ಕೆ ಬೀಳುತ್ತೇನೋ ಎಂಬ ಭಯದಿಂದ ಸುಖವಿಲ್ಲವೆಂದು ಹೇಳಿರುತ್ತದೆ. ಈ ಕಾರಣಗಳಿಂದ ಬ್ರಹ್ಮ ಇಂದ್ರಾದಿ ಲೋಕಗಳ ಪ್ರಾಪ್ತಿವಿಧಾನವನ್ನು ಹೇಳುವ ಭಾಗವೂ ನಮಗೆ ಗ್ರಾಹ್ಯವಲ್ಲವೆಂದು ಭಾವವು. **"ಶಿಲರ್ಕುಸಾರಮಾಯ್"** ಎಂದು ಶಿಲರ್ ಶಬ್ದವನ್ನು ಪಯೋಗಿಸಿರುವದರಭಿಪ್ರಾಯವು ಸಾರಾಸಾರ ವಿವೇಚನೆ ಮಾಡುವ ಯೋಗ್ಯತೆ ಇಲ್ಲದಿರುವರೀಗ ಹಾಗೆ ಸಾರವೆಂದು ಹೇಳಬಹುದು, ವಿವೇಕಿಯು ಹಾಗೆ ಹೇಳಲಾರನೆಂಬಭಿಪ್ರಾಯವು. ಇನ್ನು ಸಾರತರ ಭಾಗವೂಕೂಡ ಗ್ರಾಹ್ಯವಲ್ಲವೆಂದು ಹೇಳುತ್ತಾರೆ). ವೇದದ ಇನ್ನೂ ಕೆಲವು ಭಾಗವು, ಜೀವಾತ್ಮನ ಸ್ವರೂಪವನ್ನೂ, ಅಂತಹ ಆತ್ಮಾನುಭವರೂಪದ ಕೈವಲ್ಯ ಪ್ರಾಪ್ತಿಯನ್ನೂ ಪ್ರತಿಪಾದಿಸುವದರಿಂದ ಸಾರತರ ಭಾಗವೆಂದು ಹೇಳಿಸಿಕೊಂಡಿದ್ದರೂ, ಅದಕ್ಕಿಂತಲೂ ತುಂಬಾ ಅಮೋಘವಾದ ಪರಮಾತ್ಮಾನುಭವರೂಪ ಮೋಕ್ಷಾನಂದವನ್ನು ಬಯಸುವವರಿಗೆ, ಇದೂಕೂಡ ಗ್ರಾಹ್ಯವಾದುದಲ್ಲವು. (ಗೀತೆಯಲ್ಲಿ ೭ನೇ ಅಧ್ಯಾಯ ೧೬ನೇ ಶ್ಲೋಕವಾದ **"ಚತುರ್ವಿಧಾ ಭಜನ್ತೇಮಾಂ"**

(1) ವಿ. ಪು. 6. 5. 50.

ശ്രീമദ്രഹസ്യത്രയമേ ഉപാദേയം.

പരമാത്മ തത്പ്രാപ്തി തദുപായങ്ങളൈ വെളിയിടുമ്
പ്രദേശം സാരതമ മാക്കൈയാലേ വിവേകിക്കുപാദേയം.

ಎಂಬುವದರಲ್ಲಿ "ಜಿಜ್ಞಾಸು" ಎಂಬ ಪದದಿಂದ ಕೈವಲ್ಯಾರ್ಥಿಯು ಹೇಳಲ್ಪಟ್ಟನು. ಆ ಆತ್ಮಸ್ವರೂಪ, ಆತ್ಮಪ್ರಾಪ್ತಿ, ಅದಕ್ಕೆ ಬೇಕಾದ ಸಾಧನಗಳ ವಿಷಯವು ಗೀತೆಯ ೧೩, ೧೪ನೇ ಅಧ್ಯಾಯಗಳಲ್ಲಿ ಉಪಪಾದಿತವಾಗಿವೆ. ೧೫ನೇ ಅಧ್ಯಾಯದ ೬ನೇ ಶ್ಲೋಕವಾದ **"ಯದ್ಗತ್ವಾನನಿವರ್ತಂತೇ ತದ್ಧಾಮ ಪರಮಂ ಮಮ"** ಎಂಬುವದರಿಂದ ಆ ಕೈವಲ್ಯಕ್ಕೆ ಪುನರಾವರ್ತಿ ಇಲ್ಲವೆಂದು ಹೇಳಲ್ಪಟ್ಟಿತು. ಆ ಕೈವಲ್ಯಸ್ಥಾನವು ಎಲ್ಲಿ ಎಂಬಂಶವೂ ಅದಕ್ಕೆ ದೇಹಾವಸಾನಾನಂತರ ಜೀವನು ಹೋಗುವ ಮಾರ್ಗವ್ಯಾವುದು ಎಂಬ ಚರ್ಚೆಯೂ ಗೀತೆಯ ೮ನೇ ಅಧ್ಯಾಯ ೧೨-೧೩ನೇ ಶ್ಲೋಕಗಳಲ್ಲೂ, ಶ್ರೀ ಭಾಷ್ಯಕಾರರ ೨೨ನೇ ಶ್ಲೋಕದ ಭಾಷ್ಯದಲ್ಲೂ ವ್ಯಕ್ತಪಡುತ್ತದೆ. ಶ್ರೀ ಭಾಷ್ಯಕಾರರ ಭಾಷ್ಯದಲ್ಲಿ ಕೈವಲ್ಯಕ್ಕೆ ಹೋಗುವವನಿಗೂ ಅರ್ಚಿರಾದಿಗತಿಯೆಂದು ಸ್ಥಾಪಿಸುತ್ತಾರೆ. ಈ ಕೇವಲನಿಗೂ ಕೊನೆಗೆ ಪರಬ್ರಹ್ಮಾನುಭವರೂಪವಾದ ಮೋಕ್ಷಸುಖ ಉಂಟೆಂದು ಛಾಂದೋಗ್ಯದಲ್ಲಿ ಹೇಳಿದುತ್ತದೆ. ಆ ಕೈವಲ್ಯವೆಂಬ ಸ್ಥಳವೆಲ್ಲಿ ಎಂದರೆ (1) ವಿರಜಾನದಿ ಮತ್ತು ಪರಮ ಪದಗಳಿಗೆ ಹತ್ತಿರವಾದ ಸ್ಥಳವು. ಅದು ಪ್ರಕೃತಿ ಮಂಡಲಕ್ಕೆ ಸೇರಿದುದೇ ತದತಿರಿಕ್ತವಾದುದೇ ಎಂಬ ಚರ್ಚೆಯಲ್ಲಿ ಪ್ರಕೃತಿಮಂಡಲಾಂತರ್ಗತವಾದುದೆಂದು ಊಹಿಸಲ್ಪಟ್ಟಿರುತ್ತದೆ. ಈ ವಿಷಯಗಳೆಲ್ಲಾ ಶ್ರೀ ಮಹಾ ವಿದ್ವಾನ್ ತೂಪ್ಪುಲ್ ವೆಂಕಟಾಚಾರ್ ಸ್ವಾಮಿಗಳವರ **ಗೀತಾರ್ಥಸಾರದ** ೮ನೇ ಅಧ್ಯಾಯದ ೨೩ನೇ ಶ್ಲೋಕ ತಾತ್ಪರ್ಯದಲ್ಲಿ ಉಪಪಾದಿಸಲ್ಪಟ್ಟಿರುತ್ತದೆ).

---

(1) ವಿರಜಾ ನದಿಯು ನಿತ್ಯವಿಭೂತಿ ಲೀಲಾವಿಭೂತಿಗಳು ಸೇರುವ ಎಲ್ಲೆಯಲ್ಲಿದೆ ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆ.

ಶ್ರೀಮದ್ರಹಸ್ಯ ತ್ರಯವೇ ಪರಮ ಗ್ರಾಹ್ಯವಾದುದು.

ಪರಮಾತ್ಮನ ಸ್ವರೂಪವನ್ನೂ, ಆತನನ್ನು ಹೊಂದುವದರಿಂದುಂಟಾಗುವ ಕೈಂಕರ್ಯ ಮತ್ತು ನಿರತಿಶಯಾನಂದರೂಪ ಫಲಪ್ರಾಪ್ತಿಯನ್ನೂ, ಅದನ್ನು ಪಡೆಯಲು ಬೇಕಾದ ಉಪಾಯಗಳನ್ನೂ, ವ್ಯಕ್ತಪಡಿಸುವ ವೇದಭಾಗವು ಸಾರತಮವಾದುದರಿಂದ **ವಿವೇಕಿ**ಯಾದವನಿಗೆ ಅಂತಹ ಭಾಗವು ಗ್ರಾಹ್ಯವಾದುದು. (**ವಿವೇಕಿಯು** ಯಾರೆಂದರೆ :—ಜೀವಾತ್ಮ ಸ್ವರೂಪ, ಪರಮಾತ್ಮ ಸ್ವರೂಪ, ಇವುಗಳ ಯಾಥಾರ್ಥ್ಯವನ್ನೂ ವೈಲಕ್ಷಣ್ಯವನ್ನೂ ಪರಿಶೀಲಿಸಿ ಕೆಲವು ಧಾರ್ಮಿಕರ ಉಪದೇಶದ ಮೂಲಕ, ಹೇಯವಾದುದು ಯಾವುದು, **ಉಪಾದೇಯವಾದುದು** ಯಾವುದು, ಎಂದು ತಿಳಿದವನು. ಇಂತಹ **ಉಪಾದೇಯವಾದ** ಭಾಗವ್ಯಾವುದೆಂದರೆ :—ಉಪನಿಷತ್ತುಗಳು. ಇವುಗಳಲ್ಲಿ ಪರಮಾತ್ಮ ಸ್ವರೂಪವೂ, ತತ್ಪ್ರಾಪ್ತಿಯೂ, ತದುಪಾಯಗಳೂ ಉಪಪಾದಿತವಾಗಿವೆ. **ವಿವೇಕ** ಶಬ್ದಕ್ಕೆ ಇನ್ನೊಂದು ಅರ್ಥವೂ ಉಂಟು. ಸಾಧನ ಸಪ್ತಕಗಳಲ್ಲಿ ಒಂದು. ಜಾತಿ, ಕ್ರಿಯಾ, ಕಾಲ, ಸಂಸರ್ಗ, ಆಶ್ರಯ, ನಿಮಿತ್ತ ಕಾರಣಗಳಿಂದ ದುಷ್ಟವಾದ ಆಹಾರಗಳನ್ನು ಸ್ವೀಕರಿಸದೇ ಇರುವದು ವಿವೇಕವು. ಈ ಅರ್ಥವು ಇಲ್ಲಿ ಬೇಕಿಲ್ಲವು.) ಅಂತಹ ಉಪಾದೇಯವಾಗಿ ಸಾರತಮವಾದ ಉಪನಿಷದ್ಭಾಗದಲ್ಲೂ ಮುಖ್ಯವಾಗಿ ನಮ್ಮ ಸಿದ್ಧಾಂತಕ್ಕೇ ಅಸಾಧಾರಣವಾದ ತತ್ವವೇನು, ನಮಗೆ ಹಿತವಾದುದಾವುದು, ಎಂಬೀ ಅಂಶಗಳನ್ನು ಸಂಗ್ರಹವಾಗಿ (ಚಿಕ್ಕ ಕನ್ನಡಿಯು ದೊಡ್ಡ ವಸ್ತುಗಳನ್ನೂ ಪ್ರತಿಬಿಂಬ ರೂಪದಲ್ಲಿ ತೋರಿಸುವ ಹಾಗೆ) ವಿಶದೀಕರಿಸುವದರಿಂದ **ಮೂಲಮಂತ್ರ ದ್ವಯ ಚರಮ ಶ್ಲೋಕಗಳಾದ ರಹಸ್ಯತ್ರಯವು** ಅತ್ಯಂತ ಸಾರತಮವಾಗಿರುತ್ತದೆ. (**ತತ್ವ**ವ್ಯಾವುದೆಂದರೆ, ಸರ್ವಕಾರಣನಾಗಿ, ಸರ್ವರಕ್ಷಕನಾಗಿ ಸರ್ವಶೇಷಿಯಾಗಿರುವ ಲಕ್ಷ್ಮೀನಾರಾಯಣರಿಗೇನೆ ತಾನು (ಭಾಗವತರು ವಿನಾ) ಅನನ್ಯಾರ್ಹಶೇಷನು. **ಹಿತ**ವ್ಯಾವುದೆಂದರೆ ಅವರ ಪಾದಕಮಲಗಳಲ್ಲಿ ತನ್ನ ಆತ್ಮಾವನ್ನು ಸಮರ್ಪಿಸುವುದು. ಆತ್ಮಾತ್ಮೀಯಭರ ಸಮರ್ಪಣೆಯು. **ಪುರುಷಾರ್ಥ**

ಅವ್ವಂಶತ್ತಿಲುಂ ಪ್ರಧಾನ ಪ್ರತಿತಂತ್ರಂಗಳಾನ ತತ್ವಹಿತಂಗ ಳುಡೈಯುಯ ಸಂಗ್ರಹಮಾಕೈಯಾಲೆ ಮಿಗುವುಂ ಸಾರತಮ ಮಾಯಿರುಕ್ಕುಂ ರಹಸ್ಯತ್ರಯಂ.

ಅಕೈಯಾಲ್

(1) **ಬಹುಭ್ಯಶ್ಚ ಮಹದ್ಭ್ಯಶ್ಚ ಶಾಸ್ತ್ರೇಭ್ಯೋ ಮತಿಮಾನ್ನರಃ।**
ಸರ್ವತಸ್ಸಾರ ಮಾದದ್ಯಾತ್ ಪುಷ್ಪೇಭ್ಯ ಇವಷಟ್ಪದಃ ॥

ವ್ಯಾವುದೆಂದರೆ ಲಕ್ಷ್ಮೀನಾರಾಯಣರಿಗೆ ಸರ್ವವಿಧ ಕೈಂಕರ್ಯಗಳನ್ನು ಮಾಡುತ್ತಿರುವದು. ತತ್ವಹಿತ ಪುರುಷಾರ್ಥಗಳು ಮೂರನ್ನೂ ಸಂಗ್ರಹವಾಗಿ ರಹಸ್ಯತ್ರಯವು ಹೇಳುವಾಗ, ತತ್ವಹಿತ ಎರಡೇ ಏಕೆ ಹೇಳಲ್ಪಟ್ಟಿತೆಂದರೆ, ಹಿತಾನುಷ್ಠಾನ ಯಾವಾಗ ಉಂಟಾಯಿತೋ ಆಗ ಪುರುಷಾರ್ಥಸಿದ್ಧಿ ಎಂಬುದು ಸ್ವತಸಿದ್ಧವಾದುದು. ಆದುದರಿಂದ ಪುರುಷಾರ್ಥವು ಇಲ್ಲಿ ಹೇಳಲ್ಪಡಲಿಲ್ಲವು).

ಆದುದರಿಂದ **ಮತಿಮಾನ್** - ಸಾರಾಸಾರ ವಿವೇಚನೆ ಮಾಡುವ ವಿವೇಕವುಳ್ಳ, **ನರಃ** - ಮನುಷ್ಯನು, **ಬಹುಭ್ಯಶ್ಚ** - ಅನೇಕರಿಂದಲೂ, **ಮಹದ್ಭ್ಯಶ್ಚ** - ಮಹಾ ಭಾಗವತೋತ್ತಮರೆನಿಸಿದ ಆಚಾರ್ಯರಿಂದಲೂ, **ಶಾಸ್ತ್ರೇಭ್ಯಃ** - ಶಾಸ್ತ್ರಗಳಿಂದಲೂ, ಅಂದರೆ ಈ ಭಾಗವನ್ನುಪಪಾದಿಸುವ ಉಪನಿಷತ್ತು ಮೊದಲಾದವುಗಳಿಂದಲೂ, **ಸರ್ವತಃ** - ಹೀಗೆ ಎಲ್ಲಾ ಕಡೆಗಳಿಂದಲೂ, **ಷಟ್ಪದಃ** - ಭ್ರಮರವು, **ಪುಷ್ಪೇಭ್ಯ ಇವ** - ಪುಷ್ಪಗಳಿಂದ ಹೇಗೆ ಸಾರವತ್ತಾದ ಮಕರಂದವನ್ನು ಸಂಗ್ರಹಿಸುತ್ತದೋ ಹಾಗೆ, **ಸಾರಂ** - ಮುಖ್ಯವಾದ ಸಾರವತ್ತಾದ ಭಾಗವನ್ನೇ ಅಂದರೆ **ಸಾರತಮ** ಭಾಗವನ್ನೇ **ಆದದ್ಯಾತ್** - ತೆಗೆದುಕೊಳ್ಳತಕ್ಕದ್ದು, ಪರಿಗ್ರಹಿಸತಕ್ಕದ್ದು. (ಅನೇಕರೊಂದಿಗೆ ಅಧ್ಯಾತ್ಮ ವಿದ್ಯಾರೂಪ ಸಂಭಾಷಣೆ ಮೂಲಕವಾಗಿಯೂ, ಮಹನೀಯರಾದ ಆಚಾರ್ಯರ ಬ್ರಹ್ಮವಿದ್ಯಾ ವಿಷಯವಾದ ಉಪದೇಶ ಮೂಲಕವಾಗಿಯೂ, ಅಧ್ಯಾತ್ಮವಿದ್ಯಾ ಶಾಸ್ತ್ರ ಪರಿಚಯದಿಂದುಂಟಾದ ಜ್ಞಾನ ಮೂಲಕವಾ

ಭಾರ. ಶಾಂತಿ. 176. 66,

ಎನ್ನಿರಪಡಿಯೇ ರಹಸ್ಯತ್ರಯಂ ಮುಮುಕ್ಷುವಾನ ಇವ್ವಾತ್ಮಾವುಕ್ಕು ಮಿಕವು ಮುಪಾದೇಯ ಮಾಕಕ್ಕಡವದು.

ಗಿಯೂ, ಸಾರತಮವಾದುದನ್ನು ಸಂಗ್ರಹಿಸಬೇಕೆಂಬ ತಾತ್ಪರ್ಯವು. ಇದು ಭೀಷ್ಮರು ಯುಧಿಷ್ಠರನಿಗೆ ಉಪದೇಶ ಮಾಡುವ ಸಂದರ್ಭವಾಗಿರುತ್ತದೆ. ಪಿಂಗಳಾ, ಇಷುಕಾರ, ವೇಶ್ಯಾ, ಕುರರ ಪಕ್ಷಿ, ಸರ್ಪ, ಸಾರಂಗವೆಂಬ ಆರು ಪ್ರಾಣಿಗಳನ್ನು ನಮಗೆ ಗುರುಗಳಾಗಿ ಭಾವಿಸತಕ್ಕದ್ದೆಂದೂ, ಅವುಗಳು ಅಲ್ಪಗಳಾದರೂ ಅವುಗಳಿಂದ ಅಮೋಘವಾದ ಅಂಶಗಳನ್ನು ಗ್ರಹಿಸತಕ್ಕವುಗಳಿವೆ ಎಂದೂ, ಭೀಷ್ಮರು ಅಪ್ಪಣೆಕೊಡಿಸಿರುತ್ತಾರೆ. ಅಲ್ಲಿ,

"ಅಲ್ಪೇಭ್ಯಶ್ಚ ಮಹದ್ಭ್ಯಶ್ಚ ಶಾಸ್ತ್ರೇಭ್ಯೋ ಮತಿಮಾನ್ನರಃ"

ಎಂದು ಇರುತ್ತದೆ. ಅಲ್ಪವಾದ

'ಪಿಂಗಳಾ ಕುರರಃ ಸರ್ಪಃ ಸಾರಂಗಾ ನ್ವೇಷಣಂ ವನೇ ।
ಇಷುಕಾರಃ ಕುಮಾರೀಚ ಷಡೇತೇ ಗುರುವೋ ಮಮ"॥

ಎಂದು ಹೇಳಿರುವಮೇರಿಗೆ, ಈ ಆರರಿಂದಲೂ ಸಾರವನ್ನು ಗ್ರಹಿಸಬೇಕೆಂಬಭಿಪ್ರಾಯವು. ಆದರೆ ಸಾರಾಸ್ವಾದನೀ ವ್ಯಾಖ್ಯಾನದಲ್ಲಿ, **ಸರ್ವತಃ** ಎಂಬುವದಕ್ಕೆ ಅಧ್ಯಾತ್ಮ ವಿದ್ಯೆಯ ಎಲ್ಲಾ ಭಾಗಗಳಿಂದ, ಎಂದು ಬರೆದಿರುತ್ತಾರೆ. ಶ್ರೀಮಾನ್ ಶೆಟ್ಟಲೂರು ನರಸಿಂಹಾಚಾರ್ಯರವರು, **ಬಹುಭ್ಯಃ** ಮತ್ತು **ಮಹದ್ಭ್ಯಃ** ಎಂಬ ಪದಗಳನ್ನು **ಶಾಸ್ತ್ರೇಭ್ಯಃ** ಎಂಬ ಪದಕ್ಕೆ ವಿಶೇಷಣಗಳನ್ನಾಗಿಮಾಡಿ, ಅನೇಕವಾದ ಮತ್ತು ಮಹತ್ತಾದ ಶಾಸ್ತ್ರಗಳಿಂದಲೂ ಸಾರವನ್ನು ಗ್ರಹಿಸತಕ್ಕದೆಂದು ಬರೆದಿರುತ್ತಾರೆ. ವೇದಶಾಸ್ತ್ರವೇ ಶಾಸ್ತ್ರವಾದುದರಿಂದಲೂ, ಇಂತಹ ಶಾಸ್ತ್ರಗಳನ್ನು ತಾವೇ ಗುರುಮುಖೇನ ಪಠನಮಾಡಿ ಅರ್ಥ ಸ್ವಾರಸ್ಯ ಗ್ರಹಿಸುವದರಿಂದಲೂ ಆ ವಿಷಯವಾಗಿ ಮಾಡುವ ಅನೇಕ ಮಹನೀಯರ ಸಂಭಾಷಣೆಗಳಿಂದಲೂ, ಮತ್ತು ಮಹನೀಯರಾದ ಆಚಾರ್ಯೋಪದೇಶದಿಂದಲೂ ಸಾರವನ್ನು ಗ್ರಹಿಸತಕ್ಕದ್ದೆಂಬ ಅಭಿಪ್ರಾಯವು ಇಲ್ಲಿ ತೋರಿಬರುತ್ತದೆ. ಮೇಲೆ ಹೇಳಿದ **ಪಿಂಗಳಾ** ವೇ

ಅನ್ಮೈಯೂದಿ (ವಿ) ನ್ಮೈಯೆನ್ನು ಮೂಶ್ಶೈಯಿನಾಲರು ಮೂನ್ರು ಲಕಿಲ್ । ಶುನ್ಮೈಯೂನ ಕಲ್ವಿಗಳ್ ಶೂಳವನ್ತಾಲುನ್ ತೊಕೈಯಿನ್ಮೈಯೆನ್ । ನ್ಮೈಯೂಯಿನ್ಮೈಯವರೇತ್ತಿಯ ನೆಟ್ಟರ ಣ್ಡೆಣ್ಣಿಯ ನಮ್ । ಶಮೆಯೂ ಶಿರಿಯರ್ ಶದಿರ್ಕ್ಕನ್ತನಿ ನಿಲೈತನ್ದನರೇ ॥ ೯

ಲಾದ ಉಪಾಖ್ಯಾನವು ಭಾಗವತ ೧೧ನೇ ಸ್ಕಂದದಲ್ಲೂ ಉಪಪಾದಿತವಾಗಿರುತ್ತದೆ.

ಮೇಲೆ ಹೇಳಿರುವ ಹಾಗೆ, ಮೋಕ್ಷಾರ್ಥಿಯಾದ ಜೀವಾತ್ಮನಿಗೆ ಈ ರಹಸ್ಯತ್ರಯವು ಎಲ್ಲಾದಕ್ಕಿಂತಲೂ ಹೆಚ್ಚಾಗಿ ಗ್ರಾಹ್ಯವಾದುದು. (ಅಂದರೆ ಈ ಮೂರು ರಹಸ್ಯಗಳಿಗಿಂತಲೂ ಗ್ರಾಹ್ಯವಾದದ್ದು ಬೇರೇ ಇಲ್ಲವೆಂಬಭಿಪ್ರಾಯವು.

ಅವತಾರಿಕೆ.—ಶ್ರುತಿಗಳಲ್ಲಿ ಉಪನಿಷದ್ಭಾಗಗಳೇ ತುಂಬಾ ಸಾರವತ್ತಾಗಿದ್ದರೂ, ಅವುಗಳಲ್ಲೂ ಈ ಮೂರು ರಹಸ್ಯತ್ರಯಗಳ ವಿಷಯಿಕವಾದ ಭಾಗಗಳೇ ತುಂಬಾ ಸಾರತಮವಾದುದೆಂದು ಈ ಅಧಿಕಾರದಲ್ಲಿ ವಿಶದವಾಗಿ ನಿಷ್ಕರ್ಷಿಸಿದ ವಿಷಯವನ್ನು ಒಂದು ಪಾಶುರದಿಂದ ಸಂಗ್ರಹಿಸುತ್ತಾರೆ. ಹಾಗೆ ಸಂಗ್ರಹಿಸುವ ಸಂದರ್ಭದಲ್ಲಿ ಆ ಸಾರತಮವಾದ ಭಾಗವು ಪರಮ ಭಾಗವತೋತ್ತಮರಾದ ಪೂರ್ವಾಚಾರ್ಯರುಗಳಿಂದ ಹಾಗೆ ಪರಿಗೃಹೀತವಾದುದಾದರೆ ಆಗ ಅದು ಶಿಷ್ಟ ಪರಿಗ್ರಹವಾದುದಾಗಿ, ನಿಸ್ಸಂದೇಹವಾಗಿಯೂ ಸಾರತಮವೆಂಬುವದು ಸ್ಥಾಪಿತವಾದುದಾಗುತ್ತದೆಂದು ಯೋಚಿಸಿ, ಈ ಕಾರಣದಿಂದಲೂ ಅವು ತುಂಬಾ ಉಪಾದೇಯವೆಂದು ಹೇಳುತ್ತಾರೆ. ಹಾಗೆಯೇ ಶ್ರೀಕೃಷ್ಣನೂ ತಾನು ಅರ್ಜುನನಿಗೆ ಉಪದೇಶಿಸಿದುದೆಲ್ಲಾ ಮಹಾಭಾಗವತ ಪರಿಗ್ರಹವಾದರೇನೇ ಅದಕ್ಕೆ ಮಾಹಾತ್ಮ್ಯೆಯುಂಟಾಗುತ್ತೆಂದುಯೋಚಿಸಿ ಶ್ರೀ ಭೀಷ್ಮಾಚಾರ್ಯರು ಶರತಲ್ಪದಲ್ಲಿ ಆ ಅಂಶಗಳನ್ನೇ ಯುಧಿಷ್ಠಿರ ಪ್ರಭೃತಿಗಳಿಗೆ ಉಪದೇಶಿಸುವ ಹಾಗೆ ಮಾಡಿದನಷ್ಟೆ.

ಅರ್ಥ.—ಇನ್ನೈ - ನಮ್ಮಿಂದ ಅಧಿಕರಿಸಲ್ಪಟ್ಟ ಈ ವಿದ್ಯೆಗಳು **ಅಮೈಯಾದು** - ಸಾಲದು, **ಎನ್ನು** - ಎಂಬದಾಗಿ (ಇನ್ನೂ ಕಲಿಯ ಬೇಕೆಂಬ) **ಆಶೈಯಿನಾಲ್** - ಅಭಿಲಾಷೆಯಿಂದ, **ಉಲಕಿಲ್** - ಲೋಕದ ಜನರಿಗೆ, **ಶುಮೈಯಾನ** - ಭಾರವಾದ ಅಂದರೆ ನಿಷ್ಫಲಗಳಾದ, (1) **ಅರುಮೂನ್ರು** - ಆರುಮೂರು ಅಂದರೆ ಹದಿನೆಂಟು, **ಕಲ್ವಿಕಳ್** - ವಿದ್ಯೆಗಳು, **ಶೂಳವನ್ದಾಲುಂ** - ಸಂಪೂರ್ಣವಾಗಿ ಬಂದರೂ ಅಂದರೆ ತಾನೇ ಸಂಪೂರ್ಣವಾಗಿ ಪ್ರಾಪ್ತವಾದರೂ, **ಇವೈ** - ಈ ಹದಿನೆಂಟು ವಿದ್ಯೆಗಳೂ, **ಶೋಕ್ಕೈ** - ತುಕ್ಕೈ, ಸಂಖ್ಯಾಪೂರ್ಣಗಳೇ ವಿನಾ ಬೇರಲ್ಲವು. ಅವು ಅಷ್ಟೂ ಬರೀ ಲೆಖ್ಖಕ್ಕೇ ವಿನಾ ಅವುಗಳಿಂದೇನೂ ಪ್ರಯೋಜನವಿಲ್ಲವೆಂಬ ಭಾವವು. **ಇಮೈಯಾ** - ಕಣ್ಣುರೆಪ್ಪೆಯಾಡಿಸದೇ ಇರುವ ಅನಿಮಿಷರಾದ, **ಇಮೈಯವರ್** - ದೇವತೆಗಳು, **ಏತ್ತಿಯ** - ಸ್ತೋತ್ರಮಾಡಿದ, **ಎಟ್ಟು** - ಅಷ್ಟಾಕ್ಷರ ಉಳ್ಳ ಮೂಲ ಮಂತ್ರವನ್ನೂ, **ಇರಂಡು** - ಮಿಕ್ಕ ಇನ್ನೆರಡಾದ ಮಂತ್ರರತ್ನವೆನಿಸಿದ ದ್ವಯಮಂತ್ರ ಮತ್ತು ಚರಮ ಶೋಕಗಳನ್ನು, ಅಥವಾ ಇರಂಡು ಅಂದರೆ ದ್ವಯಮಂತ್ರವನ್ನೂ (ದ್ವಯವನ್ನು ಹೇಳಿದುದರಿಂದ ಅದರ ಉಪಪಾದನ ರೂಪವಾದ ಚರಮ ಶ್ಲೋಕವು ಹೇಳಲ್ಪಟ್ಟಿತೆಂದು ಭಾವಿಸಬಹುದು. ಇವೆರಡರ್ಥಗಳಲ್ಲಿ ಮೊದಲಿನ ಅರ್ಥವೇ ಸಮಂಜಸವಾಗಿ ತೋರುತ್ತದೆ.) **ಎಣ್ಣಿಯ** - ಜಪರೂಪದಲ್ಲಿ ಎಣಿಸುತ್ತಿರುವ, **ನಮ್ ಶಮೈಯಾ ಶಿರಿಯರ್**- ನಮ್ಮ ಸಿದ್ಧಾಂತ ಪ್ರವರ್ತಕರಾದ ಆಚಾರ್ಯರುಗಳು, **ಶತಿರ್ಕ್ಕುಂ** - ಚತುರವಾದ ಅಥವಾ ಸಾಮರ್ಥ್ಯವುಳ್ಳ ಅಂದರೆ ಅಲ್ಪಾಯಾಸದಿಂದ ಸರ್ವಾಭೀಷ್ಟವನ್ನು ಕೊಡುವ, **ತನಿನಿಲೈ** - ಅದ್ವಿತೀಯವಾದ ಸ್ಥಿತಿಯನ್ನು, (ಅದ್ವಿತೀಯ ಸ್ಥಿತಿ ಯಾವುದೆಂದರೆ, ಅಸಾರವಾದವುಗಳನ್ನು ಕಣ್ಣೆತ್ತಿ ನೋಡದೆ

(1) ಹದಿನೆಂಟು ವಿದ್ಯೆಗಳು ಯಾವುವೆಂದರೆ :—4 ವೇದಗಳು, 4 ಉಪವೇದಗಳು 6 ವೇದಾಂಗಗಳು, ಮೀಮಾಂಸಾ, ನ್ಯಾಯಶಾಸ್ತ್ರ ಪುರಾಣ, ಧರ್ಮಶಾಸ್ತ್ರ. ಉಪವೇದಗಳನ್ನು ಬೇರೆಯಾಗಿ ಎಣಿಸುವದರಿಂದ 18 ಆಗುತ್ತದೆ. ಎಣಿಸದಿದ್ದರೆ 14 ವಿದ್ಯಗಳಾಗುತ್ತವೆ. ಚತುರ್ದಶ ಶಾಸ್ತ್ರಗಳೆಂಬದಾಗಿ ಪ್ರಯೋ ಉಂಟು.

ಸಾರತಮವನ್ನೇ ಗ್ರಹಿಸುವ ಸಾಮರ್ಥ್ಯ) **ತನ್ತನರೆ** - ನಮಗೆ ಕೃಪೆ ಯಿಂದಲೂ ಉಪದೇಶಮೂಲಕವಾಗಿಯೂ ಕೊಟ್ಟಿದ್ದಾರಷ್ಟೆ.

ತಾತ್ಪರ್ಯ.—ಮನುಷ್ಯನು ಸಾರಾಸಾರ ವಿವೇಚನೆಯಿಲ್ಲದವ ನಾಗಿ ತಾನು ಕಲಿತಿರುವ ವಿದ್ಯೆಗಳು ಸಾಲದು, ಇನ್ನೂ ಇನ್ನೂ ಕಲಿಯಬೇಕೆಂಬದಾಗಿ ಯತ್ನಿಸಿ, ೧೮ ಶಾಸ್ತ್ರಗಳನ್ನೂ ಕಲಿಯುವನು, ಅವು ಹೆಮ್ಮೆಯಿಂದ ಲೆಖ್ಖಕ್ಕಾಗಿ ೧೮ ಎಂದು ಹೇಳಿಕೊಳ್ಳುವು ದಕ್ಕೆ ಅನುಕೂಲಿಸುವವುಗಳೇ ವಿನಾ ಬೇರೆಯಲ್ಲವು. ಶಾಸನಾತ್ ಶಾಸ್ತ್ರಂ ಎಂಬ ವ್ಯುತ್ಪತ್ತಿಯಿಂದ ಶಾಸ್ತ್ರವೆಂದರೆ ಮುಖ್ಯವಾಗಿ ವೇದ ಗಳೆಂಬದಾಗಿ ಅಭಿಪ್ರಾಯವಿರುವಲ್ಲಿ, ವೇದಗಳೂ ಕೂಡ ನಿಷ್ಫಲವಾ ದವುಗಳೆಂದು ಹೇಳಿರುವದು, ಅರ್ಥಗಳನ್ನು ಪರಿಶೀಲನೆ ಮಾಡಿ ಸಾರಾಸಾರ ವಿವೇಚನೆ ಮಾಡಲು ಶಕ್ತಿಯಿಲ್ಲದವನಿಗೆ ಹೇಳಿದ ಮಾತಾ ಗಿರುತ್ತದೆ. ಹಿಂದೆ "**ಸರ್ವತಸ್ಸಾರಮಾದದ್ಯಾತ್**" ಎಂದು ಹೇಳಿದ ಹಾಗೆ, ಅಂತಹ ಶಕ್ತಿಯನ್ನು ಹೊಂದಿದವನನ್ನು ಕುರಿತು ಹೇಳಿದ ಮಾತಲ್ಲವು. ಅಂತಹ ಜ್ಞಾನ ಸಂಪಾದಿಸಿ ತದನುಸಾರವಾದ ಪ್ರವೃತ್ತಿ ಇಲ್ಲದವನ ಶಾಸ್ತ್ರಜ್ಞಾನವೂ ಶುನಪುಚ್ಛದ (ನಾಯಿಯ ಬಾಲದ) ಹಾಗೆ ನಿರರ್ಥಕವೆಂಬ ಭಾವವು. ಆದುದರಿಂದ ಈ ಶಾಸ್ತ್ರಗ ಳೆಲ್ಲಾ ಬರೀ ಭಾರವೆಂದು ಹೇಳಿದುದು. (1) ಅರ್ಥಸ್ವಾರಸ್ಯಗ್ರ ಹಣಶಕ್ತಿ ಇಲ್ಲದ ಶಾಸ್ತ್ರಪರಿಚಯ ಮಾಡುವವನನ್ನೂ (2) ಅರ್ಥ ಸ್ವಾರಸ್ಯಗ್ರಹಿಸಿಯೂ ಅನುಷ್ಠಾನಶೂನ್ಯನನ್ನು ಕುರಿತು ಹೇಳಿದ ಮಾತಾಗಿರುತ್ತದೆ. ಈ ಅಭಿಪ್ರಾಯವನ್ನೇ ಮುಂದಿನ ಶ್ಲೋಕಗಳು ಉಪಪಾದಿಸುತ್ತವೆ :—

" ತತ್ಕರ್ಮ ಯನ್ನ ಬಂಧಾಯ ಸಾ ವಿದ್ಯಾಯಾ ವಿಮುಕ್ತಯೇ ।
ಆಯಾಸಾಯಾ ಪರಂ ಕರ್ಮ ವಿದ್ಯಾನ್ಯಾ ಶಿಲ್ಪನೈಪುಣಂ ।
ಚತುರ್ವೇದ್ಯಪಿ ಯೋವಿಪ್ರೋ ವಾಸುದೇವಂ ನವಿಂದತಿ ।
ವೇದಭಾರ ಭರಾಕ್ರಾಂತ ಸ್ಸವೈ ಬ್ರಾಹ್ಮಣ ಗರ್ದಭಃ ॥"

"ಯಾವ ಕರ್ಮವು ಸಂಸಾರ ಬಂಧದಿಂದ ಬಿಡಿಸಲು ಯೋಗ್ಯವಾದುದೋ ಅದೇ ಸರಿಯಾದ ಕರ್ಮವು. ಯಾವವಿದ್ಯೆಯು ಮುಕ್ತಿಯನ್ನು ಕೊಡಲು ಸಾಧಕವೋ ಅದೇ ಉತ್ತಮ ವಿದ್ಯೆಯು. ಮಿಕ್ಕ ಎಲ್ಲಾ ಕರ್ಮವೂ ಬರೀ ಆಯಾಸಕ್ಕೆ ಕಾರಣವಾದುದರಿಂದ ನಿಷ್ಪ್ರಯೋಜನವಾದುವು. ಹಾಗೆಯೇ ಬ್ರಹ್ಮವಿದ್ಯೆಗಿಂತ ಇತರ ಎಲ್ಲಾ ವಿದ್ಯೆಗಳೂ ಬರೀ ಶಿಲ್ಪದಲ್ಲಿ ನಿಪುಣತೆಯನ್ನುಂಟುಮಾಡುವವೇ ವಿನಾ ಮಹಾ ಪುರುಷಾರ್ಥವನ್ನು ಕೊಡಲಾರವಾದುದರಿಂದ ನಿರರ್ಥಕವಾದುವುಗಳು. ಯಾವ ಬ್ರಾಹ್ಮಣನು ನಾಲ್ಕು ವೇದಗಳ ಅಧ್ಯಾಯಿಯಾಗಿದ್ದರೂ ವಾಸುದೇವನನ್ನು ಸಾಕ್ಷಾತ್ಕರಿಸುವದಿಲ್ಲವೋ ಆತನು ಸುಮ್ಮನೇ ವೇದಗಳ ಹೊರೆಯನ್ನು ಹೊತ್ತು ಬಳಲಿದವನು, ಅವನೀಗ ವೇದಗಳ ಹೊರೆಯನ್ನು ಹೊರುವ ಬ್ರಾಹ್ಮಣ ಕತ್ತೆಯಷ್ಟೆ." ಹೀಗೆ ಪ್ರಮಾಣಗಳಿರುವದರಿಂದ ಅಂತಹ ಶಾಸ್ತ್ರಗಳ ಪರಿಚಯವು ಈತನಿಗೆ ವೃಥಾಯಾಸವನ್ನುಂಟುಮಾಡುವವೆಂಬಭಿಪ್ರಾಯವು. ಮತ್ತೆ ಯಾವುದು ಸಾರ್ಥಕವಾದುದೆಂದರೆ ಉತ್ತರಾರ್ಧದಿಂದ ಹೇಳುತ್ತಾರೆ. ಶ್ರೀಮದಷ್ಟಾಕ್ಷರ ಮಂತ್ರವೂ, ಮಂತ್ರರತ್ನವೆನಿಸುವ ದ್ವಯಮಂತ್ರವೂ, ಚರಮಶ್ಲೋಕವೂ, ಇವು ಮೂರರ ಅರ್ಥಸ್ವಾರಸ್ಯವೂ ಮತ್ತು ಉಪಾಸನೆಯೂ ಸಹ ಶಾಸ್ತ್ರಗಳಲ್ಲೆಲ್ಲಾ ತುಂಬಾ ಸಾರತಮವಾದುದಾಗಿಯೂ ಪರಮ ಪುರುಷಾರ್ಥದಾಯಕವಾಗಿಯೂ ಶಾಸ್ತ್ರಗಳಲ್ಲಿ ಪ್ರತಿಪಾದಿತವಾಗಿರುವದಲ್ಲದೆ, ಅಂತಹ ಶಕ್ತಿಯುಳ್ಳವುಗಳಾಗಿ ನಿತ್ಯಸೂರಿಗಳಿಂದಲೂ ದೇವತೆಗಳಿಂದಲೂ ಸ್ತುತಿಸಲ್ಪಟ್ಟಿರುತ್ತದೆ. ಅದೂ ಅಲ್ಲದೆ, ಪೂರ್ವಾಚಾರ್ಯರುಗಳಾದ ನಮ್ಮಾಳ್ವಾರ್ ನಾಥಮುನಿ, ಯಾಮುನಮುನಿ, ಶ್ರೀ ಭಾಷ್ಯಕಾರ್ ಪ್ರಭೃತಿಗಳು ಇವು ತುಂಬಾ ಉಪಾದೇಯವೆಂದು ತೋರಿಸಿರುವದರಿಂದ ಮಹಾಭಾಗವತ ಪರಿಗ್ರಹರೂಪವಾದ ಮಾಹಾತ್ಮ್ಯೆಯು ಇವುಗಳಿಗೆ ಉಂಟಾಗಿ, ಅಂತಹ ಅಮೋಘವಾದ ಸಾರತಮ ಭಾಗವು ಉಪಾಯದೇಯವೆಂದು ಭಾವಿಸುವ ಸಾಮರ್ಥ್ಯವನ್ನು ಆ ಮಹಾನುಭಾವರು ನಮಗೆ ಗ್ರಂಥಮೂಲಕವಾಗಿಯೂ, ಉಪದೇಶಮೂಲಕವಾಗಿಯೂ, ಕೃಪೆಗೈದಿರುತ್ತಾರಾ

ಶಾಖಾನಾಮುಪರಿ ಸ್ಥಿತೇನ ಮನುನಾ ಮೂಲೇನ ಲಬ್ಧಾತ್ಮಕ ಸ್ಸತ್ತಾ ಹೇತು ಸಕೃಜ್ಜಪೇನ ಸಕಲಂ ಕಾಲಂ ದ್ವಯೇನಕ್ಷಿಪನ್

ದುದರಿಂದ, ಈ ರಹಸ್ಯತ್ರಯವೇ ಮಹಾ ಸಾರವತ್ತಾಗಿ ಹೆಚ್ಚಾಗಿ ಉಪಾಧೇಯವಾಗಿರುವದು. ಇವುಗಳೇ ರತ್ನಗಳು. ಮಿಕ್ಕೆಲ್ಲವೂ ನಿಷ್ಪ್ರಯೋಜನವಾದುವು ಎಂಬ ಭಾವವು.

ಅವತಾರಿಕೆ.—ಮೇಲೆ ಹೇಳಿದ ಹಾಗೆ ಸರ್ವೋತ್ಕೃಷ್ಟವಾದ ಈ ಮೂರು ರಹಸ್ಯಗಳಲ್ಲೂ ನಿಷ್ಠನಾದ ಮನುಷ್ಯನ ಮಾಹಾತ್ಮ್ಯೆ ಯನ್ನು ಇದರಿಂದ ವ್ಯಕ್ತಪಡಿಸುತ್ತಾರೆ. ಅದರೊಂದಿಗೆ ಅಧ್ಯಾತ್ಮ ಶಾಸ್ತ್ರದ ಪೂರಾ ಪರಿಚಯವಿಲ್ಲದೆ ಬರೀ ಮೂರು ರಹಸ್ಯಗಳ ಜ್ಞಾನ ಮತ್ತು ಅನುಷ್ಠಾನವೇ ಸಾಕೇ, ಮತ್ತು ಈ ಮೂರು ರಹಸ್ಯಗಳ ನಿಷ್ಠೆಯೂ ಅವಶ್ಯಕವೇ, ಇಲ್ಲವೆ ಅವುಗಳಲ್ಲ್ಯಾವದಾವರೂ ಒಂದೇ ಸಾಕೇ, ಎಂಬ ಅಂಶಗಳಿಗೂ ಸಮಾಧಾನ ತಿಳಿಸುತ್ತಾರೆ. ಇವು ಮೂರೂ ಅವಶ್ಯಕವೆಂಬುದಾಗಿಯೂ ಅವುಗಳ ನಿಷ್ಠೆಯೇ ಸಾಕೆಂಬ ದಾಗಿಯೂ ಅಪ್ಪಣೆಕೊಡಿಸಿರುತ್ತಾರೆ. ಅಂತಹ ಅನುಷ್ಠಾನದಿಂದ ಮಾಹಾತ್ಮ್ಯೆಯನ್ನು ಸಂಪಾದಿಸಿಕೊಂಡವರಲ್ಲಿ ಅಗ್ರೇಸರರು "ನಾಥ" ಶಬ್ದದಿಂದ ಶ್ರೀಮನ್ನಾಥಮುನಿಗಳೂ ತತ್ಸಂಬಂಧಿಗಳಾದ ಅವರ ಶಿಷ್ಯಪ್ರಶಿಷ್ಯರಾದ ಆಳವಂದಾರ್ರು ಮತ್ತು ಶ್ರೀ ಭಾಷ್ಯಕಾರರು ಎಂಬ ಧನ್ವ್ಯರ್ಥವೂ ತೋರಿಬರುತ್ತದೆ.

ಅರ್ಥ.—ಶಾಖಾನಾಂ - ವೇದಶಾಖೆಗಳ, **ಉಪರಿ** - ಮೇಲ್ಭಾಗವಾದ ಉಪನಿಷತ್ತಿನಲ್ಲಿ ಅಂದರೆ ಆಥರ್ವಣ ಕಠಾದ್ಯುಪನಿಷತ್ತುಗಳಲ್ಲಿ, **ಸ್ಥಿತೇನ** - ಪ್ರಸಿದ್ಧವಾಗಿರುವ, **ಮೂಲೇನಮನುನಾ** - ಮೂಲ ಮಂತ್ರವಾದ ಶ್ರೀಮದಷ್ಟಾಕ್ಷರ ಮಹಾ ಮಂತ್ರದಿಂದ, **ಲಬ್ಧಾತ್ಮಕಃ** - ಹೊಂದಲ್ಪಟ್ಟ ಸ್ವರೂಪ ಜ್ಞಾನ ಉಳ್ಳವನಾಗಿ ಅಂದರೆ ತಾನು ಪರಮಾತ್ಮನಿಗೆ ಶೇಷಭೂತನು, ಇದೇ ಜೀವಾತ್ಮನ ಸ್ವರೂಪವೆಂದು ತಿಳಿದವನಾಗಿ, **"ಸತ್ತಾಹೇತು ಸಕೃಜ್ಜಪೇನ"** ಸತ್ತಾ - ಭಗವ

ವೇದೋತ್ತಂಸ ವಿಹಾರ ಸಾರಥಿದಯಾ (ಗಿರಾಂ) ಗುಂಭೇನ ವಿಸ್ರಂಭಿತ । ಸಾರಜ್ಞೋ ಯದಿ ಕಶ್ಚಿದಸ್ತಿ ಭುವನೇ ನಾಥ ಸ್ಸಯೂಥಸ್ಯ (ಸ್ಸ) ನಃ ॥

ಇತಿ ಶ್ರೀಕವಿತಾರ್ಕಿಕ ಸಿಂಹಸ್ಯ ಸರ್ವತಂತ್ರ ಸ್ವತಂತ್ರಸ್ಯ ಶ್ರೀಮದ್ವೇಂಕಟನಾಥಸ್ಯ ವೇದಾಂತಚಾರ್ಯಸ್ಯ ಕೃತಿಷು ಶ್ರೀಮದ್ರಹಸ್ಯತ್ರಯಸಾರೇ ಸಾರನಿಷ್ಕರ್ಷಾಧಿಕಾರ ದ್ವಿತೀಯಃ ಶ್ರೀಮತೇ ನಿಗಮಾಂತ ಮಹಾದೇಶಿಕಾಯನಮಃ

ತ್ಪ್ರಾಪ್ತಿ, ಭಗವದನುಭವ, ಭಗವತ್ಕೈಂಕರ್ಯಪ್ರಾಪ್ತಿಗಳ ಸ್ಥಿತಿಗೆ, ಹೇತು - ಕಾರಣಭೂತವಾದ, ಸಕೃಜ್ಜಪೇನ - ಒಂದಾವರ್ತಿಯ ಉಚ್ಚಾರವುಳ್ಳ, ದ್ವಯೇನ - ಶರಣಾಗತಿ ಮಂತ್ರವಾದ ದ್ವಯಮಂತ್ರದಿಂದ ಅಂದರೆ ದ್ವಯಮಂತ್ರೋಚ್ಚಾರಣೆಯಿಂದ, **ಸಕಲಂಕಾಲಂ** - ನಿತ್ಯನೈಮಿತ್ತಿಕಾನುಷ್ಠಾನ, ಆಶ್ರಮ ಧರ್ಮಕ್ಕನುಗುಣವಾದ ವ್ಯಾಪಾರ, ಧನಾರ್ಜನೆ, ಆಹಾರ ಶಯನಾದಿ ದೇಹಯಾತ್ರೆ ಮುಂತಾದವುಗಳಿಗೆ ಬೇಕಾದ ಕಾಲವಿನಾ ಮಿಕ್ಕ ಸರ್ವಕಾಲವನ್ನೆಲ್ಲಾ, **ಕ್ಷಿಪೇತ್** - ಕಳೆಯುವನಾಗಿ, **ವೇದೋತ್ತಂಸ ವಿಹಾರಸಾರಥಿದಯಾ ಗುಂಭೇನ, ವೇದೋತ್ತಂಸ**- ವೇದಗಳಿಗೆ ಶಿರೋಭೂಷಣನಾದ, **ವಿಹಾರಸಾರಥಿ** - ಲೀಲಾಸಾರಥಿಯಾದ ಶ್ರೀ ಕೃಷ್ಣನ, (ಕರ್ಮವಶ್ಯತೆಯಿಂದಲ್ಲದೆ ತನ್ನ ಲೀಲಾ ಸಂಕಲ್ಪಮಾತ್ರದಿಂದಲೇ ಶ್ರೀ ಕೃಷ್ಣನು ಅರ್ಜುನನಿಗೆ ಸಾರಥಿಯಾದನೆಂಬಭಾವವು.) **ದಯಾ** - ದಯಾರೂಪವಾದ ಚರಮಶ್ಲೋಕದ, **ಗುಂಭೇನ** - ಮಹತ್ವದ ಆಧಿಕ್ಯದಿಂದ, ಅಥವಾ, **ವೇದೋತ್ತಂಸ ವಿಹಾರ ಸಾರಥಿ** - ವೇದಗಳಿಗೆ ಅಲಂಕಾರರೂಪನಾಗಿಯೂ ಲೀಲಾಸಾರಥಿಯಾಗಿಯೂ ಇರುವ ಶ್ರೀ ಕೃಷ್ಣನ, ಅಥವಾ, **ವೇದೋತ್ತಂಸ** - ವೇದಗಳಿಗೆ ಅಲಂಕಾರಪ್ರಾಯವಾದ ಉಪನಿಷತ್ತುಗಳಲ್ಲಿ, **ವಿಹಾರ** - ವಿಹಾರವುಳ್ಳ ಅಂದರೆ ಪ್ರತಿಪಾದಿಸಲ್ಪಟ್ಟ, **ಸಾರಥಿ ದಯಾ ಗುಂಭೇನ** - ಸಾರಥಿಯಾದ ಶ್ರೀ ಕೃಷ್ಣನ ಚರಮ ಶ್ಲೋಕ ಮಹತ್ತಿನಿಂದ, ಎಂದೂ ಅರ್ಥ ಹೇಳಬಹುದು. **ಸಾರಥಿಗಿರಾಂ ಗುಂಭೇನ** ಎಂಬುವದು ಪಾಠಾಂತರವು, ಆಗ **ಸಾರಥಿಗಿರಾಂ** - ಸಾರಥಿಯಾದ ಶ್ರೀ ಕೃಷ್ಣನ

ವಾಕ್ಕುಗಳಾದ ಚರಮ ಶ್ಲೋಕದ, **ಗುಂಭೇನ** - ಮಹತ್ತ್ವದಿಂದ ಎಂಬರ್ಥವು, ಆ ಚರಮ ಶ್ಲೋಕದ ಪ್ರಭಾವದಿಂದ, **ವಿಸ್ರಂಭಿತಃ** - ವಿಶ್ವಾಸವನ್ನು ಹೊಂದಿದವನಾಗಿ, (ಸ್ವಾಮಿಯು ಅಳಬೇಡ, ನಿನ್ನ ಪಾಪಗಳ ಬಂಧನದಿಂದ ಬಿಡಿಸುವೆನು ಎಂದು ಹೇಳಿದ ವಾಕ್ಯದಲ್ಲಿ ಮಹಾ ವಿಶ್ವಾಸವೆಂದರೆ ತುಂಬಾ ನಂಬಿಕೆಯನ್ನಿಡುವನಾಗಿ ಎಂದರ್ಥವು.) **ಸಾರಜ್ಞಃ** - ಇಂತಹ ಈ ಮೂರರ ಮಹಿಮೆಯನ್ನು ಗ್ರಹಿಸಿ ಆದರಿಂದ ಶಾಸ್ತ್ರದಲ್ಲಿ ಸಾರವತ್ತಾದುದದನ್ನು ತಿಳಿದವನು, **ಕಶ್ಚಿತ್** - ಯಾವನಾವರೂ (ಅಂದರೆ ಹಾಗೆ ಸಾರವನ್ನು ಗ್ರಹಿಸಿದವರು ಅತಿ ವಿರಳರು ಎಂಬ ಭಾವವು). **ಯದ್ಯಸ್ತಿ** - ಇದ್ದಿದ್ದೇಯಾದರೆ, **ಸಯೂಥಃ** - ಪರಿವಾರದೊಂದಿಗೆ ಸೇರಿದ ಅಂದರೆ ಶಿಷ್ಯಪ್ರಶಿಷ್ಯರೊಂದಿಗೆ ಸೇರಿದ, **ಸಃ** - ಅಂತವನು, **ನಃ** - ಪ್ರಪದನವನ್ನೇ ಧನವಾಗಿ ಉಳ್ಳ ನಮಗೆ, **ನಾಥಃ** - ಸ್ವಾಮಿಯು, ಅಂದರೆ ಅಂತವನನ್ನೂ ಆತನ ಶಿಷ್ಯಪ್ರಶಿಷ್ಯರನ್ನೂ ಸಹ ಸ್ವಾಮಿಯಾಗಿ ಭಾವಿಸುವೆವೆಂಬ ಭಾವವು.

"**ನಾಥಸ್ಸಯೂಥಸ್ಯನಃ**" ಎಂಬ ಪಾಠಾಂತರದಲ್ಲಿ **ಸಯೂಥಸ್ಯ** ಪರಿವಾರದೊಂದಿಗೆ ಸೇರಿದ, **ನಃ** - ನಮ್ಮಗಳಿಗೆ, (ಸಃ ಎಂದು ಅಧ್ಯಾಹಾರವಾಗಿ ಇಟ್ಟುಕೊಳ್ಳತಕ್ಕದ್ದು.) ಅಂತವನು, ನಾಥಃ - ಸ್ವಾಮಿಯು ಎಂಬರ್ಥವು. ಈ ಎರಡು ಪಾಠಗಳಲ್ಲಿ ಮೊದಲಿನ ಪಾಠವೇ ಉತ್ತಮವಾದುದು.

ತಾತ್ಪರ್ಯ.—ಈ ಸಾರನಿಷ್ಕರ್ಷಾಧಿಕಾರದ ಅಭಿಪ್ರಾಯವನ್ನೇ ಈ ಸಂಸ್ಕೃತ ಶ್ಲೋಕದ ಮೂಲಕ ಸಮರ್ಥನೆ ಮಾಡುವವರಾಗಿ, ಈ ಮೂರು ರಹಸ್ಯಗಳೇ ತುಂಬಾ ಸಾರವತ್ತಾದುದೆಂದು ಕೊಂಡಾಡುವವರ ಮೂಲಕ ಅವುಗಳ ನಿಷ್ಠೆಯಲ್ಲಿರತಕ್ಕವರು ಮಹಾನುಭಾವರೆಂಬದಾಗಿಯೂ, ಅಂತವರು ತುಂಬಾ ವಿರಳರೆಂಬದಾಗಿಯೂ, ಅಂಥವರನ್ನು ತಾವು "ನಾಥ" ಅಂದರೆ ತಮಗೆ ಸ್ವಾಮಿ ಎಂಬುವದಾಗಿಯೂ ಭಾವಿಸುವದಾಗಿ ಹೇಳುತ್ತಾರೆ. ಮೂಲ ಮಂತ್ರವೆಂಥಾ

ದ್ದೆಂದರೆ? **ಶಾಖಾನಾಮುಪರಿಸ್ಥಿತೇನ** - ವೇದಶಾಖೆಗಳಿಗೆಲ್ಲಾ ಮೇಲೆ ಇದ್ದುಕೊಂಡು, ಅವುಗಳಿಗೆ ಅಲಂಕಾರಭೂತವಾದಂಥಾ ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವದು. ಎಲ್ಲಿ ಪ್ರತಿಪಾದಿತ ವಾಗಿದೆ ಎಂದರೆ ಅಥರ್ವ ಶಿರಸ್ಸು ಮೊದಲಾದ ಉಪನಿಷತ್ತುಗಳಲ್ಲಿ ಪ್ರತಿ ಪಾದಿತವಾಗಿದೆ ಎಂಬಭಿಪ್ರಾಯವು. ಶ್ರೀ ನಾರಾಯಣೋಪನಿಷತ್ತಿ ನಲ್ಲಿ **"ಓಮಿತ್ಯಗ್ರೇವ್ಯಾಹರೇತ್, ನಮ ಇತಿ ಪಶ್ಚಾತ್ ನಾರಾಯ ಣಾಯೇತ್ಯುಪರಿಷ್ಟಾತ್"** ಎಂಬದಾಗಿಯೂ ಮೂಲಮಂತ್ರವು **"ಓಮಿ ತ್ಯೇಕಾಕ್ಷರಂ ನಮ ಇತಿ ದ್ವೇಕ್ಷರೇ, ನಾರಾಯಣಾಯೇತಿ ಪಂಚಾ ಕ್ಷರಾಣಿ"** ಎಂದು ಎಂಟಕ್ಷರಗಳುಳ್ಳದ್ದೆಂದೂ, ಆ ಮೂಲ ಮಂತ್ರೋ ಪಾಸಕನು **"ನಾರಾಯಣ ಸಾಯುಜ್ಯಮವಾಪ್ನೋತಿ"** ಎಂದೂ ಪ್ರತಿಪಾದಿತವಾಗಿರುತ್ತದೆ. ಪೆರಿಯಾಳ್ವಾರವರು ಇದರ ಮಹಿಮೆ ಯನ್ನು ಅವರು ಬರದ ತಿರುಪಲ್ಲಾಂಡಿನಲ್ಲಿ ಕೊಂಡಾಡಿರುತ್ತಾರೆ. ಶ್ರೀ ಪರಾಶರಭಟ್ಟರವರು ಅಷ್ಟಶ್ಲೋಕಿ ಎಂಬ ಸ್ತೋತ್ರದಲ್ಲಿ, ನಾಲ್ಕು ಶ್ಲೋಕಗಳಿಂದ ಇದರ ಮಾಹಾತ್ಮ್ಯೆಯನ್ನೂ ಎರಡು ಶ್ಲೋ ಕಗಳಿಂದ ದ್ವಯಮಂತ್ರದ, ಇನ್ನು ಎರಡು ಶ್ಲೋಕಗಳಿಂದ ಚರಮ ಶ್ಲೋಕ ಮಾಹಾತ್ಮ್ಯೆಯನ್ನೂ ವಿಶದೀಕರಿಸುತ್ತಾರೆ. ಶ್ರೀ ನಿಗ ಮಾಂತದೇಶಿಕರವರೇ ಒಂದೊಂದು ಅಧಿಕಾರದಿಂದ ಈ ಮೂರು ರಹಸ್ಯಗಳ ಸಮಸ್ತ ಅರ್ಥವನ್ನೂ ಬಹು ನಿಪುಣತರವಾಗಿ ವಿಸ್ತಾರ ವಾಗಿ ಅಪ್ಪಣೆ ಕೊಡಿಸಿರುತ್ತಾರೆ. ಇಂತಹ ಮೂಲ ಮಂತ್ರದಿಂದ ತನ್ನಿಷ್ಠನಿಗುಂಟಾಗುವ ಪ್ರಯೋಜನವೇನೆಂದರೆ ಹೇಳುತ್ತಾರೆ:— "ಲಬ್ಧಾತ್ಮಕಃ" ಅಂದರೆ ಈ ಜೀವಾತ್ಮನ ಸ್ವರೂಪ ಎಂಥಾದ್ದೆಂದು ಬಹು ಸ್ವಾರಸ್ಯವಾಗಿಯೂ ಸ್ಫುಟವಾಗಿಯೂ ತೋರಿಸುತ್ತದೆ. ತಾನೂ ಪರಮಾತ್ಮನಿಗೇನೇ ಶೇಷಭೂತನು, ಲಕ್ಷ್ಮೀಭಾಗವತರು ವಿನಾ ಮತ್ಯಾರಿಗೂ ಶೇಷಭೂತನಲ್ಲವು. ತನಗೂ ಕೂಡ ತಾನು ಶೇಷಭೂ ತನಲ್ಲವು ಎಂಬುದು ಮೂಲಮಂತ್ರದಿಂದ ವ್ಯಕ್ತಪಡುತ್ತದೆ. ಮೂಲ ಮಂತ್ರ ಜ್ಞಾನವಿಲ್ಲದವನೋ ಎಂದರೆ "ಅಸನ್ನೇವಸಭವತಿ" ಅಂತ ವನು ಅಸತ್ಪ್ರಾಯನೆಂದು ಭಾವವು. "ಲಬ್ಧಾದ್ಭುತಃ" ಎಂಬ ಪಾಠವೂ

ಉಂಟು. ಆವಾಗಲೂ ಇದೇ ಅಭಿಪ್ರಾಯವು. ಗೀತೆಯಲ್ಲಿ **"ಆಶ್ಚ ರ್ಯವತ್ಪಶ್ಯತಿಕಶ್ಚಿದೇನಂ"** (2. 29) ಎಂಬ ಶ್ಲೋಕದ ಪ್ರಕಾರ, ತನ್ನ ಆತ್ಮಸ್ವರೂಪವು ಎಂತಹ ಜ್ಞಾನಾನಂದಾಮಲತ್ವಶೇಷತ್ವಗ ಳಿಂದ ಕೂಡಿ ಎಷ್ಟು ಅದ್ಭುತವಾದುದೆಂದು ಯಾವನು ತಿಳಿಯುತ್ತಾನೋ ಎಂಬರ್ಥವು. ಅಥವಾ, ಅದ್ಭುತನೆಂದರೆ ಪರಮಾತ್ಮನು, ಲಬ್ಧಾ ದ್ಭುತಃ - ಹೊಂದಲ್ಪಟ್ಟ ಪರಮಾತ್ಮ ಸ್ವರೂಪ ಉಳ್ಳವನು ಅಂದರೆ ಪರಮಾತ್ಮನು ತನಗೂ ಮತ್ತು ಎಲ್ಲಾದಕ್ಕೂ ಶೇಷಿ ಎಂಬ ಯಾಥಾ ತ್ಮ್ಯವನ್ನರಿತವನೆಂಬರ್ಥವು. ಮೂಲ ಮಂತ್ರದಿಂದ ಮುಖ್ಯವಾಗಿ ಏನು ಏರ್ಪಡುತ್ತದೆ ಎಂದರೆ, ತನಗೂ ಪರಮಾತ್ಮನಿಗೂ ಶೇಷಶೇಷಿ ಸಂಬಂಧವೆಂಬುದು.

"ಶಾಖಾನಾಮುಪರಿಸ್ಥಿತೇನ" ಎಂಬುದು **"ಮೂಲೇನಮನು ನಾ"** ಎಂಬುವದಕ್ಕೆ ಮಾತ್ರವೇ ವಿಶೇಷಣವಲ್ಲದೆ ಮುಂದೆ **"ದ್ವಯೇ ನ"** ಎಂಬುವದಕ್ಕೂ ಕೂಡ ವಿಶೇಷಣವಾಗಿ ಭಾವಿಸತಕ್ಕದ್ದು. ಮೂಲ ಮಂತ್ರವು ಹೇಗೆ ಉಪನಿಷತ್ತುಗಳಲ್ಲಿ ಪ್ರತಿಪಾದ್ಯತವಾಗಿರುತ್ತದೋ ಹಾಗೆಯೇ ದ್ವಯಮಂತ್ರವೆಂಬ ಶರಣಾಗತಿ ಮಂತ್ರರತ್ನವೂ ಕಠೋ ಪನಿಷತ್ತು ಮುಂತಾದವುಗಳಲ್ಲಿ ಉಪಪಾದಿತವಾಗಿರುತ್ತದೆ. ಶ್ರುತಿ ಯಲ್ಲಿ ಈ ದ್ವಯ ಸ್ವರೂಪವು ಹೇಗೆ ಹೇಳಲ್ಪಟ್ಟಿರುತ್ತದೆಂದರೆ, "ಅದಕ್ಕೆ ಎರಡು ವಾಕ್ಯಗಳುಂಟು. ಅದರಲ್ಲಿ ಆರು ಅಥವಾ ಎಂಟು ಪದಗಳಿವೆ. ಅಕ್ಷರಗಳು ೨೫. ಮೊದಲು ವಾಕ್ಯದಲ್ಲಿ ಹದಿನೈದು ಅಕ್ಷರಗಳೂ, ಎರಡನೇದರಲ್ಲಿ ಹತ್ತೂ, ಅವೆ. ಮೊದಲನೇ ಪದ ದಲ್ಲಿ ಒಂಬತ್ತು ಅಕ್ಷರಗಳೂ, ೨, ೩, ೪ನೇ ಪದಗಳಲ್ಲಿ ಮೂರು ಮೂರೂ, ಐದನೇ ಪದದಲ್ಲಿ ಐದು, ೬ನೇ ಪದದಲ್ಲಿ ಎರಡು ಅಕ್ಷರಗ ಳಿವೆ" ಎಂದು ವೇದಾಂತದಲ್ಲಿ ಹೇಳಲ್ಪಟ್ಟಿದೆ. ಅದಕ್ಕೆ **ದ್ವಯ** ವೆಂಬದಾಗಿ ಏತಕ್ಕೆ ನಾಮಧೇಯವೆಂದರೆ, ಈ ಮಂತ್ರದಲ್ಲಿ ಎರಡು ವಾಕ್ಯಗಳಿದ್ದು, ಮೊದಲನೇ ವಾಕ್ಯವು ಶ್ರೀಮನ್ನಾರಾಯಣನೇ ಉಪಾಯವೆಂದೂ ಅಂದರೆ ಪ್ರಾಪಕನೆಂದೂ, ಎರಡನೇ ವಾಕ್ಯವು ಆ

ಶ್ರೀಮನ್ನಾರಾಯಣನೇ ಉಪೇಯವೆಂದರೆ ಪ್ರಾಪ್ಯನೆಂದೂ ಬೋಧಿಸುತ್ತಾದುದರಿಂದ, ಹಾಗೆ ಹೆಸರು. ಇನ್ನೊಂದು ಚಮತ್ಕಾರಾರ್ಥವೂ ತೋರಿಬರುತ್ತದೆ. ಈ ಉಪಾಯೋಪಾಯ ಭಾವಗಳನ್ನು ಬೋಧಿಸುವ ವಾಕ್ಯಗಳೆರಡರಲ್ಲೂ ನಾರಾಯಣಶಬ್ದವು ಶ್ರೀಮಚ್ಛಬ್ದಯುಕ್ತವಾಗಿರುವದರಿಂದ, ಈ ಉಪಾಯೋಪಾಯ ಭಾವಗಳಲ್ಲಿ ಇಬ್ಬರಾದ ಈಶರೀಶ್ವರರಾದ ಲಕ್ಷ್ಮೀನಾರಾಯಣರೂ ಹೇಳಲ್ಪಟ್ಟರೆಂಬ ಅರ್ಥ ಸ್ವಾರಸ್ಯವು ತೋರಿಬರುವದರಿಂದ, ಹೀಗೆ ದ್ವಯಭಾವವನ್ನು ಈ ಮಂತ್ರವು ಉಪಪಾದಿಸುವದರಿಂದಲೂ **ದ್ವಯ**ವೆನ್ನಿಸುತ್ತದೆಂದೂ, ಹೇಳಬಹುದು. ಆದರೆ **ದ್ವಯ** ಶಬ್ದಕ್ಕೆ ಎರಡು ಅವಯವಗಳುಳ್ಳದ್ದೆಂಬ ಯೋಜನೆಯಿಂದ ಎರಡು ವಾಕ್ಯಗಳುಳ್ಳದ್ದು ಎಂದು ಅರ್ಥ ವಿವರಿಸಬಹುದೇ ವಿನಾ, ಈ ವಿಧವಾದ ಅರ್ಥವನ್ನು ಕಲ್ಪಿಸಬಹುದೋ ಎಂದು ಆಕ್ಷೇಪಣೆ ತಂದರೆ, ವಾಕ್ಯಕ್ಕೆ ಬರೀ ವಾಕ್ಯದಲ್ಲೇ ತಾತ್ಪರ್ಯವಿಲ್ಲವೆಂದೂ, ಅರ್ಥಭಾವದಲ್ಲೂ ತಾತ್ಪರ್ಯ ಉಂಟೆಂದೂ ಸಮಾಧಾನ ಹೇಳುವೆವು. ವಾಕ್ಯಕ್ಕೆ ಬರೀ ವಾಕ್ಯದಲ್ಲೇ ತಾತ್ಪರ್ಯ ಎಂದಿಗೂ ಇಲ್ಲವು. ಶ್ರೀಭಾಷ್ಯದ ಎರಡನೇ ಶ್ಲೋಕದಲ್ಲಿ "ಪಾರಾಶರ್ಯವಚಸ್ಸುಧಾಂ" ಎಂಬಲ್ಲಿ, ಶ್ರುತಪ್ರಕಾಶಾಚಾರ್ಯರು **"ವಚಶಬ್ದಸ್ಯಾರ್ಥೇ ತಾತ್ಪರ್ಯಂ"** ವಾಕ್ಯಬ್ದಕ್ಕೆ ಅರ್ಥದಲ್ಲೇ ತಾತ್ಪರ್ಯವೆಂದೂ, **"ಶಾಸ್ತ್ರವಿತ್ ವೇದವಿತ್"** ಶಬ್ದಗಳಿಗೆ ಮೂಲಮಾತ್ರ ಪಠನ ಮಾಡಿದವರೆಂಬರ್ಥ ಮಾತ್ರವಲ್ಲದೆ, ಅದರ ಸ್ವಾರಸ್ಯಾರ್ಥ ಗ್ರಹಿಸಿದವರೆಂಬರ್ಥದಲ್ಲೇ ಅಭಿಪ್ರಾಯವೆಂದೂ, ಅಪ್ಪಣೆಕೊಡಿಸಿರುತ್ತಾರೆ. **ಅರ್ಥಾಭಿದಾಯಕಂಹಿವಾಕ್ಯಂ**, ಎಂದು ಹೇಳಿರುವ ಹಾಗೆ ವಾಕ್ಯಶಬ್ದವು ಅದರ ಅರ್ಥವನ್ನೂ ಸಹ ಬೋಧಿಸುತ್ತದೆ. ಕವಿಶ್ರೇಷ್ಠನೂ **ವಾಗರ್ಥಾವಿವ ಸಂಪೃಕ್ತೌ** ಎಂದು ಪ್ರಯೋಗಿಸಿರುತ್ತಾನೆ. ಆದುದರಿಂದ ಮೇಲಿನ ಅರ್ಥಾನುವಾದವು ಸಾಧುವೆಂದು ಗ್ರಹಿಸಬಹುದು. ಆದರೆ ಮೊದಲನೇ ಅಭಿಪ್ರಾಯವೇ ಶಾಸ್ತ್ರದಲ್ಲಿ ಉಪಪಾದಿತವಾಗಿರುವದರಿಂದ ಮುಖ್ಯವಾದುದೆಂದು ಗ್ರಹಿಸಬಹುದು. ಆ ದ್ವಯಮಂತ್ರದ ಮಾಹಾತ್ಮ್ಯೆಯು ಎಂಥಾದ್ದೆಂದರೆ ಹೇಳುತ್ತಾರೆ:— **ಸತ್ತಾಹೇತು**

ಸಕೃಜ್ಜಪ ಉಳ್ಳದ್ದು. ಆ ಶರಣಾಗತಿ ಮಂತ್ರರತ್ನವನ್ನು ಒಂದುಸಲ ಮಾತ್ರವೇ ಉಚ್ಚರಿಸಿದರೂ,

(1) **"ಯಸ್ಸಕೃದುಚ್ಚಾರ ಸ್ಸಂಸಾರ ತಾರಕೋಭವತಿ"** ಎಂದೂ,

(2) **'ಸತ್ಯಂ ತದ್ದ್ವಯಂ ಸಕೃದುಚ್ಚಾರಣೇ ಸಂಸಾರ ಮೋವಿಚನಂ ಭವತಿ"** ಎಂದೂ,

(3) **"ಸಕೃದುಚ್ಚಾರಿತಂ ಯೇನ ಕೃತಕೃತ್ಯ ಸ್ಸುಖೀ ಭವೇತ್"** ಎಂದೂ ಹೇಳಿರುವ ಹಾಗೆ ಸಂಸಾರದಿಂದ ಬಿಡಲ್ಪಟ್ಟವನಾಗಿ ಸತ್ತೆಯನ್ನು ಹೊಂದುವನೆಂದು ಹೇಳಿದುದರಭಿಪ್ರಾಯವೇನೆಂದರೆ :— ತಾನು ಲಕ್ಷ್ಮೀನಾರಾಯಣರಿಗೇನೇ ಶೇಷಭೂತನು, ಭಾಗವತರು ವಿನಾ ಇತರರಿಗಲ್ಲವೆಂಬ ಜ್ಞಾನಕ್ಕನುಸಾರವಾದ ದಾಸವೃತ್ತಿಯು, ಅದಕ್ಕಾಗಿ ಆತನಿಗೇನೇ ಸರ್ವವಿಧ ಕೈಂಕರ್ಯಗಳನ್ನೆಸಗುವದು, ಅದರಿಂದ ಲೋಕ ದಂಪತಿಗಳನ್ನು ಹೊಂದಿ ನಿರತಿಶಯಾನಂದವನ್ನು ಹೊಂದುವದು, ಇದೇ ಸತ್ತೆಯು. ಇಂತಹ ಸತ್ತೆಗೆ ಕಾರಣಭೂತವು ದ್ವಯಮಂತ್ರದ ಒಂದು ಸಲದ ಉಚ್ಚಾರಣೆಯು. ಇಂತಹ ಮಹಿಮೆಯು ದ್ವಯಕ್ಕಿರುವಾಗ **"ಸಕಲಂಕಾಲಂ ದ್ವಯೇನಕ್ಷಿಪೇ"** ನಿತ್ಯನೈಮಿತ್ತಿಕಾನುಷ್ಠಾನ ಆಹಾರ ನಿದ್ರಾ ಕಾಲಗಳನ್ನು ಬಿಟ್ಟು ಮಿಕ್ಕೆಲ್ಲಾ ಕಾಲಗಳನ್ನೂ ದ್ವಯ ಮಂತ್ರೋಚ್ಚಾರಣೆಯಿಂದ ಕಳೆಯಬೇಕೆಂದು ಆಚಾರ್ಯವರು ಹೇಳಿರುವ ವಿಧಿಗೆ ಪ್ರಯೋಜನವೇನು ? ಒಂದುಸಲ ಉಚ್ಚರಿಸುವದರಿಂದ ಈತನಿಗೆ ಬೇಕಾದ ಸತ್ತೆಯು

---

(1) ಒಂದುಸಲ ಅದನ್ನುಚ್ಚರಿಸುವದು ಸಂಸಾರದಿಂದ ರಕ್ಷಿಸುವ ಶಕ್ತಿಯುಳ್ಳದ್ದಾಗುತ್ತದೆಂಬರ್ಥವು.

(2) ಆ ದ್ವಯಮಂತ್ರವು ಒಂದುಸಲ ಉಚ್ಚರಿಸುವದರಲ್ಲಿ ಸಂಸಾರದಿಂದ ಬಿಡಿಸತಕ್ಕದ್ದಾಗುತ್ತದೆ.

(3) ಯಾವನಿಂದ ದ್ವಯಮಂತ್ರವು ಒಂದುಸಲ ಉಚ್ಚರಿಸಲ್ಪಡುವದೋ ಅವನು ಕೃತಕೃತ್ಯನಾಗಿ ನಿರತಿಶಯಾನಂದ ಸುಖ ಉಳ್ಳವನಾಗುತ್ತಾನೆ.

ಉಂಟಾಗುವದಾದುರೆ, ಯಾವಾಗಲೂ ಉಚ್ಚರಿಸಬೇಕಾದ ನಿಯಮವು ನಿರರ್ಥಕವಲ್ಲವೇ ಎಂಬ ಶಂಕಾ ತೋರಬಹುದು. ಶ್ರೀಭಾಷ್ಯಕಾರರವರೂ ಕೂಡ ಹೀಗೆಯೇ ಶರಣಾಗತಿ ಗದ್ಯದಲ್ಲಿ, **"ದ್ವಯಮರ್ಥಾನು ಸಂಧಾನೇನ ಸಹ ಸದೈವಂ ವಕ್ತಾ"** ಎಂದು ಹಾಗೆಯೇ ವಿಧಿಸಿರುತ್ತಾರೆ. ಆದರೆ ಇಲ್ಲಿ "ಅರ್ಥಾನು ಸಂಧಾನೇನ" ಎಂದು ಹೇಳಿರುವದರಿಂದ, ಅಂತಹ ಅರ್ಥಾನು ಸಂಧಾನದಿಂದ ಅದರ ಮಾಹಾತ್ಮ್ಯೆಯು ಇವನ ಜ್ಞಾನಕ್ಕೆ ವಿಷಯವಾಗಿ ಅದರಲ್ಲಿ ನಿರತಿಶಯ ಭಕ್ತಿಯೂ, ಉಂಟಾಗಿ, ಹಾಗೆಯೇ ವಾಚಾ ಕೈಂಕರ್ಯ ರೂಪದಲ್ಲಿ ಸದಾ ಪಠನ ಮಾಡತಕ್ಕದ್ದೆಂಬ ಭಾವವು ತನಗೆ ಉಂಟಾಗುತ್ತದೆ ಎಂಬ ತಾತ್ಪರ್ಯವು. ಆದುದರಿಂದ ಒಂದುಸಲ ಉಚ್ಚರಿಸಿದರೆ ಮೋಕ್ಷಕೊಡುವ ಶಕ್ತಿಯಿದ್ದರೂ, ತನ್ನ ಇತಿಕರ್ತವ್ಯತೆಗಳನ್ನು ನೆರವೇರಿಸುವದಕ್ಕೆ ಬೇಕಾದ ಕಾಲಗಳು, ಮತ್ತು ತನ್ನ ದೇಹಯಾತ್ರೆಗನುಗುಣವಾದ ಆಹಾರಾದಿ ಕಾರ್ಯಗಳಿಗೆ ಬೇಕಾದ ಕಾಲಗಳು ಹೋಗಿ ಮಿಕ್ಕ ಕಾಲದಲ್ಲಿ ಈ ಮಂತ್ರರತ್ನವನ್ನು ಯಾವಾಗಲೂ ಉಚ್ಚರಿಸುತ್ತಾ, **"ದ್ವಯಾನು ಸಂಧಾನ ಸಂತತಸ್ಫುರಿತಾಧರಃ"** ಎಂದು ಹೇಳಿರುವ ಹಾಗೆ ಯಾವಾಗಲೂ ಕೆಳಗಿನ ತುಟಿಯನ್ನು ದ್ವಯಾನು ಸಂಧಾನದಿಂದ ಅಲ್ಲಾಡಿಸುವನಾಗಿರಬೇಕೆಂದು ವಿಧಿಸಿರುತ್ತದೆ. ಮಿಕ್ಕ ಸಮಯಕ್ಕೆ ಇದೀಗ ಸಮಿಾಚೀನವಾದ ಕಾಲಕ್ಷೇಪವು. ಇಂತಹ ವಾಚಾ ಕೈಂಕರ್ಯದಿಂದ ಸ್ವಾಮಿಯು ಸುಪ್ರೀತನಾಗುವನೆಂಬ ಭಾವವು.

ಅನಂತರ ಚರಮಶ್ಲೋಕ ಮಾಹಾತ್ಮ್ಯೆಯನ್ನು ತಿಳಿಸುತ್ತಾರೆ. ವೇದಗಳಿಗೇನೇ ಅಲಂಕಾರಭೂತನಾದ ಅಂದರೆ ವೇದಗಳಲ್ಲಿ ಪ್ರತಿಪಾದ್ಯನಾದ ಪರಮ ಪುರುಷನಾದ ಲೀಲಾಸಾರಥಿಯಾದ ಶ್ರೀಕೃಷ್ಣನ ದಯಾರೂಪವಾದುದು ಈ ಚರಮ ಶ್ಲೋಕವು. ಅಥವಾ ವೇದಗಳಿಗೆ ಅಲಂಕಾರಭೂತವಾದ ಉಪನಿಷತ್ತುಗಳಲ್ಲಿ ಪ್ರತಿಪಾದ್ಯನಾದ ಪರಮಾತ್ಮನ ಶ್ರೀಕೃಷ್ಣನ ದಯಾರೂಪವಾದುದೆಂದೂ ಹೇಳಬಹುದು.

ಅರ್ಜುನನಿಗೆ ಶ್ರೀ ಕೃಷ್ಣನು ಲೀಲಾಸಾರಥಿಯೇ ವಿನಾ ಕರ್ಮವಶ್ಯ ನಾಗಿ ದಾಸ್ಯವೃತ್ತಿಯಿಂದ ಸಾರಥಿಯಲ್ಲಾ ಎಂದು ತಿಳಿಸುವದಕ್ಕಾಗಿ "ವಿಹಾರ ಸಾರಥಿ" ಎಂಬ ಪದ ಪ್ರಯೋಗವಮಾಡಿರುತ್ತಾರೆ. ಶೋಕ ಮೋಹಗಳಿಂದ ಪೀಡಿತನಾದ ಅರ್ಜುನನು ನನಗೆ ಒಳ್ಳೇ ಗತಿ ಯುಂಟೋ ಇಲ್ಲವೋ ಎಂಬ ಸಂದೇಹದಿಂದ ಖಿನ್ನನಾಗಿರುವಾಗ "**ಮಾಶುಚಸ್ಸಂಪದಂ ದೈವೀಂ ಅಭಿಜಾತೋಸಿ ಪಾಂಡವ**" "ನೀನು ದೈವೀಸಂಪತ್ತನ್ನೇ ಹೊಂದಿದವನು ಶೋಕಿಸಬೇಡ ಎಂದು ಸಮಾ ಧಾನವನ್ನು ಹೇಳಿ "**ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ**" "ಸಮಸ್ತ ಪಾಪಗಳಿಂದಲೂ ಬಿಡಿಸುವೆನು" ಎಂದು ಕೊನೆಗೆ ಹೇಳಿ ದ್ದುದ್ದೂ, ಇವೆಲ್ಲವೂ ಸ್ವಾಮಿಯ ದಯಾಪ್ರವಾಹದ ಮಾಹಾತ್ಮ್ಯವ ಲ್ಲವೇ ಎಂಬಭಿಪ್ರಾಯದಿಂದ ಚರಮಶ್ಲೋಕವು ಸಾರಥಿಯ ದಯಾ ರೂಪವಾದುದು ಎಂದು ಹೇಳಲ್ಪಟ್ಟಿರುವದು. ಈ ಚರಮ ಶ್ಲೋ ಕವನ್ನು ಯಾವಾಗ ಅರ್ಜುನನು ಕೇಳಿದನೋ, ಆಗ ಒಡನೆಯೇ ಇವನಿಗೆ ಶೋಕ ಮೋಹಗಳು ತೊಲಗಿ, ಆತನ ಹೇಳಿಕೆಯಲ್ಲಿ ಪೂರ್ಣ ವಿಶ್ವಾಸವು ಉಂಟಾಗಿ "**ನಷ್ಟೋ ಮೋಹಸ್ಸ್ಮೃತಿರ್ಲ ಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ । ಸ್ಥಿತೋಸ್ಮಿ ಗತ ಸಂದೇಹಃ ಕರಿಷ್ಯೇವಚನಂತವ**"॥ ತನಗೆ ಸಂದೇಹವೆಲ್ಲಾ ತೊಲಗಿತು, "ನಿರ್ಭ ರೋ ನಿರ್ಭಯೋಸ್ಮಿ" ಎಂದು ಹೇಳಿದುದರಿಂದ "**ವಿಹಾರ ಸಾರ ಥಿದಯಾ ಗುಂಭೇನ ವಿಸ್ರಂಭಿತಃ**" ಎಂದು ಪ್ರಯೋಗವಮಾಡಿ ರುತ್ತಾರೆ. ಚರಮ ಶ್ಲೋಕ ಅರ್ಥಸ್ವಾರಸ್ಯವನ್ನು ಗ್ರಹಿಸಿದುದಾದರೆ "**ರಕ್ಷಿಷ್ಯತೀತಿವಿಶ್ವಾಸಃ**" ಸ್ವಾಮಿಯು ರಕ್ಷಿಸಿಯೇ ರಕ್ಷಿಸುವನು ಎಂಬ ಮಹಾ ವಿಶ್ವಾಸವನ್ನುಂಟುಮಾಡದೇ ಇರುವುದಿಲ್ಲವೆಂಬ ಭಿಪ್ರಾಯವು.

"**ಸಾರಜ್ಞಃ**" ಹೀಗೆ ಈ ಮೂರರ ಮಾಹಾತ್ಮ್ಯೆಯನ್ನು ಮೇಲೆ ಹೇಳಿದ ತೆರದಿ ಗ್ರಹಿಸಿ ಸಾರವನ್ನು ತಿಳಿಯುವವನು ಅತಿ ದುರ್ಲಭವು. ಹಾಗೆ ತಿಳಿದವರು ಎಲ್ಲಿಯಾದರೂ ಒಬ್ಬರಿಬ್ಬರು ಇರ

ಬಹುದೆಂಬುವದನ್ನು ತಿಳಿಸುವದಕ್ಕಾಗಿ "**ಯದಿಕಶ್ಚಿದಸ್ತಿಭುವನೇ**" ಎಂದು ಪ್ರಯೋಗಿಸಿರುತ್ತಾರೆ. ಗೀತೆಯೂ ಈ ಅಭಿಪ್ರಾಯವನ್ನೇ ಸೂಚಿಸುತ್ತದೆ.

" ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿಸಿದ್ಧಯೇ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿತತ್ವತಃ "

"ಅನೇಕ ಮನುಷ್ಯರಲ್ಲೊಬ್ಬನು ಮುಕ್ತಿಗೋಸ್ಕರವಾಗಿ ಪ್ರಯತ್ನಿಸುವನು. ಹಾಗೆ ಪ್ರಯತ್ನಿಸುವ ಅನೇಕರಲ್ಲಿ ಒಬ್ಬನೀಗ ಯಥಾರ್ಥವಾಗಿ ನನ್ನನ್ನು ತಿಳಿದು ಮುಕ್ತಿಯನ್ನು ಹೊಂದುವನು." ಹಾಗೆಯೇ, ಮೇಲೆ ಹೇಳಿದ ಮೂರು ರಹಸ್ಯಗಳ ಅರ್ಥಸ್ವಾರಸ್ಯ ಮುಂತಾದವುಗಳನ್ನು ಗ್ರಹಿಸಿದ ಮಹಾನುಭಾವರು ಯಾರಾದರೂ ಇದ್ದರೆ, ಅವರನ್ನೂ, ಅವರ ಪರಿವಾರವನ್ನೂ, ಅಂದರೆ ಅವರ ಶಿಷ್ಯಪ್ರಶಿಷ್ಯರನ್ನೂ, ನನಗೆ ನಾಥರಾಗಿ ಅಂದರೆ ಸ್ವಾಮಿಯಾಗಿ ಭಾವಿಸುವೆನೆಂದು ಹೇಳಿರುತ್ತಾರೆ. ಅವರು ತನಗೆ ಸ್ವಾಮಿಗಳೆಂದು ನಾಥಶಬ್ದವನ್ನು ಪಯೋಗಿಸಿರುವದರಿಂದಲೂ, ಶಿಷ್ಯ ಪ್ರಶಿಷ್ಯರೂ ಕೂಡ ನಾಥರೆಂದು ಹೇಳಿರುವದರಿಂದಲೂ, ಸ್ವಾಮಿ ನಿಗಮಾಂತ ಮಹಾ ದೇಶಿಕರವರು "**ನಾಥಸ್ಸಯೂಥಸ್ಸನಃ**" ಎಂಬ ಪ್ರಯೋಗದಿಂದ ನಾಥಮುನಿಗಳನ್ನೂ ಶ್ರೀಆಳವಂದಾರನ್ನೂ ಯತಿರಾಜರನ್ನೂ ಮನಸ್ಸಿನಲ್ಲಿಟ್ಟವರಾಗಿ ತೋರುತ್ತದೆ. ಈ ಮೂರುರಹಸ್ಯಗಳ ಸಾರವನ್ನು ಗ್ರಹಿಸಿ ಸ್ವಾರಸ್ಯವನ್ನು ತೋರ್ಪಡಿಸಿದವರು ಪ್ರಥಮತಃ ಈ ಮಹನೀಯರಾದಪ್ರಯುಕ್ತ ಈ ಧ್ವನ್ಯರ್ಥವು ಯುಕ್ತವಾಗಿಯೇ ತೋರುತ್ತದೆ.

" ನಾಥೇನ ಮುನಿನಾ ತೇನ ಭವೇಯಂ ನಾಥವಾನಹಂ "

ಅಂತಹ ನಾಥಮುನಿಗಳಿಂದ ನಾನು **ನಾಥವಾ್ನ್** ಆದೆನು ಎಂಬದಾಗಿ ಗ್ರಂಥಕರ್ತರೇ ಹೇಳಿಕೊಂಡಿರುವದರಿಂದ, ಅಂತಹ ಅಭಿಪ್ರಾಯವನ್ನು ಮನದಲ್ಲಿಟ್ಟೇ **ನಾಥಸ್ಸಯೂಥಸ್ಯನಃ** ಎಂದು ಪ್ರಯೋಗಿಸಿರುತ್ತಾರೆಂದು ಧಾರಾಳವಾಗಿ ಹೇಳಬಹುದು. ಆಗ ಹೇಗೆ ಅರ್ಥ

ಹೇಳಬಹುದು ಎಂದರೆ ಈ ಮೂರರ ಸ್ವಾರಸ್ಯವನ್ನು ಗ್ರಹಿಸಿದವರು **ಯದಿಕಶ್ಚಿದ ಸ್ತ್ರಿಭುವನೇ,** ಲೋಕದಲ್ಲಿ ಯಾರಾದರೊಬ್ಬರು ಇದ್ದರೆ, ಸಃ - ಅಂಥಾವರು, **ನಾಥಃ** - ಶ್ರೀನಾಥಮುನಿಗಳು. ಅವರು **ಸಯೂಥಃ** - ಶಿಷ್ಯರಾದ ಯಾಮುನೇಯರನ್ನೂ, ಪ್ರಶಿಷ್ಯರಾದ ಶ್ರೀಭಾಷ್ಯಕಾರರನ್ನೂ ಉಳ್ಳವರು. ಈ ಮೂರು ಗುರುಗಳ ವಿಷಯದಲ್ಲೂ ಗ್ರಂಥಕರ್ತ್ತರಿಗೆ ತುಂಬಾ ಗೌರವ ಉಂಟೆಂಬುವದು ಗುರುಪರಂಪರಾಸಾರದ ಕೊನೆಯಲ್ಲಿರುವ ಮೂರು ಪಾಶುರಗಳಿಂದ ಈ ಮೂರುಜನ ಆಚಾರ್ಯರುಗಳನ್ನು ಕೊಂಡಾಡಿರುವದರಿಂದಲೇ ವ್ಯಕ್ತಪಡುತ್ತದೆ. ಅದೂ ಅಲ್ಲದೆ ಅವರುಗಳು ನಾಥರು ಎಂದು ಮಾತ್ರ ಹೇಳಿದ್ದರೆ ಸಾಕಾಗಿತ್ತು. ಆದರೆ **ಸಯೂಥ**ವೆಂಬ ಪ್ರಯೋಗವನ್ನೂ ಸೇರಿಸಿರುವದರಿಂದ ಗ್ರಂಥಕರ್ತ್ತರು ಈ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟೇ ಬರೆದಿರುತ್ತಾರೆಂಬುವದು ತೋರಿಬರುತ್ತದೆ.

ಶ್ರೀಮತೇ ನಿಗಮಾಂತ ಮಹಾ ದೇಶಿಕಾಯನಮಃ

ಶ್ರೀಮದ್ರಹಸ್ಯತ್ರಯಸಾರದ ಎರಡನೇದಾದ ಸಾರನಿಷ್ಕರ್ಷಾಧಿಕಾರಕ್ಕೆ

ತಿರುನಾರಾಯಣಪುರಂ ವಿಜಯರಾಘವಶರ್ಮಕೃತ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳು ಸಮಾಪ್ತವಾದುವು.

ಪುಟ.	ಪಙ್ತಿ.	ಅಶುದ್ಧ.	ಶುದ್ಧ.
130	1	ಪ್ರತಿಥಾಂ	ಪ್ರುಥಿತ್ಯಾಂ
135	5	ಅಪ್ಪುಳ್ಳಾರವರು	ಅಪ್ಪುಳ್ಳಾರವರು
137	16	ಮಾಡಿದಪರು	ಮಾಡಿದವರು
139	5	ವಾ ಅಕಿಂಚನ	ಅಕಿಂಚನ
157	1	ವರಯ್	ಯುವರ್
„	11	ಭೇದಾದಿಗಳೂ	ಭೋಗಾದಿಗಳೂ
159	4	ಈ ವನೂ	ಈ ಜೀವನೂ
„	8	ಅನಾರ್ಯವಿದ್ಯೆ	ಅನಾದ್ಯವಿದ್ಯೆ
162	11	ತ್ತೋರ್ರಿಸುವರು,	ತೋರಿಸುವುದು.
169	11	ಇವನಿಗೆ ಇವನಿಗೆ	ಇವನಿಗೆ
181	8	ಶ್ರೀಯಃಪತಿ	ಶ್ರಿಯಃಪತಿ
„	15	ಪರಾಶರಭಟ್ಟರು	ಕೂರೇಶರು
183	5	ಸ್ವಾಮಿಯು	ಸ್ವಾಮಿಯು,
185	10	ಗುರೂಪಸದಗಳ	ಗುರೂಪಸದನಗಳ
192	10	ಎನು	ಏನು
199	2	ಬುದಿ	ಬುದ್ಧಿ
„	3	ಪ್ರಾಭಾಕರ್ದ	ಪ್ರಾಭಾಕರ
207	3	ಮರಿನ್ಥು	ಮರಿನ್ದು
236	4	ಉಪಾಧೇಯ	ಉಪಾದೇಯ
237	6	ಅಧಿಕಾರದ್ವಿತೀಯಃ	ಅಧಿಕಾರೋದ್ವಿತೀಯಃ

ನಮ್ಮಲ್ಲಿ ದೊರೆಯುವ ಗ್ರಂಥಗಳು.

ಶ್ರೀಮನ್ನಿಗಮಾಂತ ಮಹಾದೇಶಿಕರವರ

೧. ಅಭೀತಿಸ್ತವವು— ಇದಕ್ಕೆ "ಆಚಾರ್ಯಹೃದಯಾನ್ವೇಷಿಣೀ" ಎಂಬ ಕನ್ನಡ ಪ್ರತಿಪದಾರ್ಥದ ತಾತ್ಪರ್ಯಗಳೂ. ಕ್ರಯ .... 12 ಆಣೆಗಳು

೨. ಶ್ರೀಮದ್ರಹಸ್ಯತ್ರಯಸಾರ ಉಪಕ್ರಮವು. ಗುರುಪರಂಪರಾಸಾರವು— ಇದಕ್ಕೆ "ಆಚಾರ್ಯಹೃದಯಾನ್ವೇಷಿಣೀ" ಎಂಬ ಕನ್ನಡ ಅರ್ಥ ತಾತ್ಪರ್ಯಗಳು. ಇದರಲ್ಲಿ ಆಳ್ವಾರಾಚಾರ್ಯರುಗಳ ಸಂಗ್ರಹ ಚರಿತ್ರೆಗಳೂ ಇವೆ.. ಕ್ರಯ .... 12 ಆಣೆಗಳು

೩. ಶ್ರೀಸ್ತುತಿ ಎಂಬ ಶ್ರೀರಂಗನಾಯಿಕೀ ಸ್ತೋತ್ರವು— ಇದಕ್ಕೆ "ಆಚಾರ್ಯಹೃದಯಾನ್ವೇಷಿಣೀ" ಎಂಬ ಪ್ರತಿಪದಾರ್ಥ ತಾತ್ಪರ್ಯಗಳೂ. ಕ್ರಯ .... 12 ಆಣೆಗಳು

೪. ಶ್ರೀಮದ್ರಹಸ್ಯತ್ರಯಸಾರದ ಉಪೋದ್ಘಾತಾಧಿಕಾರ ಮತ್ತು ಸಾರ ನಿಷ್ಕರ್ಷಾಧಿಕಾರಗಳು....
ಕ್ರಯ 9 ಆಣೆಗಳು

೫. ಶ್ರೀಮದ್ರಹಸ್ಯತ್ರಯಸಾರದ ಪ್ರಧಾನ ಪ್ರತಿತಂತ್ರಾಧಿಕಾರ ಅರ್ಥ ಪಂಚಕಾಧಿಕಾರಗಳು ಒಂದು ಸಂಚಿಕೆಯಲ್ಲಿ ಪ್ರಿಂಟಾಗುತ್ತಿದೆ. ....

ಮುಂಗಡವಾಗಿ ಮೂರು ರೂಪಾಯಿಗಳನ್ನು ಕಳುಹಿಸುವವರಿಗೆ ಮುಂದೆ ಅಚ್ಚಾಗುವ ಪುಸ್ತಕಗಳು ಪೋಸ್ಟು ಚಾರ್ಜು ಇಲ್ಲದೆ ಕಳುಹಿಸಲ್ಪಡುವವು.

ಸಿ. ಯಂ. ವಿಜಯರಾಘವಾಚಾರ್,
ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟರ್,
ಬಸವನಗುಡಿ, ಬೆಂಗಳೂರು ಸಿಟಿ.